

స్మృతి

ಮುದ್ರಕರು : ಪಯೋನಿಧಿ ಪ್ರಿಂಟರ್ಸ್, ಬೆಂಗಳೂರು-4.

ಪೂಜ್ಯ ಶ್ರೀ ವಿ. ಸೀತಾರಾಮಯ್ಯ ಅವರಿಗೆ

ನಮಸ್ಕಾರಪೂರ್ವಕ

ಪಿ.ಸ. ಮಂಗಳ

೨೨.೧೨.೧೯೭೯.

ಸ್ಮೃತಿ

ಶ್ರೀ ಸಿ. ನರಸಿಂಹಮೂರ್ತಿ ಸ್ಮರಣ ಗ್ರಂಥ

ಸಂಪಾದಕಿ:
ಚಿ. ನ. ಮಂಗಳಾ

೧೯೭೯

ಮುದ್ರಕರು: ಪಯೋನಿಧಿ ಪ್ರಿಂಟರ್ಸ್, ಬೆಂಗಳೂರು–೪.

Smruthi: Sri C. Narasimha Moorty Memorial Volume 1979

Edited and Published by:
C. N. Mangala
'Sri Narasimha Kripa'
133, 7th Main, V Block
Jayanagar, BANGALORE-560041.

Phone: 41474

ವಿಷಯಾನುಕ್ರಮಣಿಕೆ

ಸ್ಮರಣೆ

ಸಮಾಲೋಚನೆ

ಭಾವಚಿತ್ರಗಳು

'S I M'

SPECTRUM

—

ಅಪ್ಪ - ಅಮ್ಮ

ಅವರಿಗೆ

ಪ್ರೀತಿಯಿಂದ

ಮಂಗಳ
ಲಕ್ಷ್ಮಿ
ಚಂದ್ರು
ವಾಣಿ

ತಂದೆ-ತಾಯಿಯರಂತೆ ನಮಗೆ ಮಾರ್ಗದರ್ಶಕರಾಗಿರುವ

ದಾದಾ ಗೋಕಾಕ್ ಮತ್ತು ವೈನಿ ಶಾರದಾಬಾಯಿ ಗೋಕಾಕ್

ಅವರಿಗೆ ನಮ್ಮ ಪ್ರೀತಿಯ ಕೃತಜ್ಞತೆಗಳು

ರಾಗ ॥ ಹಂಸಧ್ವನಿ ॥ ತಾಳ ॥ ಆದಿತಾಳ ॥

ಆ : ಸ ರಿ$_2$ ಗ$_3$ ಪ ನಿ$_3$ ಸ̇ ಅ : ಸ̇ ನಿ$_3$ ಪ ಗ$_3$ ರಿ$_2$ ಸ

ಪಲ್ಲವಿ : ಮಹಾಗಣಪತಿಂ ಸದಾ ಭಜೇಹಂ (ಮಹಾ)

ಅನುಪಲ್ಲವಿ : ವಿಘ್ನವಿನಾಶಕಂ ಮಂಗಳಕಾರಕಂ
ಬುದ್ಧಿಪ್ರದಾಯಕಂ ಸಿದ್ಧಿವಿನಾಯಕಂ (ಮಹಾ)

ಚರಣ : ನಾದಮಧ್ಯ ಪ್ರತಿಷ್ಠಿತಂ ದೇವದೇವಂ
ಸಾಮ ಘೋಷಪ್ರಿಯಂ ವಿಶ್ವವಂದ್ಯಂ
ಗದ್ಯಪದ್ಯಸುಧಾರ್ಣವಂ
ವೀಣಾಗಾನವಿಲೋಲಂ ಶಿವಶಕ್ತಿಕುಮಾರಂ (ಮಹಾ)

ಪ ಲ್ಲ ವಿ

1	‖ ಸ ಸಾ ರಿ ಗ ಪ ನಿ ಸ	। ಸಸಾನಿ	। ಪ ಗ ರಿ ಸ	‖
	‖ ಮಹಾ ಗಣ ಪ ತಿಂ.	। ಸದಾಭ	। ಜೇ . ಹಂ .	‖
2	‖ ಸರಿಗರಿ ಸರಿಗರಿ ಸರಿಗಪ ನಿಸ	। ಸಸಾನಿ	। ಪ ಗ ರಿ ಸ	‖
	‖ ಮ. . . ಹಾ . . ಗ. ಣ . ಪತಿಂ	। ಸದಾಭ	। ಜೇ . ಹಂ .	‖
3	‖ ಸರಿಗಪ ಗರಿಸರಿ ಸರಿಗಪ ನಿಸ	। ಗರಿಸನಿ ಪನಿರೀ	। ಸನಿಪಗ ರಿ ಸ	‖
	‖ ಮ. . . ಹಾ. . . ಗ . ಣ . ಪತಿಂ	। ಸ . . . ದಾ . ಭ	। ಜೇ , . ಹಂ .	‖
4	‖ ಸರಿಗ ರಿಗಪ ಗಪನಿ ಪನಿಸ ನಿಸರೀ	। ಗರಿಸ ರಿಸನಿ ಸನಿ	। ಪ ನಿಪಗ ಪ ಗ ರೀ	‖
	‖ ಮ. . ಹಾ.. ಗ . . ಣ. . ಪ.ತಿಂ	। ಸ . . ದಾ.. ಭ .	। . ಜೇ.. ಹಂ . .	‖
5	‖ ಪ ಗಾ ರಿ ಸ ರಿ ಸಾ	। ಸಾಂರಿ ಸ ನಿ ಪಾ	। ಗ ರಿ ಗಾ	‖
	‖ ಮಹಾ ಗ ಣ ಪ ತಿಂ	। ಸ . . ದಾ . ಭ	। ಜೇ . ಹಂ .	‖

ಅ ನು ಪ ಲ್ಲ ವಿ

1	‖ ಪ ಗ ಪ ನಿ ಸಾ ಸ ಸ	। ಗಾ ಗ ರಿ	। ಸರಿಗಾ ರಿಸ	‖
	‖ ವಿ . ಘ್ನ ವಿ ನಾ ಶ ಕಂ	। ಮಂ ಗ ಳ	। ಕಾ . . ರಕಂ	‖
2	‖ ಸನಿಪಗ ಪನಿ ಸಾರಿಸ	। ಸರಿಗಪ ಗರಿ	। ಸರಿ ಸರಿಗರಿ ಸಸ	‖
	‖ ವಿ . . . ಘ್ನವಿನಾಶಕಂ	। ಮಂ. . . ಗಳ	। ಕಾ. . . . . ರಕಂ	‖
3	‖ ಸ ಗ ರಿ ಸ ಸ ನಿ ಪಾ ನಿ ರಿ	। ಸ ನಿ ಪ ಗ	। ಪ ಗ ರಿ ಸ	‖
	‖ ಬು.ದ್ಧಿಪ್ರ ದಾ . . ಯಕಂ	। ಸಿ . ದ್ಧಿ ವಿ	। ನಾ . ಯಕಂ	‖
4	‖ ಸರಿಗಪ ಗರಿ ಸರಿ ಸರಿಗರಿ ಸನಿಸಾ	। ಗರಿಸನಿ ರಿಸನಿಪ	। ಸನಿಪಗ ರಿ ಸ	‖
	‖ ಬು. . . ದ್ಧಿಪ್ರದಾ. . . . . ಯ.ಕಂ	। ಸಿ . . . ದ್ಧಿ.ವಿ.	। ನಾ . . . ಯಕಂ	‖

ಚಿಟ್ಟೆ ಸ್ವರ

|| ಸರಿಸನಿ ಸರಿಸನಿ ಸರಿಸನಿ ಸರಿಗಾ | ಗಪಗಪ ಗಗರೀ | ನಿರಿಗರಿ ನಿರಿಸಾ ||

|| ಗರಿಸಾ ಪನಿಸಾ ಪನಿರೀ ಪನಿಗಾ | ಗರಿರಿಸ ಸನಿನಿಪ | ಪಗಗರಿ ರಿಸಸನಿ ||

(ಮಹಾ)

ಚರಣ

|| ಗಾರಿ ನಿ ೯ ರಿ ಗಾ | ಸನಿಪಾ ಗರಿ | ಸಾನಿಪ ಸಾ ಸ ||
|| ನಾದ ಮ . ಧ್ಯಪ್ರ. | ತಿ . . ಷ್ಠಿತಂ | ದೇ . ವ ದೇವಂ ||

|| ಗಾ ರಿ ಗ ಪಾ ಗಾ | ೯ ಸನಿ ಪಾ | ಪಾ೯ಗ ಪ ಪ ||
|| ಸಾ . ಮಘೋಷ | . ಪ್ರಿ . ಯಂ | ವಿ . ಶ್ವ ವಂದ್ಯಂ ||

|| ಗರಿಗ ಪಗಪ ಸ ಪಾ ಪ ಸ ಸನಿರೀ | ಸನಿಪಪ ಸಾಸಾ | ಸನಿಪಪ ರಿಸಾರಿ ||
|| ಗ.ದ್ಯ ಪ.ದ್ಯ ಸುಧಾರ್ಣ ವಂ ವೀಣಾ | ಗಾ.ನವಿ ಲೋಲಂ | ಶಿವಶಕ್ತಿ ಕುಮಾರಂ ||

ವಿದ್ಯುಲ್ಲತಾ ಎನ್. ನಗರ್.

—o—

ರಾಗ ‖ ನಾಟ ‖ ತಾಳ ‖ ಏಕತಾಳ ‖

ಆ: ಸರಿ$_3$ ಗ$_3$ಮ$_1$ ಪದ$_3$ ನಿ$_3$ ಸ̇ ಅ: ಸ̇ ನಿ$_3$ ಪ ಮ$_1$ ರಿ$_3$ ಸ

ಪಲ್ಲವಿ : ವಾಣಿ ವೀಣಾ ಪುಸ್ತಕ ಧಾರಿಣಿ ಪ್ರಸೀದ ಪ್ರಸೀದ (ವಾಣಿ)

ಅನುಪಲ್ಲವಿ : ವಿದ್ಯಾದಾಯಿನಿ ಕವಿತಾದಾಯಿನಿ ಪ್ರತಿಭಾದಾಯಿನಿ ಜ್ಞಾನದಾಯಿನಿ
ಭಾವರಾಗಲಯ ಗಾನವಿಲೋಲಿನಿ ಹೃದಯನಿವಾಸಿನಿ ಪ್ರಸೀದ ಪ್ರಸೀದ
(ವಾಣಿ)

ಚರಣ : ವರ್ಣಪದ ವಾಕ್ಯಾರ್ಥ ಸ್ವರೂಪಿಣಿ ಅನಾದಿನಿಧನೇ ಅನಂತರೂಪಿಣಿ
ಮಂಜುಳಭಾಷಿಣಿ ಶಿವಶಕ್ತಿರೂಪಿಣಿ ಭಗವತಿ ಭಾರತಿ ಪ್ರಸೀದ ಪ್ರಸೀದ
(ವಾಣಿ)

ಪ ಲ್ಲ ವಿ

1 ‖ ರೀ ಸಾೕ ನೀ ಸಾ ‖ ಸಾರಿ ಗ ಮಾಪಪ ‖
‖ ವಾ.. ಣಿ. ವೀಣಾ ‖ ಪುಸ್ತ ಕ ಧಾ ರಿ ಣಿ ‖
‖ ಪಾೕ ಮಾೕ ಮಾ ‖ ಮರಿಮ ರೀ ೕ ಸಾ ‖
‖ ಪ್ರ . ಸೀ . ದ ‖ ಪ್ರ . . ಸೀ . ದ ‖

2 ‖ ಸರಿ ರೀಗರಿ ಸಾ ಸನಿಸಾ ‖ ಸಾರಿಗ ಮಾಪಪ ‖
‖ ವಾ . . . . ಣಿ ವೀಣಾ ‖ ಪುಸ್ತಕ ಧಾರಿಣಿ ‖
‖ ಸ̇ ನಿ ಪ ಮಾ ಮಮಾ ‖ ಮರಿಮ ರೀ ಸಾ ‖
‖ ಪ್ರ . . ಸೀ . ದ ‖ ಪ್ರ . . ಸೀ. ದ . ‖

3 ‖ ಗಮಪ ಗಮಪ ಮಾಪಾ ‖ ಪಾದನಿ ಸ̇ಾಸ̇ಸ̇ ‖
‖ ವಾ . . ಣೀ . . ವೀಣಾ ‖ ಪುಸ್ತಕ ಧಾರಿಣಿ ‖
‖ ರಿ̇ ೕ ೕ ಸ̇ಾ ೕ ನಿ ಪ ‖ ಮರಿಮ ರೀ ಸಸ ‖
‖ ಪ್ರ . . ಸೀ . . ದ ‖ ಪ್ರ . . ಸೀ . . ದ ‖

(ವಾಣಿ)

ಅನುಪಲ್ಲವಿ

1 ॥	ದಾ ನಿ ॰ ಸಾ ಸ ಸ	॥	ಸರಿಗಮ ರೀ ಸಸ	॥
॥	ವಿ ದ್ಯಾ ದಾ ಯಿ ನಿ	॥	ಕವಿತಾ . ದಾಯಿನಿ	॥
2 ॥	ಸನಿಪಮ ಗಮಪನಿ ಸಾಸಸ	॥	ಸರಿಗಮ ರೀಸಸ	॥
॥	ವಿ . . . ದ್ಯಾ. . . ದಾಯಿನಿ	॥	ಕವಿತಾ . ದಾಯಿನಿ	॥
3 ॥	ಗಮ ಪಮ ರೀಸಸ	॥	ನೀ ॰ ನಿ ಸಾ ಸ ಸ	॥
॥	ಪ್ರತಿ ಭಾ . ದಾಯಿನಿ	॥	ಜ್ಞಾ . ನ ದಾಯಿನಿ	॥
4 ॥	ರೀ ರಿ ಸಾ ನಿಪಮ	॥	ಗ ಮ ಪಮ ಪಾಪಪ	॥
॥	ಭಾ ವ ರಾಗಲಯ	॥	ಗಾ . ನವಿ ಲೋಲಿನಿ	॥
5 ॥	ಸನಿಪಮ ಪಾಪಮ	॥	ಮಗಮ ಪಾ ॰ ಮ ರಿ ॰ ಸಸ	॥
॥	ಹೃದಯನಿ ವಾಸಿನಿ	॥	ಪ್ರ . . ಸೀ . ದ ಪ್ರಸೀದ	॥
6 ॥	ಸ ರಿ ಗಮಾ ರಿ ಸ ನಿ	॥	ಪನಿಸನಿ ಪ ಮ ಗ ಮ	॥
॥	ಭಾ . ವ ರಾ ಗ ಲ ಯ	॥	ಗಾ.ನವಿ ಲೋ ॰ ಲಿ ನಿ	॥
7 ॥	ಸಾರಿಸ ನೀಸನಿ ಪ ಮ:ಪಾಪಮ	॥	ಮಗಮ ಪಾ ॰ ಮರಿ ॰ ಸ ಸ	॥
॥	ಹೃ. . ದ . . ಯ ನಿ ವಾ ಸಿ ನಿ	॥	ಪ್ರ . . ಸೀ ॰ ದ ಪ್ರಸೀದ	॥

ಚಿಟ್ಟೆಸ್ವರ

॥	ರಿ ಸ ನಿ ಸ ರಿ ಸ ನಿ ಸ	॥	ರಿ ಸ ನಿ ಸ ರಿ ಸ ರೀ	॥
॥	ಗಮಮಪಪ ನಿ ಪ ಮ	॥	ಗಮಮ ಗಮಮರೀ (ಪ ಮಗ)	॥
॥	ರಿಸರೀ ಗಮರೀ	॥	ರಿ ಸ ರೀ ಗಮ ರೀ	॥
॥	ರಿಸಾ ಸನೀ ನಿಪ	॥	॰ ಪಮಾ ಮರಿರಿಸ	॥

(ವಾಣಿ)

ಚ ರ ಣ

	॥ ಸಾ ಪ ಮ ಮ ಮಾ ಮ	॥ ಮ ರಿ ಗ ಮ ರೀ ಸ ಸ	॥
	॥ ವ ರ್ಣ ಪ ದ ವಾ .	॥ ಕ್ಯಾ . ರ್ಥ ಸ್ವ ರೂಪಿಣೆ	॥
	॥ ಸರೀಸ ಗಮಪಾ	॥ ಪ ಮ ಗ ಮ ಪಾ ಪ ಪ	॥
	॥ ಅನಾದಿ ನಿಧನೇ	॥ ಅ ನ ಂ ತ ರೂ ಪಿ ಣೆ	॥
1	॥ ದಾದನಿ ಸಾ ಸ ಸ	॥ ಸರಿಗಮ ರೀಸಸ	॥
	॥ ಮಂಜುಳ ಭಾಷಿಣೆ	॥ ಶಿವಶಕ್ತಿ ರೂಪಿಣೆ	॥
2	॥ ಸನಿಪಮ ಗಮಪನಿ ಸಾಸಸ	॥ ಸರಿಗಮ ರೀಸಸ	॥
	॥ ಮಂ. . ಜು. ಳ . ಭಾಷಿಣೆ	॥ ಶಿವಶಕ್ತಿ ರೂಪಿಣೆ	॥
	॥ ಸನಿಪಮ ಪಾಪಮ	॥ ಮಗಮ ಪಾಮ ರಿ ಸ ಸ	॥
	॥ ಭಗವತಿ ಭಾ ರ ತಿ	॥ ಪ್ರ . . ಸೀ ದ ಪ್ರ ಸೀ ದ	॥
4	॥ ಸಾರಿಸ ನೀಸನಿ ಪಮಪಾಪಮ	॥ ಮಗಮ ಪಾಮ ರಿ ಸ ಸ	॥
	॥ ಭ . . ಗ . . ವತಿಭಾರತಿ	॥ ಪ್ರ . . ಸೀ ದ ಪ್ರ ಸೀ ದ	॥

ವಿದ್ಯುಲ್ಲತಾ ಎನ್. ನಗರ್

ನಿವೇದನೆ . . . .

ಇಪ್ಪತ್ತು ವರುಷಗಳ ಹಿಂದೆ — 1959 ರ ಒಂದು ಸಂಜೆ. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ನಾನು ಎಂ.ಎ. ತರಗತಿಯಲ್ಲಿ ಓದುತ್ತಿದ್ದೆ. ಕಾಲೇಜಿಂದ ಮನೆಗೆ ಬಂದಾಗ ನನ್ನ ತಾಯಿ ಮನೆಯಲ್ಲಿ ಒಬ್ಬರೇ ಇದ್ದರು. ಬೆಳಿಗ್ಗೆ ಆರೋಗ್ಯವಾಗೇ ಇದ್ದವರು ನಾನು ಬರುವ ವೇಳಗೆ ಅಸ್ವಸ್ಥರಾಗಿದ್ದರು. ನಾನು ಬಂದ ಕೂಡಲೆ ನನ್ನನ್ನು ಕರೆದು "ನನಗೆ ಮೈ ಅಷ್ಟು ಸರಿಯಿಲ್ಲ. ನಿನಗೆ ಒಂದು ಮಾತು ಹೇಳಬೇಕು. ಬಹಳ ಹಿಂದೆಯೇ ಹೇಳಬೇಕೆಂದಿದ್ದೆ, ಇವತ್ತು ಹೇಳುತ್ತೇನೆ. ನಿನ್ನ ತಂದೆ ತುಂಬ ದೊಡ್ಡ ವ್ಯಕ್ತಿ. ಮಕ್ಕಳು ನಿಮಗೆ ತಿಳಿದಿರಬೇಕು" ಎಂದು ಹೇಳಿ ನನ್ನ ಕೈಗೆ ಕಾಗದ ಪತ್ರಗಳ ಒಂದು ಕಟ್ಟು ಕೊಟ್ಟರು. ನಾನು ಅದನ್ನು ಹಾಗೇ ಇಟ್ಟು ಮೊದಲು ತಾಯಿಗೆ ಔಷಧಿ ತರಲು ಓಡಿದೆ. ನನ್ನ ತಂದೆ ದೊಡ್ಡ ವ್ಯಕ್ತಿ— ಹಿರಿಯ ಚೇತನ—ಅವರದು ದೇವರಂಥ ವ್ಯಕ್ತಿತ್ವ. ಅಷ್ಟೇ ಹಿರಿಯ ವ್ಯಕ್ತಿತ್ವ ನಮ್ಮ ತಾಯಿಯದು. ಇವರ ಹಿರಿಮೆಯನ್ನು ನಾವು ಮಕ್ಕಳು ಆದಷ್ಟು ಅರಿಯಲು ಪ್ರಯತ್ನಿಸಿದ್ದೇವೆ. ಇಂಥ ತಂದೆ ತಾಯಿಯರ ಮಕ್ಕಳು ನಾವು ಎಂಬ ಹೆಮ್ಮೆ ನಮಗೆ, ತೃಪ್ತಿ ನಮಗೆ.

1968 ರಲ್ಲಿ ನಮ್ಮ ತಂದೆ ಸ್ವಾಮಿಯಲ್ಲಿ ಸೇರಿ ಹೋದಾಗ ಅವರ ನೆನಪಿಗಾಗಿ, ಅವರು ಪ್ರೀತಿಯಿಂದ ಪೋಷಿಸುತ್ತಿದ್ದ ಧ್ಯೇಯಗಳನ್ನು ಕಾರ್ಯಾಚರಣೆಯಲ್ಲಿ ತರಲು ಯುವ ಜನಾಂಗದಲ್ಲಿ ಸಾಹಿತ್ಯ-ಕಲೆ-ಸಂಸ್ಕೃತಿಗಳ ಬಗೆಗೆ ಆಸಕ್ತಿ ಮೂಡಿಸಲು, 'ಕಲಾ ಭಾರತಿ' ಎಂಬ ಸಾರ್ವಜನಿಕ ಸಂಸ್ಥೆಯನ್ನು ಆರಂಭಿಸಿದೆವು. ನಮ್ಮ ತಾಯಿ ಇದರ ಪ್ರಥಮ ಪೋಷಕರು. ಹಲವಾರು ಹಿರಿಯರು ಮಿತ್ರರು ಇದರ ಸದಸ್ಯರಾದರು. ಡಾ॥ ವಿ. ಕೃ. ಗೋಕಾಕರು ಸಂಸ್ಥೆಯ ಪ್ರಥಮ ಅಧ್ಯಕ್ಷರು. ಡಾ॥ ಅ. ನ. ಕೃಷ್ಣರಾಯರು ಸಂಸ್ಥೆಯನ್ನು ಉದ್ಘಾಟಿಸಿದರು. ಡಾ॥ ವಿ. ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಈ ಹತ್ತು ವರುಷಗಳಿಂದ 'ಕಲಾಭಾರತಿ' ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಾಹಿತ್ಯ-ಕಲೆ-ಸಾಂಸ್ಕೃತಿಕ ಚಟುವಟಿಕೆಗಳಿಗೆ ಪೋಷಕವಾಗಿದೆ. ಯುವ ಜನಾಂಗದ ಪ್ರತಿಭೆಗೆ ಪುರಸ್ಕಾರ ನೀಡಿದೆ.

ಸಂಸ್ಥೆಗೆ ಹತ್ತು ವರುಷ ತುಂಬಿರುವಾಗ ಈ ಸಂಸ್ಥೆಯ ಆರಂಭಕ್ಕೆ ಕಾರಣರಾದ, ಎಂದಿಗೂ ನಮಗೆ ಸ್ಫೂರ್ತಿದಾಯಕರಾದ ನಮ್ಮ ಬಾಳಬೆಳಕಾದ ನಮ್ಮ ತಂದೆ ಶ್ರೀ ಸಿ. ನರಸಿಂಹಮೂರ್ತಿ, ತಾಯಿ ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿ ಇವರಿಗೆ ಈ ಗ್ರಂಥ ಅರ್ಪಿತವಾಗುತ್ತಿದೆ.

ಈ ಗ್ರಂಥಕ್ಕೆ ಪ್ರೀತಿಯಿಂದ ಲೇಖನಗಳನ್ನು ಬರೆದುಕೊಟ್ಟ ನಮ್ಮ ಬಂಧು ಗಳಿಗೂ ಹಿರಿಯರಿಗೂ ಮಿತ್ರರಿಗೂ ನಾನು ಕೃತಜ್ಞಳಾಗಿದ್ದೇನೆ.

ಗ್ರಂಥಕ್ಕೆ ಸೂಚನೆಗಳಿತ್ತ ಹಿರಿಯರೂ ವಿಶ್ವಾಸಿಗಳೂ ಆದ ಶ್ರೀ ನಿರಂಜನ, ಅಚ್ಚಿನ ಕಾರ್ಯದಲ್ಲಿ ನೆರವಾದ ಹಿರಿಯರಾದ ಶ್ರೀ ಬಿ. ಶ್ರೀನಿವಾಸಮೂರ್ತಿ, ರಕ್ಷಾ ಕವಚವನ್ನು ಅಂದವಾಗಿ ರಚಿಸಿಕೊಟ್ಟಿರುವ ಹಿರಿಯ ಕಲಾವಿದ ಶ್ರೀ ಎಚ್. ಎಸ್. ಇನಾಮತಿ, ಸುಂದರವಾಗಿ ಮುದ್ರಿಸಿರುವ ಪಯೋನಿಧಿ ಪ್ರಿಂಟರ್ಸ್ ಇವರಿಗೂ ನನ್ನ ಅನಂತ ವಂದನೆಗಳು.

ಯಾರ ಬಾಳು ಒಂದು ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ಸಮಾಜಕ್ಕೆ ಆದರ್ಶ ಪ್ರಾಯವಾಯಿತೋ, ನಮ್ಮ ಸಮಾಜದಲ್ಲಿ ಅನುಕರಣೀಯವಾದ ಒಂದು ಇತಿಹಾಸ ವನ್ನೇ ಸೃಷ್ಟಿಸಿತೋ ಅವರ ಸ್ಮೃತಿಗಾಗಿ ಪ್ರಕಟವಾಗಿರುವ ಈ ಗ್ರಂಥ ಕನ್ನಡಿಗರ ವಿಶ್ವಾಸಕ್ಕೆ ಪಾತ್ರವಾಗುವುದೆಂದು ನಂಬಿದ್ದೇನೆ.

22, ಡಿಸೆಂಬರ್ 1979 **ಚಿ. ನ. ಮಂಗಳಾ**
ಬೆಂಗಳೂರು.

ಹರಕೆ . . . .

★ **ಪೂಜ್ಯ ಶ್ರೀ ರಾಘವೇಂದ್ರ ಸ್ವಾಮೀಜಿ**
ಅನಾಥ ಸೇವಾಶ್ರಮ, ಮಲ್ಲಾಡಿ ಹಳ್ಳಿ.

ನಿಮ್ಮ 'ಕಲಾ ಭಾರತಿ' ಸಾಂಸ್ಕೃತಿಕ ಸಂಸ್ಥೆಯ ಹತ್ತನೆಯ ಹುಟ್ಟು ಹಬ್ಬದ ಮಂಗಲಮಯ ಸನ್ನಿವೇಶದಲ್ಲಿ ನಿಮ್ಮ ಪೂಜ್ಯ ತಂದೆಯವರಾದ ದಿ॥ ಶ್ರೀ ನರಸಿಂಹ ಮೂರ್ತಿಯವರ ಸವಿನೆನಪಿಗಾಗಿ ಒಂದು ಸಂಸ್ಕರಣ ಗ್ರಂಥವನ್ನು ಪ್ರಕಟಿಸಬೇಕೆಂದಿರುವ ನಿಮ್ಮ ಪಿತೃವಾತ್ಸಲ್ಯವು ನಿಜವಾಗಿಯೂ ಶ್ಲಾಘನೀಯ ಮತ್ತು ಅನುಕರಣೀಯ. ಸತ್ತ ತಂದೆ ತಾಯಂದಿರ ಹೆಸರಿನಲ್ಲಿ ವರುಷಕ್ಕೊಮ್ಮೆ ಶ್ರಾದ್ಧದ ನೆಪದಲ್ಲಿ ಹೊಟ್ಟೆ ತುಂಬಿದವರನ್ನು ಕರೆದು ಉಣಿಸುವುದಕ್ಕಿಂತಲೂ ಇಂದು ನೀವು ಯೋಚಿಸಿಕೊಂಡಿರುವ ಸಾಹಿತ್ಯ ಸೇವೆಯ ಜ್ಞಾನದಾಸೋಹವು ನಿಜವಾಗಿಯೂ ನಿಮ್ಮ ಸ್ವರ್ಗಸ್ಥ ತಂದೆಯವರ ಪವಿತ್ರಾತ್ಮಕ್ಕೆ ತೃಪ್ತಿಯನ್ನುಂಟಾಗಿಸುವುದೆಂದು ನನ್ನ ಪೂರ್ಣ ನಂಬುಗೆ. ಇಂತಹ ನಿಮ್ಮ ವಿಚಾರಶೀಲ ಕಾರ್ಯಯೋಜನೆಗೆ ನನ್ನ ಆತ್ಮೀಯ ಸ್ವಾಗತ. ಶ್ರೀ ಗುರುವು ನೀವು ಹಮ್ಮಿಕೊಂಡಿರುವ ಕಾರ್ಯವನ್ನು ನಿರ್ವಿಘ್ನವಾಗಿಯೂ, ಯಶಸ್ವಿಯಾಗಿಯೂ ನೆರವೇರಿಸಲೆಂದು ಹಾರೈಸುತ್ತೇನೆ.

ದಿವಂಗತ ಸಿ. ನರಸಿಂಹಮೂರ್ತಿ

ನುಂಗುತ್ತ ನಿನ್ನ ಅಳು, ಅವರಿವರ ಕಣ್ಣೊರಸಿ,
ಬಾಳುವದೆ ಬಾಳ ತಿರುಳು :
ಎಂದು ಕುಲುಕುಲು ನಗುತ ಕಣ್ಮರೆಸಿ ಮರೆಯಾದೆ
ಎಲ್ಲರನು ಮಾಡಿ ಮರುಳು

ಸೇವಾ ನಿವೃತ್ತನಿಹ ಪೂರ್ವದಲಿ ನೀನಾದೆ
ಜೀವನ ನಿವೃತ್ತ ಸಖಿಸು
ಪಂಜರವ ನಿದ್ದೆಯಲಿ ತೊರೆಯುವ ವಿದ್ಯೆ
ತಿಳಿದಿರಲು, ನಿತ್ಯಸುಖಿನು

ನನ್ನ ಕನಸಾಗಿರುವಿ, ನನ್ನ ನೆನಸಾಗಿರುವಿ.
ನನ್ನ ದೈನಂದಿನದ ಬಾಳ ಸ್ಫೂರ್ತಿ
ನನ್ನ ಚೈತನ್ಯದೊಡನೊಂದಾಗಿರುವಿ ನೀನು,
ಮಾಯವಾದರು ನಿನ್ನ ಮೃಣ್ಮಯದ ಮೂರ್ತಿ

ನಾನು ಬಾನ್ ನೀನು ಮಿನುಗುವ ತಾರೆ ಬಾನಿನೊಳು
ನಾ ಭೂಮಿ ನೀ ಹೊಮ್ಮುತಿರುವ ನಿರ್ಝರವು
ನಾ ಹೃದಯ ನೀನು ಉಕ್ಕೇರುತಿಹ ಪ್ರೇರಣೆಯು,
ನಿರ್ಮಲ ನಿನ್ನ ಬುದ್ಧಿ, ಹೃದ್ಭಾವ ನಿರ್ಭರವು.

ಇಳೆಯೊಳಿನ್ನೊಮ್ಮೆ ಕೆಳೆಯಾಟ ಆಡೋಣ ಬಾ.
ಅಶ್ವಿನಿಗಳಂತಮರ ಯಮಳರಾಗಿ !
ಎಲ್ಲ ಕಂಬನಿ ಒರಸಿ, ಹಿಗ್ಗು ಹೊಳೆಗಳ ಹರಿಸಿ
ಬಾಳೋಣ ಸತ್ಕೀರ್ತಿಧವಲರಾಗಿ !

—ವಿನಾಯಕ

ಸಾಹಿತಿಯೆಂದರೆ ಅಷ್ಟು ಪ್ರೀತಿ

ಶಾರದಾ ಗೋಕಾಕ್.

1956ರಲ್ಲಿ ಪ್ರಾಂತಗಳ ಪುನರ್‌ರಚನೆಯಾದಾಗ ದಿ। ಶ್ರೀ ನರಸಿಂಹಮೂರ್ತಿ, ಐ.ಎ.ಎಸ್. ಅವರು ಡಿ.ಪಿ.ಐ. ಆಗಿದ್ದರು. ಎಲ್ಲ ಸರಕಾರಿ ಕಾಲೇಜುಗಳು ಅವರ ಮೇಲ್ವಿಚಾರಣೆಯಲ್ಲಿ ಬಂದುದರಿಂದ ಗೋಕಾಕರು ಆಗ ಪ್ರಿನ್ಸಿಪಾಲರಾಗಿದ್ದ ಕರ್ನಾಟಕ ಕಾಲೇಜೂ ಸಹ ಅವರಿಗೆ ಅಧೀನವಾಗಿತ್ತು. ಅರ್ಥಾತ್ ಅವರೇ ಗೋಕಾಕರ ಮೇಲಿನ ಅಧಿಕಾರಿಗಳಾದರು. ಅವರು ಮೊದಲನೆಯ ಸಲ ಉತ್ತರ ಕರ್ನಾಟಕದ ಪ್ರವಾಸದ ಕಾರ್ಯವನ್ನು ಕೈಕೊಂಡಾಗ ಧಾರವಾಡಕ್ಕೆ ಬಂದರು. ಆಗ ವಾಡಿಕೆಯಾಗಿ ಎಲ್ಲ ಅಧಿಕಾರಿಗಳೂ ಹೋಗಿ ಮೇಲಿನಧಿಕಾರಿಗಳಿಗೆ ಭೇಟಿಯಾಗುವಂತೆ ಗೋಕಾಕರೂ ಗೌರವವನ್ನು ಸೂಚಿಸಲು ಹೋಗಿದ್ದರು. ಎಲ್ಲರ ಪರಿಚಯ ಮಾಡಿಕೊಳ್ಳುತ್ತ ಸ್ಥಳೀಕ ವಿದ್ಯಾಧಿಕಾರಿಗಳು "ಇವರು ಪ್ರಿ. ಗೋಕಾಕ" ರೆಂದು ಹೇಳಿದಾಗ ನರಸಿಂಹಮೂರ್ತಿಯವರು "ನೀವೇಕೆ ಇಲ್ಲಿಗೆ ಬಂದಿರಿ? ನಾನು ನಿಮ್ಮನ್ನು ನಿಮ್ಮ ಮನೆಗೆ ಬಂದು ಭೇಟಿಯಾಗಬೇಕು" ಎಂದು ಅವರನ್ನು ತಮ್ಮ ಕಾರಿನಲ್ಲಿ ಕೂಡಿಸಿ ವಾಪಸು ಮನೆಗೆ ಕಳಿಸಿದರು! ಸಾಹಿತಿಯೆಂದರೆ ಅವರಿಗೆ ಅಷ್ಟು ಪ್ರೀತಿ. ಅದರ ಮರುದಿನ ರಾತ್ರಿ ನಮ್ಮ ಮನೆಯಲ್ಲಿ ತಮ್ಮ ಸಹೋದ್ಯೋಗಿಗಳನ್ನೆಲ್ಲಾ ಕರೆದು ನರಸಿಂಹಮೂರ್ತಿಯವರಿಗಾಗಿ ಗೋಕಾಕರು ಭೋಜನ ಕೂಟವನ್ನು ಏರ್ಪಡಿಸಿದರು. ಅವರ ನಡುವೆ ಬೆಳೆದು ಬಂದ ಈ ಮೈತ್ರಿ ಎರಡು ಕುಟುಂಬಗಳನ್ನು ಹತ್ತಿರ ತಂದಿತು; ಚಿರಸ್ಥಾಯಿಯಾಯಿತು. ಬೇಸಿಗೆಯ ಶಿಬಿರ ಆರು ವಾರ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯವಸ್ಥೆಯಾದಾಗ ಸದಾಶಿವ ನಗರದಲ್ಲಿ ಅದೇ ತಾನೆ ನರಸಿಂಹಮೂರ್ತಿಯವರ ಹೊಸ ಮನೆ ಕಟ್ಟಿ ಸಿದ್ಧವಾಗಿತ್ತು. ಅದರ ವಾಸ್ತು ಸಮಾರಂಭಕ್ಕಾಗಿ ಅವರು ನಮ್ಮನ್ನೆಲ್ಲ ಆಮಂತ್ರಿಸಿದ್ದರು. ಅಲ್ಲಿಯೇ ಊಟವಾಯಿತು. ಮಾತಿಗೆ ಮಾತು ಬಂದು ಸಹಜವಾಗಿ ಅವರು ಗೋಕಾಕರನ್ನು ಕೇಳಿದರು: "ನೀವೇಕೆ ಬೆಂಗಳೂರಿನಲ್ಲಿ ಮನೆ ಕಟ್ಟುವುದಿಲ್ಲ?" ಗೋಕಾಕರು ಹೇಳಿದರು. "ನಮಗೆ ಸ್ವಲ್ಪ ದರದಲ್ಲಿ ಪ್ಲಾಟು ಯಾರು ಕೊಡುತ್ತಾರೆ? ಸಿಕ್ಕರೆ ಕಟ್ಟಿಸುತ್ತೇನೆ." ಮೂರ್ತಿಯವರೆಂದರು. "ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟಿನಿಂದ ನಿಮಗೆ ದೊರೆಯುವ ಹಾಗೆ ನಾನು ಯತ್ನಿಸುತ್ತೇನೆ" ಎಂದು ಹೇಳಿದರು. ನಂತರ ಗೋಕಾಕರು ಪ್ಲಾಟು ದೊರಕಿದರೆ ಖಂಡಿತ ಇಲ್ಲಿ ನಾನು ಮನೆ ಕಟ್ಟುತ್ತೇನೆ, ಎಂದರು.

ಹೋಗುವಾಗ ನರಸಿಂಹಮೂರ್ತಿಯವರು ಗೋಕಾಕರಿಂದ ಒಂದು ಅಪ್ಲಿಕೇಶನ್ ಮೇಲೆ ಸಹಿ ಮಾಡಿಸಿಕೊಂಡರು. ಸಹಿ ಮಾಡಿದ ಗೋಕಾಕರು ಹೈದ್ರಾಬಾದಿಗೆ ಮರಳಿದ ಮೇಲೆ ಆ ವಿಷಯವನ್ನೇ ಮರೆತಿದ್ದರು. ಆದರೆ ಒಂದು ದಿನ ಸಿ. ಇ. ಟಿ. ಬಿ. ಇಂದ ಕಾಗದ ಬಂತು. ರಾಜಮಹಲು ವಿಳಾಸದಲ್ಲಿ 525ನೇ ಪ್ಲಾಟು ಕೊಡಲಾಗಿದೆ ಯೆಂದೂ ಕೂಡಲೇ ಕನಿಷ್ಠ ಹತ್ತು ವರ್ಷಗಳೊಳಗೆ ಮನೆ ಕಟ್ಟಿಸಬೇಕೆಂದೂ ಆ ಪತ್ರದಲ್ಲಿ ಕಾಣಿಸಿತ್ತು. ಗೋಕಾಕರಿಗೆ ಆಶ್ಚರ್ಯವಾಯಿತು. ಒಲುಮೆಯ ಕೃತಜ್ಞತೆ ಗಳನ್ನು ಸಲ್ಲಿಸಿ ಅವರು ನರಸಿಂಹಮೂರ್ತಿಯವರಿಗೆ ಪತ್ರ ಬರೆದರು.

(ಒಲವೆ ನಮ್ಮ ಬದುಕು ಕೃತಿಯಿಂದ)

ನನ್ನ ತಮ್ಮ....

ಲಲಿತಮ್ಮ

ನಮ್ಮ ತಂದೆ ಶ್ರೀ ಚಿದಂಬರರಾಯರು. ನಮ್ಮ ತಾಯಿ ಸೌ॥ ಸಾವಿತ್ರಮ್ಮ— ಅನುರೂಪ ದಾಂಪತ್ಯ. ಆರು ಜನ ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳು. ಹಿರಿಯ ಮಗನೇ ನರಸಿಂಹಮೂರ್ತಿ. ಜನನ 1911 ರಲ್ಲಿ. ನಮ್ಮೂರು ಅಗ್ರಹಾರ.

ಬಾಲ್ಯದಿಂದಲೂ ಕಷ್ಟಸಹಿಷ್ಣುತೆ-ವಿದ್ಯಾವ್ಯಾಸಂಗದಲ್ಲಿ ವೈಶಿಷ್ಟ್ಯತೆ-ಮೈಸೂರು ರಾಜ್ಯದ ಮಹೋನ್ನತ ಶಾಲೆಗಳಲ್ಲಿ ಒಂದಾದ ಶ್ರೀ ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿ ನರಸಿಂಹಮೂರ್ತಿ. ಅನಂತರ ಕಾಲೇಜು ವಿದ್ಯಾಭ್ಯಾಸ. ಅನಾಥಾಲಯದಲ್ಲಿ ಆಶ್ರಯ. "ಮೈಸೂರು ತಾತ" ಶ್ರೀ ವೆಂಕಟಕೃಷ್ಣಯ್ಯನವರ ಆಪ್ತ ಶಿಷ್ಯ. ಅರ್ಥಶಾಸ್ತ್ರದಲ್ಲಿ ಉನ್ನತ ದರ್ಜೆಯಲ್ಲಿ ಎಂ. ಎ. ಪದವಿ ಗಳಿಕೆ. ಸುವರ್ಣ ಪದಕಗಳ ಸರಮಾಲೆ. ಮೈಸೂರು ಮಹಾರಾಣೀ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕ. ಹಾಗೆಯೇ "ತಾಯಿನಾಡು" ಪತ್ರಿಕಾ ಪ್ರತಿನಿಧಿ.

ನಂತರ 1937ರಲ್ಲಿ ಎಂ. ಸಿ. ಎಸ್. ಪರೀಕ್ಷೆಯಲ್ಲಿ ಅಗ್ರಸ್ಥಾನ ಗಳಿಕೆ. ಸರ್ಕಾರದ ಸೇವಾರಂಭ. ಶ್ರೀಮಂತ ಪುತ್ರಿ ಸದ್ಗುಣಗಳ ಗಣಿ ಸೌ॥ ರಾಜೇಶ್ವರಿಯೊಂದಿಗೆ ವಿವಾಹ. ಆದರ್ಶ ದಾಂಪತ್ಯ. ಸುಖದ ಸಂಸಾರ. ದೊಡ್ಡ ಸಂಸಾರದ ನಿರ್ವಹಣೆ.

1938 ಸೆಪ್ಟೆಂಬರ್ ನನ್ನ ಯಜಮಾನರ ಆಕಸ್ಮಿಕ ಮರಣ. ನನ್ನ ಮಕ್ಕಳ ಮತ್ತು ನನ್ನ ಸಂಸಾರದ ಸಂಪೂರ್ಣ ಜವಾಬ್ದಾರಿ ನನ್ನ ತಮ್ಮನ ಮೇಲೆ. 1938ರಿಂದ 1950 ವರೆವಿಗೆ 12 ವರ್ಷಗಳ ಕಾಲ ನಮ್ಮ ಸಂಸಾರದ ಹೊಣೆಗಾರಿಕೆ ನನ್ನ ತಮ್ಮನಿಂದ. ನಮ್ಮ ಭಾಗದ ದೇವರಾಗಿದ್ದ. ಮಕ್ಕಳ ವಿದ್ಯಾಭ್ಯಾಸ, ಮಕ್ಕಳ ಅಭಿವೃದ್ಧಿ, ಹೆಣ್ಣು ಮಕ್ಕಳಿಗೆ ಮದುವೆಗೆ ಸಹಾಯ, ಮಗನಿಗೆ ಉದ್ಯೋಗಾವಕಾಶ, ಒಂದೇ ಎರಡೇ, ಹಲವಾರು ಕಾರ್ಯಗಳಲ್ಲಿ ನಮಗೆ ಸಹಾಯ.

ನಮಗೆ ಮಾತ್ರವಲ್ಲ, ಉಳಿದ ಅಕ್ಕ ತಂಗಿಯರಿಗೂ. ಅವರ ಮಕ್ಕಳಿಗೂ ಸಹಾಯ ಸೌಲಭ್ಯಗಳು. ಅನಾಥಾಲಯಕ್ಕೆ ಪ್ರತಿ ಮಾಹೆಯೂ ಚಂದಾ ಹಣ. ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ, ಶ್ರೀ ರಾಮಕೃಷ್ಣ ಆಶ್ರಮಕ್ಕೆ ಸಹಾಯ, ಅಲ್ಲದೆ ಅನೇಕರಿಗೆ ಅನೇಕ ರೀತಿಯ ಸಹಾಯಗಳು ನನ್ನ ತಮ್ಮನಿಂದ.

ಸರಕಾರದ ನಾನಾ ಇಲಾಖೆಗಳಲ್ಲಿ ಕಳಂಕರಹಿತ ಕೀರ್ತಿಶಾಲೀ ಸೇವೆ. ಶ್ರೀಮನ್ಮಹಾರಾಜರು, ದಿವಾನರು, ಮುಖ್ಯಮಂತ್ರಿಗಳು, ಮಂತ್ರಿವರ್ಯರು, ಸಾರ್ವಜನಿಕರು, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳಿಂದ ತಮ್ಮನ ಸೇವೆಯ ಶ್ಲಾಘನೆ.

ಚಿಕ್ಕದಾದ, ಚೊಕ್ಕವಾದ, ಚೆನ್ನಾದ ಸಂಸಾರ, ಪ್ರೀತಿಯ ಹೆಂಡತಿ, ಮುದ್ದಿನ ಮೂರು ಹೆಣ್ಣು ಮಕ್ಕಳು, ಹಿರಿಯ ಮಗಳು ಮಂಗಳಾ, ಎರಡನೆಯವಳು ಲಕ್ಷ್ಮಿ ಮೂರನೆಯವಳು ವಾಣಿ, ಏಕಮಾತ್ರ ಪುತ್ರ ಚಂದ್ರಶೇಖರ.

ನನ್ನ ತಮ್ಮ ಸದ್ಗುಣಗಳ ಗಣಿ, ಒಂದಾದರೂ ಕೆಟ್ಟ ಅಭ್ಯಾಸವಿಲ್ಲ. ಸಂಸ್ಕೃತಿಯ ಸ್ವರೂಪ, ನಾಗರೀಕತೆಯ ಪರಾಕಾಷ್ಠೆ, ಮಾನವೀಯತಾದೃಷ್ಟಿ, ಕೆಲಸದಲ್ಲಿ ನಿಷ್ಠೆ, "ಕಾಯಕವೇ ಕೈಲಾಸ" ಮನೋಭಾವನೆ, ಒಮ್ಮೊಮ್ಮೆ ಸಿಟ್ಟು ಬಂದಾಗ ಮಾತ್ರ ಉಗ್ರನರಸಿಂಹಮೂರ್ತಿ. ಯಾವಾಗಲೂ ಶಾಂತಚಿತ್ತ ಶ್ರೀ ಲಕ್ಷ್ಮೀನರಸಿಂಹಸ್ವಾಮಿ.

1968 ಮೇ ಮಾಹೆ ತಾರೀಖು 1. ಎರಡನೆಯ ಮಗಳು ಸೌ॥ ಲಕ್ಷ್ಮಿಯ ವಿವಾಹ. ಸದಾಶಿವ ನಗರದ ಸ್ವಗೃಹದಲ್ಲಿ. ವೈಭವದ ವಿವಾಹ, ಸಂತೋಷ ಸಮಾರಂಭಗಳು, ಪುಟ್ಟಪರ್ತಿ ಶ್ರೀ ಸತ್ಯ ಸಾಯಿಬಾಬಾರವರ ಆಗಮನ. ಆಶೀರ್ವಾದ ಅನುಗ್ರಹ, ಆದರೂ ಶ್ರೀ ಬಾಬಾರವರ ವದನದಲ್ಲಿ ಆತಂಕ ಚಿಹ್ನೆ, ಕಾರಣ, ಕಾರಣ—ಕಾರಣ ?

1968 ಮೇ ತಾರೀಖು 7, ರಾತ್ರಿ ಮಕ್ಕಳಿಂದ ಸಂತೋಷಕೂಟ, ಆನಂದದ ಆಗರ, ಆಯಾಸದಿಂದ ರಾತ್ರಿ 12 ಗಂಟೆಗೆ ನಿದ್ರಾದೇವಿಯ ವಶ.

ಬೆಳಗಿನ ಜಾವದ ಹೊತ್ತಿಗೆ ನನ್ನ ತಮ್ಮ ಚಿರನಿದ್ರೆಯಲ್ಲಿ. ಸುಖವಾದ ಸಾವು. ಪರಮಾತ್ಮನ ಪಾದಾರವಿಂದ ಸೇರಿದ. ಎಲ್ಲೆಲ್ಲೂ ಕೋಲಾಹಲ, ಕರಾಳ ಛಾಯೆ, ಶೋಕ ಸಾಗರ ಗೃಹ. ಸಾವಿರಾರು ಮಂದಿ ಗಣ್ಯರ ಆಗಮನ, ಅಂತ್ಯ ದರ್ಶನ, ಸರ್ವರಿಂದಲೂ ತಮ್ಮನ ಜೀವನ ಸೇವೆ, ಸಹಾಯಗಳ ಶ್ಲಾಘನೆ, ನಮ್ಮ ಕುಟುಂಬದ ಕೀರ್ತಿಕಳಶದ ಕಣ್ಮರೆ, ನಮ್ಮ ಸಂಸಾರದ ನಂದಾದೀಪದ ಉಜ್ವಲ ಜ್ಯೋತಿಯ ಅಸ್ತ.

ನನ್ನ ತಮ್ಮನಂತಹ ವ್ಯಕ್ತಿತ್ವ ಬಹುಶಃ ಇನ್ನೊಬ್ಬರಲ್ಲಿ ಇಲ್ಲ. ಅಲ್ಪಾಯುಷಿಯಾದರೂ ಜೀವನದ ಸಾರ್ಥಕ ಸಾಧನೆ. ನಿಧನನಾದಾಗ ಕೇವಲ 56 ವರ್ಷಗಳು ಮಾತ್ರ. ನಿವೃತ್ತನಾಗಿ ವಿಶ್ರಾಂತಿ ವಿರಾಮಗಳನ್ನು ಅನುಭವಿಸುವ ಅವಕಾಶರಹಿತನಾಗಿ ಜೀವನ ಪರ್ಯಂತ ದುಡಿಮೆ, ಸೇವೆ.

ನರಸಿಂಹಮೂರ್ತಿ ಕಾಯಕದ ಕೀರ್ತಿ. ಇಂತಹ ಮಗನನ್ನು ಪಡೆದ ನಮ್ಮ ತಂದೆ ತಾಯಿ, ತಮ್ಮನನ್ನು ಪಡೆದ ನಮ್ಮ ಅಕ್ಕ ತಂಗಿಯರು. ಪತಿಯನ್ನಾಗಿ ಪಡೆದ ನಾದಿನಿ ರಾಜೇಶ್ವರಿ, ತಂದೆಯನ್ನಾಗಿ ಪಡೆದ ಅವರ ಮಕ್ಕಳು, ಎಲ್ಲರೂ ಧನ್ಯರು. ನೆರಳಿನೋಪಾದಿಯಲ್ಲಿ ಪತಿಯ ಸೇವೆ ಸಲ್ಲಿಸಿದ ರಾಜೇಶ್ವರಿ ಪತಿಯ ಸಾವಿನಿಂದ ಕೊರಗಿ ತಮ್ಮ ನಿಧನನಾದ ನಾಲ್ಕಾರು ವರ್ಷಗಳಲ್ಲೇ ನಿಧನಳಾದಳು. ತಮ್ಮ ನಾದಿನಿಯರ ಜೀವಕ್ಕೆ ಶಾಂತಿ ಕೋರಿ, ಅವನ ಮಕ್ಕಳಿಗೆ ಮುಂದೆ ಎಂದೆಂದಿಗೂ ಸಕಲ ಶ್ರೇಯಸ್ಸನ್ನು ಹಾರೈಸಿ, ತಮ್ಮನನ್ನು ಸದಾ ನೆನೆಸುತ್ತೇನೆ.

ನನ್ನ ಸೋದರಮಾವ

ನಾಗರತ್ನ ವೆಂಕಟೇಶ್

ನಾನು ಕಂಡಂತೆ, ಸಾಮಾನ್ಯವಾಗಿ ಒಂದೇ ವ್ಯಕ್ತಿಯಲ್ಲಿ, ವಿದ್ಯೆ, ವಿನಯ, ರೂಪ, ಮತ್ತು ಗುಣ, ಎಲ್ಲವೂ ಮಿಳಿತವಾಗಿರುವುದು ಬಲು ಅಪರೂಪ. ಆದರೆ ಇವರಲ್ಲಿ ಎಲ್ಲವೂ ಸೇರಿ ಜೇನುತುಪ್ಪಕ್ಕೆ ಸಕ್ಕರೆ ಬೆರೆಸಿದಂತಿತ್ತು.

ನಮ್ಮ ಸೋದರಮಾವನನ್ನು ನೋಡಲು ತುಂಬಾ ಸುಂದರ ರೂಪು. ಹೊಳಪಿನ ಕಣ್ಣುಗಳು. ಸಣ್ಣ ಸಣ್ಣ ಗುಂಗುರು ಕೂದಲು. ದುಂಡಗಿನ ಅಗಲವಾದ ಮುಖ. ಒಂದು ಸಾರಿ ನೋಡಿದರೆ ಮತ್ತೊಮ್ಮೆ ನೋಡುವಂಥಾ ವ್ಯಕ್ತಿತ್ವ.

ನಾನು ನೋಡಿದಾಗಿನಿಂದಲೂ ಇದುವರೆಗೂ ಒಬ್ಬರ ಮನಸ್ಸನ್ನೂ ನೋಯಿಸದಂತೆ ಎಲ್ಲರ ಮನಸ್ಸನ್ನೂ ಅರಿತು ಎಲ್ಲರಿಗೂ ದಾರಿದೀಪವಾಗಿದ್ದರು. ತುಂಬಾ ಕಷ್ಟಪಟ್ಟು ಮೈಸೂರಿನ ಅನಾಥಾಲಯದಲ್ಲಿದ್ದುಕೊಂಡು ಓದಿ ಮುಂದೆ ಬಂದಿದ್ದರು. ಮತ್ತು ಎಲ್ಲದರಲ್ಲೂ Rank ನಲ್ಲೇ ಪಾಸು ಮಾಡಿದ್ದರು. ಯಾವಾಗಲೂ ಅವರಿಗೆ ಕಷ್ಟಪಟ್ಟು ಚೆನ್ನಾಗಿ ಓದುವ ಹುಡುಗರನ್ನು ಕಂಡರೆ ತುಂಬಾ ಇಷ್ಟ. ಅವರುಗಳಿಗೆ ತುಂಬಾ ಸಹಾಯ ಮಾಡುತ್ತಿದ್ದರು. ಮತ್ತು ಮರೆಯದೆ ತಮಗೆ ಸಿರಿ ಬಂದಾಗಲೂ ಅನಾಥಾಲಯಕ್ಕೆ ಸಹಾಯ ಮಾಡುತ್ತಿದ್ದರು. ಇದೇ ರೀತಿ ಸಂಗೀತ, ಕಲೆ, ಮುಂತಾದುವುಗಳಲ್ಲಿಯೂ ತುಂಬಾ ಆಸಕ್ತಿಯುಳ್ಳವರಾಗಿದ್ದರು.

ಹಿಂದೆ ತಾವು ಓದುತ್ತಿದ್ದಾಗಿನ ಸ್ನೇಹಿತರು ಯಾರಾದರೂ ತಮ್ಮನ್ನು ಹುಡುಕಿಕೊಂಡು ಬಂದರೆ ತಮ್ಮ ಶ್ರೀಮಂತಿಕೆಯನ್ನು ತೋರ್ಪಡಿಸದೆ ಅವರಲ್ಲಿ ಒಂದಾಗಿ ಬೆರೆತು ಅವರುಗಳ ಮನಸ್ಸಂತೋಷಪಡಿಸಿ ಕಳಿಸುತ್ತಿದ್ದರು.

ವೃತ್ತಿಯಲ್ಲಿಯಂತೂ ಅವರಂಥಾ ನಿಷ್ಠಾವಂತ ವ್ಯಕ್ತಿ ಬಲು ಅಪರೂಪ. ತಮ್ಮ ನಿಷ್ಠೆಯಿಂದಲೇ ಒಳ್ಳೆಯ ಹುದ್ದೆಯ ಒಂದೊಂದೇ ಮೆಟ್ಟಲುಗಳನ್ನೇರಿದ್ದರು. ದೇಶಕ್ಕೆ ಇನ್ನೂ ಅವರ ಸೇವೆ ಅಗತ್ಯವಿರುವಾಗಲೇ ವಿಧಿ ಅವರನ್ನು ಅರ್ಧಾಯುಸ್ಸಿನಲ್ಲಿ ಅಕಾಲ ಮರಣಕ್ಕೀಡುಮಾಡಿತ್ತು.

ಈ ಹತ್ತನೇ ವರ್ಷಾಬ್ದಿ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯುಂಟಾಗಿ ದೈವ ಅವರು ನಡೆದು ಬಂದ ದಾರಿಯಲ್ಲೇ ನಮ್ಮನ್ನೂ ಎಲ್ಲರನ್ನೂ ನಡೆಸಿ, ಅವರ ಮನೆಯ ನಂದಾದೀಪ ಸದಾ ಶಾಂತಿಯಿಂದ ದಿವ್ಯವಾಗಿ ಬೆಳಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ನರಸಿಂಹಮೂರ್ತಿ . . . .

ವಿ. ಸೀತಾರಾಮಯ್ಯ

ನಾನು ಮೈಸೂರಿನ ಶಾರದಾ ವಿಲಾಸ್ ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದಾಗ ಶ್ರೀ ನರಸಿಂಹಮೂರ್ತಿ ಅವರು ಆ ಶಾಲೆಯಲ್ಲಿ ಸುಮಾರು 1925–27ರ ಸುಮಾರಿಗೆ ವಿದ್ಯಾರ್ಥಿಯಾಗಿದ್ದರು. ನಾನು ಆಗ ಇಂಗ್ಲೀಷ್ ಮತ್ತು ಅರ್ಥಶಾಸ್ತ್ರ ಎರಡು ಪಾಠಗಳನ್ನೂ ಮಾಡುತ್ತಿದ್ದೆ. ಅವರು V Form ನಲ್ಲಿರುವಾಗ ಯಾವುದೋ ಒಂದು ಬರವಣಿಗೆಯಲ್ಲಿ ಬಹಳ ನಾಜೂಕಾಗಿ ಪ್ರಬಂಧವನ್ನು ಬರೆದರು. ಅಂದಿನಿಂದ ನನಗೆ ಅವರಲ್ಲಿ ವಿಶೇಷ ವಿಶ್ವಾಸವುಂಟಾಯಿತು. ನಾವು ಏನು ಹೇಳಿಕೊಟ್ಟೆವೊ ಬಿಟ್ಟೆವೊ ಅವರು ಏನು ಕಲಿತರೊ ನನ್ನಲ್ಲಿ ಕಡೆಯವರೆಗೂ ಬಹಳ ವಿಶ್ವಾಸ ಇಟ್ಟು ಕೊಂಡಿದ್ದರು ಅವರು ಆನರ್ಸ್. ಎಂ. ಎ. ಎರಡರಲ್ಲೂ ಅರ್ಥಶಾಸ್ತ್ರದಲ್ಲಿ ವಿಶೇಷ ವ್ಯಾಸಂಗ ಮಾಡಿ ಅರ್ಥಶಾಸ್ತ್ರ ಇಲಾಖೆಯ ಮುಖ್ಯಸ್ಥರಾಗಿದ್ದ ಪ್ರೊ॥ ವಿ. ಎಲ್. ಡಿ'ಸೋಜ ಅವರಿಗೆ ಪ್ರೀತಿಯ ಶಿಷ್ಯರಾದರು. ಡಿ'ಸೋಜ ಮೆಚ್ಚಿಕೊಂಡ ಕೆಲವು ವಿದ್ಯಾರ್ಥಿಗಳಲ್ಲಿ ನರಸಿಂಹಮೂರ್ತಿ ಮುಖ್ಯರು. ಅವರೆಗಾಗಲೇ ಅರ್ಥಶಾಸ್ತ್ರ ವ್ಯಾಸಂಗ ನಮ್ಮ ಕಾಲದಿಂದ ಬಹಳ ಮುಂದುವರಿದಿತ್ತು. ಅಲ್ಲಿಂದೀಚೆಗೆ ಅವರು ತಾಯಿನಾಡು ಪತ್ರಿಕೆಗೆ ಒಂದೆರಡು ಸಲ ಭರತಖಂಡದ ಹಣಕಾಸಿನ ಸಂಬಂಧದಲ್ಲಿಯೂ ವಿದೇಶಿ ವ್ಯಾಪಾರ ಸಂಬಂಧದಲ್ಲಿಯೂ ಕೆಲವು ಲೇಖನಗಳನ್ನು ಬರೆದರು. ತಾಯಿನಾಡು ಸಂಪಾದಕ ರಾವ ಪಿ. ಆರ್. ರಾಮಯ್ಯನವರು ನಮ್ಮ ಮನೆ ಎದುರಿನಲ್ಲಿಯೇ ಇದ್ದರು. ನರಸಿಂಹ ಮೂರ್ತಿಯವರ ಮೊದಲ ಒಂದೆರಡು ಲೇಖನಗಳನ್ನು ಅವರು ನನಗೆ ತೋರಿಸಿದರು ಬರವಣಿಗೆ ಅಚ್ಚುಕಟ್ಟಾಗಿತ್ತು. ಸುಮಾರು 1937ರಲ್ಲಿ ಎಂ. ಸಿ. ಎಸ್. ನಲ್ಲಿ ತೇರ್ಗಡೆ ಹೊಂದಿ ಬೇಗ ಮೇಲ್ಮಟ್ಟದ ಸರ್ಕಾರಿ ಅಧಿಕಾರಿಗಳಾದರು. ಸುಮಾರು ಆ ಸಮಯ ದಲ್ಲಿಯೇ ಒಂದು ಒಳ್ಳೆಯ ಸಂಸಾರದಲ್ಲಿ ಅವರ ವಿವಾಹವನ್ನು ಏರ್ಪಡಿಸುವುದರಲ್ಲಿ ತಾತಯ್ಯನವರೆಂದು ಹೆಸರಾದ ಶ್ರೀ ಎಂ. ವೆಂಕಟಕೃಷ್ಣಯ್ಯನವರು ಅನುಕೂಲವನ್ನು ಕಲ್ಪಿಸಿದರು. ಗೆಲವು ಮುಖವುಳ್ಳವರೂ ಧಾರಾಳವಾಗಿ ಜನರಲ್ಲಿ ಮಾತನಾಡುವವರೂ ಸ್ನೇಹಪರರೂ ತಮ್ಮ ಕಾರ್ಯವನ್ನೂ ಹುದ್ದೆಯನ್ನೂ ಬಲ್ಲವರೂ ಆದ್ದರಿಂದ ಇಲಾಖೆಯ ಇತರರಿಗೆ ಹೇಗೋ ಹಾಗೆ ಜನಕ್ಕೂ ಪ್ರಿಯರಾದರು.

ಮುಂದೆ ನಾನು 1943ರಲ್ಲಿ ಮೈಸೂರಿಗೆ ಹೋದೆ. 43–44 ಎಂದು ಕಾಣುತ್ತದೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದರು. ಮೂರ್ತಿ ಆಗ ನಗರದ ಮ್ಯಾಜಿಸ್ಟ್ರೇಟರಾಗಿದ್ದರು. ಕಾಲೇಜಿನಹೊರಗೆ ಎಂ. ಎ. ಗೋಪಾಲಸ್ವಾಮಿ ಅವರೂ ನಾನೂ ಇತರ ಉಪಾಧ್ಯಾಯರೂ ಹುಡುಗರ ಪರವಾಗಿ ನಿಂತಿದ್ದೆವು. ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಲು ಬಂದ ನರಸಿಂಹಮೂರ್ತಿ ಕಾಲೇಜಿನ Porch ವರೆಗೆ ಕೂಡ ಬರಲಿಲ್ಲ. ಅವರ ಜೊತೆಯಲ್ಲಿ ಬಂದಿದ್ದ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ನಾನು ಮಾತಾಡಿಸಿದೆ. "ನಾವು ಏನು ಮಾಡಲೂ ಸಾಧ್ಯವಿಲ್ಲ ಸಾರ್" ಎಂದರು ಮೂರ್ತಿ. ಆಗ ಬಹುಶಃ ಹ್ಯಾಮಿಲ್ಟನ್ ನಮ್ಮ ಸಂಸ್ಥಾನದಲ್ಲಿ ಪೋಲೀಸ್ ಇಲಾಖೆಯ ಪರಮಾಧಿಕಾರಿಯಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಕಾಲ. ಅವರು ಇಂಗ್ಲೀಷರು. ಶಿಸ್ತಿನವರು. ದರ್ಪದವರು.

ನಾವಿದ್ದುದು ಎರಡು ಬಗೆಯ ದಾಸ್ಯ. ನಮ್ಮ ಸರ್ಕಾರವೇ ಬ್ರಿಟಿಷರ ಅಂಕೆಗೆ ಒಳಪಟ್ಟಿತ್ತು. ನಾನು ಪುನಃ ನರಸಿಂಹಮೂರ್ತಿ ಅವರ ಬಳಿಗೆ ಬಂದು "ನಾನು ಒಂದು ಮಾತು ಹೇಳಬೇಕಾದ್ದಿದೆ" ಎಂದೆ.

ನಾಲ್ಕೈದು ಜನ ಹೆಣ್ಣು ಮಕ್ಕಳು Strike ಮಾಡಿದವರ ಜೊತೆಯಲ್ಲಿದ್ದರು. ಅವರನ್ನೂ ಇತರರಂತೆ ಬಲಾತ್ಕಾರದಿಂದ ಕರೆದುಕೊಂಡು ಹೋಗಬೇಕಾಗಿತ್ತು. ಅವರಲ್ಲಿ ಒಬ್ಬಾಕೆ ನಮ್ಮಲ್ಲಿನ ಒಬ್ಬ ಉಪಾಧ್ಯಾಯರ ಮಗಳು. "ನಾನು ಹೇಳುವುದು ಇಷ್ಟೆ. ಕಾನೂನು ಹೇಗಿದೆಯೋ ಹಾಗೆ ಮಾಡಿ. ಆದರೆ ಹೆಣ್ಣು ಮಕ್ಕಳನ್ನು ಪೋಲೀಸ್ ಲಾಕ್‌ಅಪ್‌ನಲ್ಲಿ ಇಡಬೇಡಿ. ಜೈಲಿಗೆ ಕರೆದುಕೊಂಡು ಹೋಗಿ" ಎಂದೆ. ಒಪ್ಪಿಕೊಂಡರು. ಶಕ್ಯವಾದರೆ ಹೆಣ್ಣು ಮಕ್ಕಳನ್ನು ಬೇಗ ಬಿಟ್ಟು ಬಿಡುತ್ತೇವೆ ಎಂದರು. ಆ ಅಧಿಕಾರಿಗಳಿಗೆ ನಾನು ಹೇಳಿದ್ದು ಸರಿಯೋ ತಪ್ಪೋ. ಅವರು ಧಾರಾಳವಾಗಿ ಒಪ್ಪಿಕೊಂಡು ಆ ರಾತ್ರಿಯೇ ಅವರನ್ನು ಬಿಟ್ಟು ಕೊಟ್ಟರು ಎಂದು ಕಾಣುತ್ತದೆ. ಇವು ಸಣ್ಣ ಸಂದರ್ಭಗಳು.

ಆಮೇಲೆ ಹತ್ತಾರು ಸಲ ನಾನು ಅವರು ದೊಡ್ಡ ಅಧಿಕಾರಿಗಳಾದ ಮೇಲೂ ಕಂಡಿದ್ದೆ. ಒಂದೇ ವಿಶ್ವಾಸದಿಂದ ಅವರೂ ಅವರ ಮನೆಯವರೂ ನನ್ನನ್ನು ಕಂಡಿದ್ದಾರೆ.

ಸೆಂಟ್ರಲ್ ಕಾಲೇಜಿನಲ್ಲಿ ನಾನಿದ್ದಾಗ ಅವರ ಮಗಳು ಚಿ. ನ. ಮಂಗಳ ಅವರು ಕನ್ನಡದ ಒಬ್ಬ ವಿದ್ಯಾರ್ಥಿನಿಯಾಗಿದ್ದರು. ಅವರಿಗೆ ಪಂಪ ಭಾರತದ ಕೆಲವು ಭಾಗಗಳ ಪಾಠ ಮಾಡುತ್ತಿದ್ದೆನೆಂದು ಕಾಣುತ್ತದೆ. ಅವರ ವಿದ್ಯಾಶ್ರದ್ಧೆ ಅತಿಶಯವಾದದ್ದು. ಹೀಗೆ ಶ್ರೀ ನರಸಿಂಹಮೂರ್ತಿ ಅವರ ವಿದ್ಯಾರ್ಥಿದೆಸೆ, ಅವರ ಅಧಿಕಾರ ವ್ಯಾಪ್ತಿ. ಆ ತರುವಾಯದ ಅವರ ಮತ್ತು ಮನೆಯವರ ವಿಶ್ವಾಸ ಈ ಮೂರರಿಂದಲೂ ನನ್ನ ಮನಸ್ಸು ತುಂಬಾ ಸವಿಯಾದ ನೆನಪುಳ್ಳದ್ದಾಗಿದೆ. ಅವರನ್ನು ಕುರಿತು ಈ ಸನ್ಮಾನ ಗ್ರಂಥ ಬರುವ ಸಮಯದಲ್ಲಿ ಅದನ್ನು ನೆನೆಸಿಕೊಳ್ಳುವುದು ನನಗೆ ಸಂತೋಷವುಂಟು ಮಾಡಿದೆ.

ಸ್ನೇಹದ ಸವಿನೆನಪು . . . .

ಎಂ. ವಿ. ಸೀತಾರಾಮಯ್ಯ

ಶ್ರೀಮತಿ ಚಿ. ನ. ಮಂಗಳ ಅವರು ತಮ್ಮ ಪೂಜ್ಯ ತೀರ್ಥರೂಪರವರಾದ, ಯಾರ ದಿವ್ಯವಾದ ಮೈತ್ರಿಗೂ ವಿಶ್ವಾಸಕ್ಕೂ ಪಾತ್ರನಾಗಿದ್ದೆನೋ ಆ ನನ್ನ ಪರಮ ಮಿತ್ರ ಕೀರ್ತಿಶೇಷ ಸಿ. ನರಸಿಂಹಮೂರ್ತಿಯವರನ್ನು ಕುರಿತು ಒಂದು ಜೀವನ ವೃತ್ತಾಂತ ಸ್ವರೂಪದ ಬರಹ ಒಂದನ್ನು ನನ್ನಿಂದ ಬಯಸಿದ್ದಾರೆ. ಕಲಾಪ್ರಿಯರಾಗಿದ್ದ ನರಸಿಂಹಮೂರ್ತಿಯುವರ ನೆನಪಿಗೆಂದು ಸ್ಥಾಪನೆಗೊಂಡ ಕಲಾಭಾರತಿಗೆ ಹತ್ತು ವರುಷ ತುಂಬಿದೆ. ಅದು ಚಿರಕಾಲ ಉಳಿದು, ನನ್ನ ಮಿತ್ರನ ನೆನಪನ್ನು ಹಸಿರಾಗಿ ಇರಿಸಿರಲಿ ಎಂದು ಹಾರೈಸಿ, ನಮ್ಮಿಬ್ಬರ ಸ್ನೇಹ ಸ್ವರೂಪದ ಬಗೆಗೆ ನಾಲ್ಕು ಮಾತು ಹೇಳುತ್ತೇನೆ. ನಮ್ಮಿಬ್ಬರ ನಡುವೆ ಏಕವಚನ ಸಂಬೋಧನೆಯ ಸಲಿಗೆ ಇತ್ತು. ಇದರಿಂದ ನಮ್ಮ ಸ್ನೇಹದ ಸ್ವಭಾವವನ್ನು ಅರಿಯಬಹುದು. (ಲೇಖನ ಮರ್ಯಾದೆಯ ಸಲುವಾಗಿ ಬಹುವಚನವನ್ನೇ ಬಳಸುತ್ತಿದ್ದೇನೆ.) ಆದರೂ ನಮ್ಮಿಬ್ಬರ ಜೀವನ ವಿವರಗಳನ್ನು ಪರಸ್ಪರ ಕೇಳಿ ತಿಳಿದುಕೊಳ್ಳುವ ಕುತೂಹಲ ನಮ್ಮನ್ನು ಎಂದೂ ಕಾಡಲಿಲ್ಲ. ಎಂದೂ ಹದಗೆಡದ ಸ್ನೇಹದಿಂದಷ್ಟೆ ನಾವು ಸಂತೃಪ್ತರು. ಚಿ. ಎಂದರೆ ಜನ್ಮಸ್ಥಳಸೂಚಿ, ನನ್ನ ಪೂರ್ವಜರ ಊರೇ ಆದ ಚಿಕ್ಕನಾಯಕನಹಳ್ಳಿ ಎಂದುಕೊಂಡಿದ್ದೆ. ಅದು ಆತನ ತಂದೆ ಚಿದಂಬರಯ್ಯನವರ ಹೆಸರಿನ ಮೊದಲಕ್ಷರ ಎಂದು ಯಾರಿಂದಲೋ ನನಗೆ ಆಮೇಲೆ ತಿಳಿಯಿತು. ಹೀಗಿರುವುದರಿಂದ ನನ್ನ ಮತ್ತು ನರಸಿಂಹಮೂರ್ತಿಯವರ ಸ್ನೇಹ ಸಂಬಂದದ ಕೆಲವು ಸವಿನೆನಪುಗಳನ್ನು ಮಾತ್ರ ತಿಳಿಸಬಲ್ಲೆ.

ಕಾಲೇಜು ದಿನಗಳಲ್ಲಿ ನರಸಿಂಹಮೂರ್ತಿ ನನ್ನ ಸಹಪಾಠಿ. ಇಂಟರ್‌ಮೀಡಿಯಟ್ ಮತ್ತು ಮುಂದಿನ ಪರೀಕ್ಷೆಗಳಲ್ಲಿ ಮೊದಲ ಐದರಲ್ಲಿ ನಾವಿಬ್ಬರೂ ಇದ್ದೆವು. ಪರಸ್ಪರ ಗೌರವ, ಅಭಿಮಾನಗಳು ಮೂಡಲು ಈ ಅಂಶವೂ ಒಂದು ಕಾರಣ. ಕನ್ನಡದಲ್ಲಿ ನನ್ನದು ವಿಶೇಷ ಒಲವು, ವ್ಯಾಸಂಗ, ಆತನ ಒಲವು, ಆಯ್ಕೆ, ಅರ್ಥಶಾಸ್ತ್ರ. ಇಂಗ್ಲಿಷಿನಲ್ಲಿ ಬರವಣಿಗೆ ಮತ್ತು ವಾಗ್ಮಿತೆ–ಆತ ನನಗಿಂತ ಗಟ್ಟಿಗ. ಅರ್ಥಶಾಸ್ತ್ರದಲ್ಲಿ ಆತ ಮೆರೆದ ಸಾಮರ್ಥ್ಯದಿಂದ ವಿ. ಎಲ್. ಡಿ'ಸೋಜ ಅವರಿಗೆ ಅತ್ಯಂತ ಪ್ರಿಯ. ಅರ್ಥಶಾಸ್ತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದಿದ್ದ ಎನ್. ಎಸ್. ಸುಬ್ಬರಾಯರೂ

ನರಸಿಂಹಮೂರ್ತಿಯನ್ನು ಮೆಚ್ಚಿಕೊಂಡಿದ್ದರು. ನಾನೂ ಸುಬ್ಬರಾಯರ ವಿಶೇಷ ಗಮನಕ್ಕೆ ಪಾತ್ರನಾಗಿದ್ದೆ ; ಕಾರಣ ಬೇರೆ ; ಅದರ ಉಲ್ಲೇಖ ಇಲ್ಲಿ ಅಪ್ರಸಕ್ತ.

ಕಾಲೇಜಿನ ವ್ಯಾಸಂಗ ಮುಗಿದ ಮೇಲೆ, ನನ್ನ ಮತ್ತು ನರಸಿಂಹಮೂರ್ತಿಯವರ 'ಹೂ ಚೆಲ್ಲಿದ ಹಾದಿ' ಕವಲೊಡೆಯಿತು. ಅವರ ಮುಂದೆ ತೆರೆದ ಹೊಸ ಹಾದಿ ಉನ್ನತಾಧಿಕಾರದಿಂದ ಉನ್ನತೋನ್ನತ ಅಧಿಕಾರ ಪದವಿಗಳಿಗೆ ಒಯ್ದು ಹೊಣೆಗಾರಿಕೆಗಳನ್ನು ಹೆಗಲ ಮೇಲೆ ಹೊರಿಸಿದ ಎಚ್ಚರಿಕೆಯ ಪಯಣದ ಹಾದಿಯಾದರೂ, ಎಂದಿನಂತೆ ಹೂ ಚೆಲ್ಲಿ ತಂಪಾದ ನೆರಳು ನೀಡುತ್ತಿದ್ದ ಹಾದಿಯೇ ಆಗಿತ್ತು, ಹಾಗೆಂದು ನನ್ನ ಎಣಿಕೆ. ನನ್ನ ಕವಲು ಹಾದಿಯಾದರೋ, ನಾನೇ ಹೂ ಚಲ್ಲಿಕೊಂಡು, ಅಷ್ಟಾಗಿ ನೆರಳಿಲ್ಲದ ಹಾದಿಯಲ್ಲಿ ನೆರಳಿಗಾಗಿ ಕೊಡೆ ಹಿಡಿದುಕೊಂಡು, ಆಯಾಸ ಪರಿಹಾರಕ್ಕೆ ಅಲ್ಲಲ್ಲೆ ಕುಳಿತು, ಕಲ್ಲು ಮುಳ್ಳು ತುಳಿದುಕೊಂಡು, ಕಷ್ಟಪಟ್ಟುಕೊಂಡು ಸವೆಸಿದ ಹಾದಿ. ನಾನಂ ಬಲ್ಲಮಟ್ಟಿಗೆ, ಕಾಲೇಜು ದಿನಗಳಂದು ನರಸಿಂಹಮೂರ್ತಿ ಕೂಡ ಕಷ್ಟ-ಕಾರ್ಪಣ್ಯಗಳನ್ನು ಕಂಡ ಕಾಲ. ಈ ಸಂಗತಿಯನ್ನು ಸ್ಪಷ್ಟಪಡಿಸುವ ಸಂಗತಿಯನ್ನು ಮುಂದೆ ತಿಳಿಸುತ್ತೇನೆ. ನಾನು ಹುಟ್ಟಿ ಬೆಳೆದ ಮೈಸೂರಿನಲ್ಲಿ ಬಡ ಗುಮಾಸ್ತರೇ ಆದರೂ ಎರಡು ಹೊತ್ತಿನ ಊಟಕ್ಕೆ ಕಾರ್ಪಣ್ಯ ಪಡದ ನನ್ನ ತಂದೆಯ ಮನೆಯಲ್ಲಿ ಹಿಂದು ಮುಂದಿನ ಪರಿವೆಯಿಲ್ಲದೆ ನೆಮ್ಮದಿಯಾಗಿ ಕಾಲ ಕಳೆಯುತ್ತಿದ್ದೆ ನಾನು. ಒಟ್ಟಿನಲ್ಲಿ, ಕಾಲೇಜು ದಿನಗಳು ನನ್ನ ಪಾಲಿಗೆ ನನ್ನೆಲ್ಲ ಆಪ್ತಮಿತ್ರರ ಸ್ನೇಹದ ಸವಿನೆನಪನ್ನು ಮಾತ್ರ ಉಳಿಸಿ, ಸುಖಸ್ವಪ್ನದಂತೆ ಸರಿದುಹೋಗಿ, ಸುಮಾರು ಎರಡು ದಶಕಗಳ ಮೇಲಾಗಿತ್ತು. ಈ ದೀರ್ಘ ಕಾಲದಲ್ಲಿ, ನಾನು ನನ್ನ ವೃತ್ತಿ ಜೀವನದಲ್ಲಿ ತೆವಳಿಕೊಂಡು ಸಾಗುತ್ತ, ಸುಮಾರು ಹದಿನೈದು ವರ್ಷಗಳ ಕಾಲ ಐವತ್ತು ರೂಪಾಯಿಗಳ ಸಂಬಳಗಾರನಾಗಿ, ಕಡೆಗೊಮ್ಮೆ, ಇಂಟರ್ ಮಿಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ಎನ್ನಿಸಿಕೊಂಡಿದ್ದೆ ! ಆ ತರುಣದಲ್ಲಿ ನರಸಿಂಹಮೂರ್ತಿಯವರು M.C.S. ಪರೀಕ್ಷೆ ಮಾಡಿದ್ದರಿಂದ ಕೂಡಲೆ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕಗೊಂಡು, ಅನೇಕ ಜಿಲ್ಲೆಗಳಲ್ಲಿ ಡೆಪ್ಯುಟಿ ಕಮಿಷನರ್ ಆಗಿ ಕೆಲಸಮಾಡಿ, ಕೊಡಗಿನ ಛೀಫ್ ಕಮಿಷನರ್ ಆಗಿದ್ದವರು ಆರೋಗ್ಯ ಲಾಭಕ್ಕಾಗಿ ಬೆಂಗಳೂರಿಗೆ ವರ್ಗಪಟ್ಟು, ಬಸವನಗುಡಿಯ ನಾರ್ತ್ ರೋಡಿನಲ್ಲಿ (ಲಾಲ್‌ಬಾಗಿನ ಪಶ್ಚಿಮದ ಹೆಬ್ಬಾಗಿಲಿನಿಂದ ನೇರವಾಗಿ ಬರುವ, ವಿ. ಸೀ. ಕವನಿಸಿರುವ 'ಕೆಂಪುವೂಸಾಲ್ಮರನ ದಾರಿ') ಪಶ್ಚಿಮದ ಕಡೆ, ಒಂದು ಹಳೆಯ ಮಾದರಿಯ ಬಂಗಲೆಯಲ್ಲಿ ಒಕ್ಕಲಿದ್ದರು. ನಾನು ಸಮೀಪದಲ್ಲೆ, ಗವೀಪುರದ ವಿಸ್ತರಣದಲ್ಲಿ, ಸ್ವಂತದ ಒಂದು ಗೂಡು ಕಟ್ಟಿಕೊಂಡು, ವಾಸವಾಗಿದ್ದೆ. ಇಷ್ಟು ಹತ್ತಿರದಲ್ಲಿದ್ದರೂ ಒಬ್ಬರನ್ನೊಬ್ಬರು ನೋಡ ಹೋಗದೆ ಇದ್ದದ್ದು ಈಗಲೂ ನನಗೆ ಅರ್ಥವಾಗದ ಸಂಗತಿ. ರಾಜ ಬೀದಿಗಳಲ್ಲಿ ಅವರು ಕಾರಿನಲ್ಲಿ, ನಾನು ಕಾಲಮೇಲೆ ಹೋಗುತ್ತಿದ್ದಾಗ, ಇಲ್ಲವೆ ನಾನಂ ಬಸ್‌ನಿಲ್ದಾಣದಲ್ಲಿ 'ಕ್ಯೂ' ಹಿಡಿದಿದ್ದಾಗ

ಆಕಸ್ಮಿಕವಾಗಿ ಸಂಧಿಸಿದಾಗ ಮುಗುಳುನಗೆಯ ವಿನಿಮಯ, ಔಪಚಾರಿಕ ವಂದನೆ ಪ್ರತಿವಂದನೆ, ಇವು ಸಾಗುತ್ತಿದ್ದುವು, ನಮ್ಮಿಬ್ಬರ ನಡುವೆ. ಇದನ್ನು ಬಿಗುಮಾನ ಎನ್ನಲಾರೆ. ಹಾಗಿದ್ದರೆ ಸಲಿಗೆ ಮತ್ತೆ ಎಳೆಕೂಡಿಕೊಳ್ಳುತ್ತಿರಲಿಲ್ಲ. ನಗರ ಜೀವನದ ಧಾವಂತದ ಪರಿಣಾಮ! ಯಾರಿಗೂ ಬಿಡುವಿಲ್ಲ, ಯಾರಿಗೂ ಕೈ ತೆರವಿಲ್ಲ! ಇದಕ್ಕೆ ಮುನ್ನ ನಮ್ಮಿಬ್ಬರ ನಡುವೆ, ನರಸಿಂಹಮೂರ್ತಿ ಬೇರೆ ಬೇರೆ ಊರುಗಳಲ್ಲಿದ್ದಾಗ ಪತ್ರ ವ್ಯವಹಾರ ಏನೂ ನಡೆದಿರಲಿಲ್ಲ. ಈ ವಿಭಾಗದಲ್ಲಿ ಇಬ್ಬರೂ ಅಪರಾಧಿಗಳು ಇಲ್ಲವೆ ಇಬ್ಬರೂ ನಿರಪರಾಧಿಗಳು! 'ಯೋಗಕ್ಷೇಮ' ವಿಚಾರಿಸುವುದಕ್ಕೆ, ನಾವು ಬಂಧುಗಳಾಗಿರಲಿಲ್ಲ. ಪತ್ರ ವ್ಯವಹಾರಕ್ಕೆ ಕಾರಣ ಬೇಕಲ್ಲ, (ಚಿ. ನ. ಮಂಗಳ ನನಗೆ ಆಗೊಮ್ಮೆ ಈಗೊಮ್ಮೆ ಬರೆಯುವುದುಂಟು, ನಾನೂ ಉತ್ತರಿಸುವುದುಂಟು ಸಂದರ್ಭಗಳು ಒದಗಿ ಬಂದಂತೆ.) ಅಂಥ ಅಗತ್ಯ ಬಿದ್ದಿರಲಿಲ್ಲ. ಅಲ್ಲದೆ, ನನಗೆ ತೋರುತ್ತದೆ, ಪತ್ರ ವ್ಯವಹಾರಕ್ಕೆ ಪ್ರಚೋದನೆ ನೀಡುವಂತಹ **common interests** ಸಮಾನಾಸಕ್ತಿಗಳು, **common ground** ಸಮಾನ ಭೂಮಿಕೆ ನಮ್ಮಲ್ಲಿ ಇರಲಿಲ್ಲ ಆ ಕಾಲದಲ್ಲಿ. ಜೊತೆಗೆ, **out of sight, out of mind** ಕಣ್ಣೆದುರಿಗೆ ಇಲ್ಲದಿದ್ದಾಗ ಒಬ್ಬರು ಇನ್ನೊಬ್ಬರನ್ನು ಸ್ಮರಿಸಿಕೊಳ್ಳುವುದಿಲ್ಲ. ನಲ್ಲ ನಲ್ಲೆಯರ ಮಾತು ಬೇರೆ. ನರಸಿಂಹಮೂರ್ತಿ ಬೆಂಗಳೂರಿಗೆ ಬಂದ ಮೇಲೆ, ಅವರಿದ್ದ ನಿವಾಸ ನನಗೆ ಗೊತ್ತಿದ್ದು ನನ್ನ ಮನೆಗೆ ತೀರ ಸಮೀಪ ಇದ್ದರೂ ಕೂಡ ನಾನು ಅವರನ್ನು ಹೋಗಿ ಕಾಣ ಬಹುದಾಗಿತ್ತು. ಕಾಣ ಹೋಗಲಿಲ್ಲ. ಕುಚೇಲ ಸ್ಥಾನದಲ್ಲಿದ್ದ ನಾನು ಕೃಷ್ಣನ ಮನೆಗೆ ಹೋಗುವುದು ಹೇಗೆ? ಬಡವನ ಬಿಗುಮಾನ, ಬಿಂಕ, ಸುತ್ತ ಮನಃಸ್ತರದಲ್ಲಿ ಕೆಲಸ ಮಾಡಿದ್ದಿರಬೇಕು!

ಸೋಜಿಗ! ಕೃಷ್ಣನೇ ಕುಚೇಲನ ಮನೆಗೆ ಬಂದ! ಪುರಾಣದ ಸಂಗತಿ ಹಿಂದು ಮುಂದಾಯಿತು. ಅಧಿಕಾರ ಸ್ಥಾನಗಳಲ್ಲಿ, ಪದವಿ ಪ್ರತಿಷ್ಠೆಗಳಲ್ಲಿ, ತಾರತಮ್ಯ ಅಡ್ಡಗೋಡೆ ಕಟ್ಟಿ ನಿಂತಾಗ, ಸ್ನೇಹ ಮೇಲಿನಿಂದ ಕೆಳಕ್ಕೆ ಇಳಿಯಬೇಕೇ ಹೊರತು ಕೆಳಗಿನಿಂದ ಮೇಲಕ್ಕೆ ಏರುವುದು ಹೇಗೆ ಸಾಧ್ಯ? (ಪುರಾಣ ಕಥೆಯಲ್ಲೂ, ಕುಚೇಲ ಕೃಷ್ಣನ ಅರಮನೆಗೆ ಹೋದಾಗ, ಬಾಲ್ಯ ಸ್ನೇಹಿತನನ್ನು ಕಂಡು ಕೃಷ್ಣ ಪೀಠದಿಂದ ಇಳಿದು ಬಂದು ಕುಚೇಲನಿಗೆ ಹಸ್ತಲಾಘವ ಕೊಟ್ಟು ಕರೆದೊಯ್ದನಲ್ಲವೇ?) **Law of gravitational force in social relations.** ಇದು 'ಸ್ನೇಹ' ಧರ್ಮ. ನಾನು ಅವರ ಮನೆಗೆ ಹೋಗಬಹುದಾಗಿತ್ತು; ಕೆಲಸ ಕಾರ್ಯ ಇಲ್ಲದಿದ್ದರೂ, ಸ್ನೇಹದ ಸೌಲಭ್ಯಕ್ಕಾಗಿ, ಉನ್ನತಾಧಿಕಾರಿಯ ಸಹಪಾಠಿ ಮಿತ್ರನಾದ ಸಾಮಾನ್ಯ ಅಧ್ಯಾಪಕ ನೊಬ್ಬ—ಅದರಲ್ಲಿ ಪಂಚೆ ಧರಿಸುವ ಕನ್ನಡ ಅಧ್ಯಾಪಕ—ಹಾಗೆ ಕಾಣ ಹೋದರೆ, ತನ್ನಿಂದ ಏನೋ ಉಪಕಾರ ಬಯಸಿ ಬಂದಿದ್ದಾನೆ ಈತ ಎಂದು ಉನ್ನತಾಧಿಕಾರಿ ಭಾವಿಸಿಕೊಂಡು, ಹುಬ್ಬೇರಿಸಿ ಬರಮಾಡಿಕೊಳ್ಳಬಹುದಲ್ಲವೇ? ಸಲ್ಲದ ಬಿಂಕದ ಜೊತೆಗೆ ಇಲ್ಲದ–ಅಥವಾ ಇರಕೂಡದ–ಅಳುಕು!

ಒಂದು ದಿನ ಬೆಳಗ್ಗೆ ನನ್ನ ಮೂರಂಕಣದ (ಸ್ವಂತ) ಔಟ್‌ಹೌಸಿನ, ಕಾಡು ಗಿಡಗಳು ಬೆಳೆಡಿದ್ದ ಮುಂಬಯಲಿನ ಮುಂದೆ, ಬೀದಿಯಲ್ಲಿ, ಒಂದು ಕಾರು ಬಂದು ನಿಂತಿತು. ಸುಮಾರು 15–16 ವಯಸ್ಸಿನ ಹುಡುಗಿಯ (ಮಗಳಿರಬಹುದು ಎಂದು ಕೊಂಡೆ ಆಗ) ಜೊತೆ ನರಸಿಂಹಮೂರ್ತಿ ಮನೆಯ ಮುಂದಿನ ತೆರಪು ವರಾಂಡದಲ್ಲಿ ಬಂದು ನಿಂತರು ; " ಏನು ಮಗೂ, ಹೇಗಿದ್ದೀಯೂ ?'' ಎಂಬ ಪ್ರಶ್ನೆ–ಹೆಣ್ಣು ಮಗಳ ಕೆಂದುಟಿಯನ್ನೂ ನಾಚಿಸಿ ಕೆಂಪೇರುವಂತೆ ಮಾಡುವಂತಹ ಕುಡಿ ಚಾಚಿದ ಕೆಂದುಟಿ ಮುಕ್ಕಳಿಸಿದ ನಿರ್ಮಲ ಸ್ನಿಗ್ಧ ಮಂದಹಾಸದಲ್ಲಿ ತೇಲಿ ಬಂದು ಕಾಲೇಜು ದಿನಗಳ ನೆನಪುಗಳನ್ನು ಸುರುಳಿ ಬಿಚ್ಚಿಸಿದ ಸಲಿಗೆಯ ಪ್ರಶ್ನೆ, ನನ್ನ ಚಳಿ ಬಿಡಿಸಿತು. ನನ್ನ ಬಿಂಕ, ಅಳುಕು ಎಲ್ಲ ಮಾಯವಾದುವು. (ನರಸಿಂಹಮೂರ್ತಿ ನನ್ನನ್ನ 'ಮಗೂ' ಎಂದು ಕರೆದದ್ದಕ್ಕೆ ಹಿನ್ನೆಲೆಯ ಸಂದರ್ಭ ಇದೆ. ಕೈಲಾಸಂ ಅವರ 'ಪೋಲಿ ಕಿಟ್ಟಿ' ನಾಟಕದಲ್ಲಿ ನಾನು 'ಮಗು' ಪಾತ್ರವನ್ನು ವಹಿಸಿದ್ದು ,ಆಪ್ತ ಮಿತ್ರರಿಗೆಲ್ಲರಿಗೂ ನಾನು' 'ಮಗು' ಆಗಿ ಪರಿಣಸಿದ್ದೆ. ಈಗಲೂ.)

> " ಏನು ಬಂದೆಯಲ್ಲಾ, ಹಳೆಯ ಸ್ನೇಹಿತನ ನೆನಪಾಯಿತೋ, ಇಲ್ಲ....' ಸ್ವಾಗತ ಬಯಸಿದ ನನ್ನ ಮರುಪ್ರಶ್ನೆ. " ನಿನ್ನಿಂದ ಒಂದು ಉಪಕಾರ ವಾಗಬೇಕಲ್ಲ ?'' " ನನ್ನಿಂದ ನಿನಗೆ ಉಪಕಾರವೆ ?'' " ಖಂಡಿತವಾಗಿ, ಯಾಕಾಗಬಾರದು ? ನಿನ್ನಿಂದ ಆಗುತ್ತೆ ಅನ್ನೋ ನಂಬಿಕೆಯಿಂದಲೇ ನಿನ್ನ ಮನೆ ಹುಡುಕಿಕೊಂಡು ಬಂದೆ. ಇವಳು...." (ನಿನ್ನ ಮಗಳೋ ಎಂದು ನಾನು ಕೇಳುವಷ್ಟರಲ್ಲಿಯೆ) "....ನನ್ನ ಮಗಳು, ಮಂಗಳಾ ('ನಮಸ್ಕಾರ ಸರ್'), ಲಿಟರೇಚರ್ ಆನರ್ಸ್‌ನಲ್ಲಿ ಓದುತಾ ಇದಾಳೆ. **Historical Novel**, ಕನ್ನಡದಲ್ಲಿ ಅದರ ಬೆಳವಣಿಗೆ, ಈ ವಿಷಯವಾಗಿ ಒಂದು ಪ್ರಬಂಧ ಬರೀಬೇಕಂತೆ. ನೀನು ಸ್ವಲ್ಪ ಅವಳಿಗೆ ಸಹಾಯ ಮಾಡ ಬೇಕಲ್ಲ ?'' " ರಾಜರತ್ನಂ ಇದಾರಲ್ಲ, ಅವರಿಗಿಂತ ನಾನೇ.'' " ರಾಜರತ್ನಂನ ನಾನು ಕಾಣೆನೇ? ನಿನ್ನನ್ನೇ ಕೇಳಬೇಕು ಅನ್ನಿಸಿತು. ಬಂದೆ."

ಈ ವೇಳೆಗೆ ನನ್ನವು ಎರಡು ಮೂರು ಕಾದಂಬರಿಗಳು ಪ್ರಕಟವಾಗಿದ್ದು, ಈ ಅಂಶ ಅವರನ್ನ ನನ್ನ ಕಡೆಗೆ ಬರಮಾಡಿರಬೇಕು ಎಂದುಕೊಂಡೆ.

ಗೆಳೆಯ ನನಗೆ ಗೌರವ ತೋರಿಸಿದ್ದ. ಐತಿಹಾಸಿಕ ಕಾದಂಬರಿಯ ಸ್ವರೂಪ, ಕನ್ನಡದಲ್ಲಿ ಆ ಕ್ಷೇತ್ರದಲ್ಲಿ ಆಗಿದ್ದ ಅಲ್ಪಸ್ವಲ್ಪ ಕೆಲಸ, ಎ. ಆರ್. ಕೃ. ಅವರ 'ಕನ್ನಡ ಐತಿಹಾಸಿಕ ಕಾದಂಬರಿಗಳು ' ಎಂಬ ವಿಷಯವಾಗಿ ಪ್ರಬುದ್ಧ ಕರ್ಣಾಟಕದಲ್ಲಿ ಬರೆದಿದ್ದ ಲೇಖನ, ಹಡ್ಸನ್‌ರವರ **An Introduction to the study of Literature**, ಇವುಗಳನ್ನು ಪ್ರಸ್ತಾಪಿಸಿ, ಕೆಲವು ಸಲಹೆ ಸೂಚನೆಗಳನ್ನು ಕೊಟ್ಟು, ಪ್ರಬಂಧ

ಬರೆಯುವಂತೆ ಹೇಳಿದೆ. ಕುಮಾರಿ ಮಂಗಳ ಪ್ರಬಂಧವನ್ನು ಬರೆದು ತಂದು ತೋರಿಸಿದಳು. ನನಗೆ ತೋರಿದಂತೆ ಅದನ್ನು ಅಲ್ಲಿ ಇಲ್ಲಿ ಕೈಯಾಡಿಸಿಕೊಟ್ಟೆ. ಅವಳಿಗೆ ಆಗ ನನ್ನ ಶಿಕ್ಷಣ ಇಷ್ಟೆ. ರಾಜರತ್ನಂ, ವಿ. ಸಿ., ಇಂಥ ಗುರು ಶ್ರೇಷ್ಠರಿಂದ ಸ್ಫೂರ್ತಿ ದಾಯಕ ಶಿಕ್ಷಣವನ್ನು ಪಡೆದ, ದೈವದತ್ತವಾದ ಬರಹದ ಶಕ್ತಿಯುಳ್ಳ ಯಾರು ತಾನೇ ಬರಹಗಾರರಾಗಿ ಬೆಳೆದು ಹೆಸರು ಮಾಡಿಲ್ಲ? ಮಂಗಳ ಈಚಿನ ಕೆಲವು ವರ್ಷಗಳಲ್ಲಿ 'ಹೆಲೆನಾಕೆಲರ್' ಮುಂತಾದ ಕೆಲವು ಬಹಳ ಒಳ್ಳೆಯ ಪುಸ್ತಕಗಳನ್ನು ಬರೆದಿದ್ದಾರೆ; ಗಣ್ಯ ಲೇಖಕಿ ಎನ್ನಿಸಿಕೊಂಡಿದ್ದಾರೆ. ಇವರ ತಾಯಿ ಶ್ರೀಮತಿ ನರಸಿಂಹಮೂರ್ತಿ ರಾಜೇಶ್ವರಿ ಒಳ್ಳೆ ಕಥೆಗಳನ್ನುಳ್ಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ತಂದೆ ತಾಯಿಗಳ ಬರಹದ ಶಕ್ತಿ ಈ ಮಗಳಲ್ಲಿ ಇಳಿದು ಬಂದಿರುವುದು ಸಹಜವಾಗಿಯೆ ಇದೆ. ಜೊತೆಗೆ, ತಂದೆಯ ದೊಡ್ಡ ಗುಣಗಳೆಲ್ಲ–ಸ್ನೇಹಪರತೆ, ಹೃದಯ ವೈಶಾಲ್ಯ, ಬೌದ್ಧಿಕವಾಗಿ ಸಾಮಾಜಿಕವಾಗಿ ಅಶಕ್ತರಾದವರಲ್ಲಿ ಅನುಕಂಪ. ಸಮಾಜ ಸುಧಾರಣಾ ಪ್ರವೃತ್ತಿ ಇವೆಲ್ಲ ಈಕೆಯಲ್ಲಿ ಮೂರ್ತಿಮತ್ತಾಗಿವೆ. ನನ್ನಲ್ಲಿ ಈಕೆ ತೋರುತ್ತಿರುವುದು ತಂದೆಯ ಮಿತ್ರ ಎಂಬ ನಿಮಿತ್ತವಾದ ಗೌರವ ಮಾತ್ರವಲ್ಲ. ಎರಡು ಅಕ್ಷರ ಕಲಿಸಿದಾತನೂ ಗುರು ಎಂಬ ನಮ್ಮ ನಾಡಿನ ಆತ್ಮೀಯವಾದ ಮಾತಿಗೆ ಅರ್ಥ ತುಂಬಿ ಈಕೆ ನನ್ನಲ್ಲಿ ಇಟ್ಟಿರುವ ಗುರುಭಕ್ತಿ. ಇದು ನನ್ನ ಪುಣ್ಯ.

ಅಂತೂ ತಮ್ಮ ಮಗಳನ್ನು ನನ್ನ ಮನೆಗೆ ಕರೆದುಕೊಂಡು ಬಂದು ಪರಿಚಯ ಮಾಡಿಸಿಕೊಡುವ ಸಂದರ್ಭದಲ್ಲಿ ನರಸಿಂಹಮೂರ್ತಿ ನನ್ನ ಮನೆಗೆ ಒಂದೆರಡು ಸಲ ಬರುವಂತಾಯಿತು. ಅವರಿಗೆ, ಅವರ ಮಗಳು ಮಂಗಳಾಗೆ, ನಾನು ಮಾಡಿದ್ದು–ಒಂದು ಸಣ್ಣ ಉಪಕಾರ ಎನ್ನಬಹುದಾದರೆ–ನಿಜವಾಗಿ ಉಪಕಾರವಲ್ಲ; ಪ್ರತ್ಯುಪಕಾರ. ಹೇಗೆ ಎನ್ನುವುದನ್ನು ವಿವರಿಸುತ್ತೇನೆ.

ನಾನು ಬಿ. ಎ. ತರಗತಿಗಳಲ್ಲಿ ವಿದ್ಯಾರ್ಥಿಯಾಗಿದ್ದಾಗ, (1930) ನರಸಿಂಹ ಮೂರ್ತಿ ಬಿ. ಎ. ಆನರ್ಸ್ (ಅರ್ಥಶಾಸ್ತ್ರ ಮುಖ್ಯ ವ್ಯಾಸಂಗ ವಿಷಯ) ವಿದ್ಯಾರ್ಥಿ· ಇಂಗ್ಲಿಷ್ ಮತ್ತು ದ್ವಿತೀಯ ಭಾಷೆ ಕನ್ನಡ ತರಗತಿಗಳಲ್ಲಿ ಮಾತ್ರ ಒಟ್ಟಿಗೆ ಕಲಿಯು ತ್ತಿದ್ದೆವು. ಆಗ ಎರಡು ವರ್ಷ ಕಾಲ ಮೂರ್ತಿ ವಿಶ್ವವಿದ್ಯಾನಿಲಯದ ಯೂನಿಯನ್ನಿನ ವಿದ್ಯಾರ್ಥಿ ಕಾರ್ಯದರ್ಶಿ. ಚರಿತ್ರೆಯ ಅಧ್ಯಾಪಕರಾಗಿದ್ದ ನಾ. ಕಸ್ತೂರಿ ಅಧ್ಯಾಪಕ ಕಾರ್ಯದರ್ಶಿ. ಯೂನಿಯನ್ನಿನ ಕನ್ನಡ, ಇಂಗ್ಲಿಷ್ ಎಲೊಕ್ಯೂಷನ (ವಾಚಕಾಭಿನಯ) ಸ್ಪರ್ಧೆಗಳು, ವಾದ್ಯಗೋಷ್ಠಿ, ಕನ್ನಡ ಮತ್ತು ಇಂಗ್ಲಿಷ್ ಚರ್ಚಾ ಕೂಟಗಳು, ನಾಟಕಾಭಿನಯ, ವಿದ್ಯಾರ್ಥಿಗಳ ಚಿತ್ರಕಲಾಪ್ರದರ್ಶನ–ಇವುಗಳಲ್ಲೆಲ್ಲ ನಾನೂ ಭಾಗವಹಿಸುತ್ತಿದ್ದೆ. ಕೆಲವಲ್ಲಿ ಬಹುಮಾನವನ್ನೂ ಪಡೆದೆ. ಈ ಸಂದರ್ಭ. ಗಳಲ್ಲಿ ನರಸಿಂಹಮೂರ್ತಿಯ ಪ್ರೋತ್ಸಾಹ, ಮೆಚ್ಚಿಗೆ, ನನ್ನ ಪಾಲಿಗಿದ್ದವು. ಸಹಜ ವಾಗಿಯೆ ನನ್ನ ನರಸಿಂಹಮೂರ್ತಿಯ ಸ್ನೇಹ, ಸಲಿಗೆ ಬೆಳೆಯಲು ಅವು ಕಾರಣವಾದವು.

ನನ್ನ ಸುಪ್ತ ಕಲಾಶಕ್ತಿಗಳನ್ನು ಗುರುತಿಸಿ ಮೆಚ್ಚಿಕೊಂಡು, ಬೆನ್ನು ತಟ್ಟುತ್ತಿದ್ದವರಲ್ಲಿ ಈತನೂ ಒಬ್ಬ. ಯೂನಿಯನ್ ಪತ್ರಿಕೆಗೆ ನರಸಿಂಹಮೂರ್ತಿ ವಿದ್ಯಾರ್ಥಿಗಳ ಪರವಾಗಿ ಸಂಪಾದಕ; ನಾನು ಸಂಪಾದಕ ಮಂಡಲಿಯ ಸದಸ್ಯರಲ್ಲಿ ಒಬ್ಬ. ನನ್ನ ಚೊಚ್ಚಲು ಬರಹಗಳಲ್ಲಿ ಕೆಲವನ್ನು ('ಮುಗಿಲುಗಳು' ಎಂಬ ಲಲಿತ ಪ್ರಬಂಧ, 'ಬೀದಿಯೊಳ ಗಲೆಯುತಿಹಳಾರಿವಳು ಚೆಲುವೆ' ಎಂಬ ಪದ್ಯ, ಮುಂತಾದವು) 'ರಾಘವ' ಎಂಬ ಕಾವ್ಯನಾಮದಲ್ಲಿ ಪ್ರಕಟನೆಗೆ ಕೊಟ್ಟಿದ್ದೆ. ನನ್ನ ನಿಜನಾಮವನ್ನೂ ತರಗತಿಯನ್ನೂ ಕಾಣಿಸಿರಲಿಲ್ಲ. ಎ. ಎನ್. ಮೂರ್ತಿರಾಯರು ಸಂಪಾದಕ ಮಂಡಲಿಯ ಅಧ್ಯಕ್ಷರು ಎಂದು ನೆನಪು. ನರಸಿಂಹಮೂರ್ತಿ ನನ್ನ ಬರಹಗಳನ್ನು ಪ್ರಕಟನಾರ್ಹ ಎಂದು ಆಯ್ದಿದ್ದ. ಸಂಪಾದಕ ಮಂಡಲಿಯ ಸಭೆಯಲ್ಲಿ, ನನ್ನ ಕಡೆ ತುಂಟ ನಗೆ ಬೀರುತ್ತ– "ಬರಹಗಳೇನೋ ಚೆನ್ನಾಗಿವೆ. ಆದರೆ ಬರೆದವರು ಯಾರು ಎನ್ನುವುದನ್ನು ತಿಳಿಸಿಲ್ಲ. ಹಾಕೋಣವೋ ಬೇಡವೋ?" ಎಂದು ಅಧ್ಯಕ್ಷರ ಮುಖ ನೋಡಿದ. ಅವರು, "ಕರ್ಣಾಟಕ ಸಂಘ ನಡಸಿದ ವಿದ್ಯಾರ್ಥಿ ಕವಿ ಸಮ್ಮೇಳನದಲ್ಲಿ ಓದಿದ ಪದ್ಯ ಅಲ್ಲವೆ, ಇದು" ಎಂದು ಅರ್ಥಪೂರ್ಣವಾಗಿ ನನ್ನ ಕಡೆ ನೋಡಿದರು. (ಹೀಗೆಂದು ನನ್ನ ನೆನಪು.) ನಾನು ಸಿಕ್ಕಿಬಿದ್ದೆ. ಬರಹಗಳು ನನ್ನವು ಎಂದು ದೃಢಪಟ್ಟು, ಅನುಕ್ರಮವಾಗಿ ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದುವು. ಪದ್ಯ, ಮುಂದೆ ಕರ್ಣಾಟಕ ಸಂಘ ಪ್ರಕಟಿಸಿದ 'ತಳಿರು' ಕವನ ಸಂಕಲನದಲ್ಲಿ ಸೇರ್ಪಡೆಯಾಗಿ, ತರುಣ ಕವಿಗಳ ಸಾಲಿನಲ್ಲಿ ಎಡೆ ದೊರೆಯಿತು. ವಿದ್ಯಾರ್ಥಿ ದಶೆಯಲ್ಲಿ ಬರೆದು, ವಿದ್ಯಾರ್ಥಿಗಳ ಪತ್ರಿಕೆಯಲ್ಲಿ ಪ್ರಕಟವಾದ 'ಮುಗಿಲುಗಳು' ಎಂಬ ಪ್ರಬಂಧ ನನ್ನ ಪಾಲಿನ ರೂಪಾಯಿ ಗಿಡವಾಗಿ ಪರಿಣಮಿಸಿ, ಇಂದಿಗೂ ರಾಯಲ್ಟಿಯನ್ನು ತಂದು ಕೊಡುತ್ತ, ನನಗೆ ಸಾವಿರಾರು ರೂಪಾಯಿಗಳನ್ನು ಸಂಪಾದಿಸಿ ಕೊಟ್ಟಿದೆ. ಅದು ಈಚೆಗೆ ಇಂಗ್ಲಿಷಿಗೂ ಭಾಷಾಂತರ ವಾಗಿದೆ. ಬರಹಗಾರನಿಗೆ ವಯಸ್ಸಾಗುತ್ತದೆ; ಬರಹಕ್ಕೆ ವಯಸ್ಸಿನ ಲೆಕ್ಕ ಇಲ್ಲ. ಇದು ಹಾಗಿರಲಿ. ಅಂತೂ, ನನ್ನನ್ನು ಒಬ್ಬ ಲೇಖಕ ಎಂದು ಮೊದಲಿಗೆ ಬೆಳಕಿಗೆ ತಂದ ಶ್ರೇಯಸ್ಸು ಮೂರ್ತಿದ್ವಯರಿಗೆ ಸಲ್ಲುತ್ತದೆ. (ಪ್ರೊ. ಮೂರ್ತಿರಾಯರ ಪೂರ್ತಿಯಾದ ಹೆಸರು ನರಸಿಂಹಮೂರ್ತಿ.)

ನಮ್ಮ ಕಾಲೇಜು ದಿನಗಳಲ್ಲಿ ನಡೆಯುತ್ತಿದ್ದ ಪ್ರಮುಖ ಪಠ್ಯೇತರ ಕಾರ್ಯ ಕಲಾಪಗಳು ಇವು: ಕರ್ಣಾಟಕ ಸಂಘದ ಕಾರ್ಯಕಲಾಪಗಳು, ಇಂಗ್ಲಿಷ್ ಮತ್ತು ಕನ್ನಡ ಚರ್ಚಾಕೂಟಗಳು, ಕನ್ನಡ ಇಂಗ್ಲಿಷ್ ನಾಟಕಗಳ ಪ್ರದರ್ಶನ, ಕ್ರಿಕೆಟ್ ಟೆನಿಸ್ ಫುಟ್‌ಬಾಲ್ ಮುಂತಾದ ಕ್ರೀಡೆಗಳು, ಇತ್ಯಾದಿ. ನಾನು ಕ್ರೀಡೆಗಳಲ್ಲಿ ಭಾಗವಹಿಸು ತ್ತಿರಲಿಲ್ಲ. ನರಸಿಂಹಮೂರ್ತಿ ಒಮ್ಮೊಮ್ಮೆ ಟೆನಿಸ್ ಆಟದಲ್ಲಿ ಭಾಗವಹಿಸುತ್ತಿದ್ದುದನ್ನು ಕಾಣುತ್ತಿದ್ದೆ. ಟೆನಿಸ್ ಶ್ರೀಮಂತ ಪುತ್ರರ ಆಟ ಎಂದು ನನ್ನ ಭಾವನೆಯಾಗಿತ್ತು. ನಮ್ಮಿಬ್ಬರಿಗೂ ಸಮಾನ ಮಿತ್ರರಾಗಿದ್ದ ಕೆ. ಆರ್. ಪೂರ್ಣ (ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡ, ಪಾಪ; ಮಹಾರಾಜರವರ ಕೌನ್ಸಲರ್ ಆಗಿದ್ದ ಪಿ. ರಾಘವೇಂದ್ರ

ರಾಯರ ಮೊಮ್ಮಗ) ಎಂ. ಎಸ್. ಸ್ವಾಮಿನಾಥನ್, ವಿ. ಕೆ. ಶ್ರೀನಿವಾಸನ್, ಶ್ರೀ ಸತ್ಯನ್, ಇವರು ನರಸಿಂಹಮೂರ್ತಿಯನ್ನು ಟೆನಿಸಿಗೆ ಸೆಳೆದಿದ್ದರೆಂದು ನನ್ನ ಈಗಿನ ಊಹೆ. ಮೂರ್ತಿ ಸಂಗೀತ ನಾಟಕಗಳಿಂದ ದೂರವಿದ್ದರೂ, ಅವುಗಳ ಚಾಲಕ ಶಕ್ತಿಗಳಲ್ಲಿ ಒಬ್ಬ ಪ್ರಮುಖ. ಸಂಗೀತ ವಾದ್ಯಗೋಷ್ಠಿಯ ಹಾಗೂ ನಾಟಕ ಗಳ ಅಭ್ಯಾಸ ನಡೆಯುತ್ತಿದ್ದಾಗ ಹಾಜರಿರುತ್ತಿದ್ದ. ಯೂನಿಯನ್ ಆಶ್ರಯದಲ್ಲಿ ವ್ಯವಸ್ಥೆಗೊಂಡಿದ್ದ ರಾಮಯ್ಯರ್ ಹೋಟಲಿನಿಂದ ಜಾಮೂನ್, ದಮರೋಟ್, ಜಾಂಗಿರ್, ಮಸಾಲೆದೋಸೆ—ಇವುಗಳನ್ನು ಪುಷ್ಕಳವಾಗಿ ತಿನ್ನಿಸುತ್ತಿದ್ದ. ಆತ ಹಾಜರಿಲ್ಲದ ದಿನ ತಿಂಡಿ ಬರುವುದು ತಡವಾಗುತ್ತಿತ್ತು ; ಇಲ್ಲವಾಗುತ್ತಿದ್ದುದೂ ಉಂಟು.

ವಿದ್ಯಾರ್ಥಿಲೋಕದಲ್ಲೂ ಅಧ್ಯಾಪಕವೃಂದದಲ್ಲೂ ನರಸಿಂಹಮೂರ್ತಿ ಹೆಸರಾಗಿ ದ್ದುದು ಆತನ ವಾಗ್ಮಿತೆಯಿಂದ. ಇಂಗ್ಲಿಷ್, ಕನ್ನಡ—ಎರಡರಲ್ಲೂ ಮೋಹಕ ಶೈಲಿಯ ಅಸ್ಖಲಿತ ಪ್ರಾಸಾರಿಕವಾಣಿ ಆತನದು. ಹಾಸ್ಯ, ವಿಡಂಬನೆ, ಕುಚೋದ್ಯ ಇವುಗಳಿಂದ ಸಭಿಕರನ್ನು ಆಕರ್ಷಿಸುವುದು ಸುಲಭ. ಅಂದರೆ ಅದು ಕಡಮೆಯ ದರ್ಜೆಯ ಗುಣಗಳು ಎಂದು ನನ್ನ ಅಭಿಪ್ರಾಯವಲ್ಲ. ಶ್ರೀಮಂದ್ಗಾಂಭೀರ್ಯವಲ್ಲದ ಗಂಭೀರಶೈಲಿ ನರಸಿಂಹಮೂರ್ತಿಯದು. ಇಷ್ಟರ ಜೊತೆಗೆ, ಮನಮೋಹಕವಾದ ಸ್ಫುರದ್ರೂಪ. ಸೂಟು ಧರಿಸುತ್ತಿರಲಿಲ್ಲ. ನಾನು ಧರಿಸುತ್ತಿದ್ದಂತೆ ವೇಷ್ಟಿ ಪಂಚೆ ; ಖಾದಿ ಬಟ್ಟೆಯ ಷರಟು, ಕೋಟು. ತುಸ ಕೆಂಪು ಛಾಯೆಯ ಗುಂಗರು ಕೂದಲ ಕ್ರಾಪು ಕೆಂಗಾಂತಿಯ ಬಿಳಿಬಣ್ಣದ ಅಂದವಾದ ಮಾಟದ ಮುಖಕ್ಕೆ ವಿಲಕ್ಷಣವಾಗಿ ಒಪ್ಪುತ್ತಿತ್ತು. ಈತ ಸೂಟು ಧರಿಸಿ, ಇಂಗ್ಲಿಷ್ ಪ್ರೊಫೆಸರುಗಳಾಗಿದ್ದ, ಜೆ. ಸಿ. ರಾಲೋ, ಎ.ಬಿ. ಮ್ಯಾಕಿಂಟಾಷ್ ಇವರ ಜೊತೆ ಓಡಾಡುತ್ತಿದ್ದರೆ ಅಪರಿಚಿತರಿಗೆ ಒಬ್ಬ ಇಂಗ್ಲಿಷರವನಂತೆಯೇ ಕಾಣುತ್ತಿದ್ದ.

ಆರ್ಥಿಕ ಸ್ಥಿತಿಯಲ್ಲಿ ನರಸಿಂಹಮೂರ್ತಿ ನನ್ನ ಗೋತ್ರಕ್ಕೆ ಸೇರಿದಾತ ಎಂಬ ಸಂಗತಿ ನನಗೆ ತಿಳಿದಿರಲಿಲ್ಲ. ಅದು ತಿಳಿದು ಬಂದ ಸಂದರ್ಭ ಹೀಗೆ: ನಾನಿದ್ದ ಅಗ್ರಹಾರದ ಬೀದಿಯಿಂದ ಕಾಲೇಜಿಗೆ ಹೋಗುವ ದಾರಿಯಲ್ಲಿ ಲಕ್ಷ್ಮೀಪುರದಲ್ಲಿ, ಪಿ. ರಾಘವೇಂದ್ರರಾಯರ ಮನೆ. ಒಂದೊಂದು ದಿನ "ನಾಳೆ ನಮ್ಮ ಮನೆಗೆ ಬಂದು ಬಿಡು. ಊಟಮಾಡಿಕೊಂಡು ಒಟ್ಟಿಗೆ ಕಾಲೇಜಿಗೆ ಹೋಗೋಣ" ಎಂದು ಪೂರ್ಣ ನನಗೆ ಆಹ್ವಾನ ನೀಡುತ್ತಿದ್ದ. ತನ್ನ ಕಾರಿನಲ್ಲಿ ಕಾಲೇಜಿಗೆ ಕರೆದುಕೊಂಡು ಹೋಗುತ್ತಿದ್ದ. ಹಾಗೆ ಒಂದು ದಿನ ಅವನ ಜೊತೆ ಕಾರಿನಲ್ಲಿ ಹೊರಟಾಗ, ಸುಬ್ಬ ರಾಯನ ಕೆರೆಯ ಬಳಿ ಇದ್ದ ಅನಾಥಾಲಯದ ಮುಂದೆ ಕಾರು ನಿಂತಿತು. ನನಗೆ ಆಶ್ಚರ್ಯ. "ಶಿವ್ ಬರಬಹುದು, ಅವನನ್ನೂ ಕರೆದುಕೊಂಡು ಹೋಗೋಣ" ಎಂದು ಪೂರ್ಣ ಕಾರಿನಿಂದ ಇಳಿದ. ಆಗ ಮೊತ್ತ ಮೊದಲಿಗೆ ನನಗೆ ತಿಳಿಯಿತು

ನರಸಿಂಹಮೂರ್ತಿ ಅನಾಥಾಲಯದಲ್ಲಿ ಅಶನಾರ್ಥ ಅತಿಥಿ ಎಂದು. ಏನೇನೋ ಆಲೋಚನೆಗಳು ತಲೆಯಲ್ಲಿ ಸುಳಿದುವು. ಅವನಿಗಿಂತ ನಾನೇ ಮೇಲು ಎಂದುಕೊಂಡೆ; ನಿಟ್ಟುಸಿರುಬಿಟ್ಟೆ. ಪೂರ್ಣ. ನಾನು, ಇಬ್ಬರೂ ಅನಾಥಾಲಯವನ್ನು ಪ್ರವೇಶಿಸಿದೆವು. ಪೂರ್ಣನ ಜೊತೆ ಮೂರ್ತಿಯ ಕೊಠಡಿಯನ್ನು ತಲಪಿದ್ದಾಯಿತು. ನರಸಿಂಹಮೂರ್ತಿ ತೆಳ್ಳನೆಯ ಮಸ್ಲಿನ್ ಬಟ್ಟೆಯ ಬನಿಯನ್ ಮತ್ತು ಡ್ರಾಯರ್ ಧರಿಸಿ, ಬಿಚ್ಚಿದ್ದ ಹಾಸಿಗೆಯ ಮೇಲೆ ಪುಸ್ತಕಗಳನ್ನೂ ಕಾಗದದ ಹಾಳೆಗಳನ್ನೂ ಹರಡಿಕೊಂಡು, ವ್ಯಾಸಂಗದಲ್ಲಿ ಮಗ್ನನಾಗಿದ್ದ. ಗೋಡೆಗಳ ಮೊಳೆಗಳಿಗೆ ಬಿಗಿದು ಕಟ್ಟಿದ್ದ ಸೊಳ್ಳೆಯ ಪರದೆಯನ್ನು ಮೇಲಕ್ಕೆ ಮುದುರಿ ತೂಗ ಬಿಟ್ಟಿತ್ತು. "ಸಿಮ್, hurry up," ಎಂದು ಪೂರ್ಣ ಅವನನ್ನು ತ್ವರೆಪಡಿಸಿದ. (ಸಿಮ್, ಮೂರ್ತಿಗೆ ಗೆಳೆಯರು ಇಟ್ಟಿದ್ದ ಸಂಕ್ಷಿಪ್ತನಾಮ, ಅಡ್ಡ ಹೆಸರು.) "ಇವತ್ತು ನಾನು ಬರೊಲ್ಲ, ನೀವು ಹೊರಡಿ," ಎಂದು ನಮ್ಮನ್ನು ಬೀಳ್ಕೊಟ್ಟ ಮೂರ್ತಿ.

ಅಂದಿನ ದಿನದವರೆಗೂ ನರಸಿಂಹಮೂರ್ತಿ ಬಡತನದ ದವಡೆಗೆ ಸಿಕ್ಕಿದ್ದ ವಿದ್ಯಾರ್ಥಿ ಎಂದು ನನಗೆ ತಿಳಿದಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ, ನರಸಿಂಹಮೂರ್ತಿ **self-made man** ಸ್ವಸಾಮರ್ಥ್ಯದಿಂದ ಉನ್ನತ ಪದವಿಗೆ ಏರಿದ ವ್ಯಕ್ತಿ ಎನ್ನುವುದು ಅರಿವಿಗೆ ಬರುತ್ತದೆ.

ಮೂರ್ತಿಗೂ ನನಗೂ **free student-ship** ಇದ್ದೇ ಇತ್ತು. ರಾಷ್ಟ್ರಾಭಿಮಾನಿಯಾಗಿದ್ದ, ಮೈಸೂರಿನ ತಾತಯ್ಯ, **grand old man** ಎಂದು ಖ್ಯಾತರಾಗಿದ್ದ, ದಿವಂಗತ ಎಂ. ವೆಂಕಟಕೃಷ್ಣಯ್ಯನವರು ಸ್ಥಾಪಿಸಿದ್ದ ಅನಾಥಾಲಯದ ವಿದ್ಯಾರ್ಥಿಯಾಗಿದ್ದುದರಿಂದ ಸಹಜವಾಗಿಯೇ ಅವರ ಉನ್ನತ ಆದರ್ಶಗಳಿಂದ ಮೂರ್ತಿ ಪ್ರಭಾವಿತನಾಗಿದ್ದ ; ಎಂ.ಸಿ.ಎಸ್. ಪರೀಕ್ಷೆ ಮಾಡದೆ ಇದ್ದಿದ್ದರೆ, ಮೂರ್ತಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುತ್ತಿದ್ದ ಎಂದು ನನಗೆ ಅನ್ನಿಸುತ್ತದೆ.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನರಸಿಂಹಮೂರ್ತಿ ಒಳ್ಳೆಯ ವಾಗ್ಮಿಯಾಗಿದ್ದುದರ ಜೊತೆಗೆ, ಒಳ್ಳೆಯ ಬರಹಗಾರನೂ ಆಗಿದ್ದ. ನನ್ನ ಬರಹಗಳ ಒಂದಿಗೆಯೇ ಅವನ ಬರಹಗಳೂ ಯೂನಿಯನ್ ಪತ್ರಿಕೆಯಲ್ಲಿ ಮೊತ್ತ ಮೊದಲಿಗೆ ಬೆಳಕು ಕಂಡವು. ಆಗ ಮೂರ್ತಿ ಪಿ. ಆರ್. ರಾಮಯ್ಯನವರು ನಡಸುತ್ತಿದ್ದ 'ತಾಯಿನಾಡು' ದಿನಪತ್ರಿಕೆಯ ಮೈಸೂರು ವರದಿಗಾರನಾಗಿ, ಆ ಪತ್ರಿಕೆಗೆ ಸುದ್ದಿ ಸಂಗ್ರಹಗಳನ್ನು ಕಳಿಸುತ್ತಿದ್ದ ; ಲೇಖನಗಳನ್ನೂ ಬರೆಯುತ್ತಿದ್ದ. ಅವನ ಬರವಣಿಗೆ ಗಂಭೀರ ವಿಷಯಗಳಿಗೆ ಮೀಸಲು. ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಸೊಗಸಾದ ಗದ್ಯವನ್ನು ಬರೆಯುತ್ತಿದ್ದ ಮೂರ್ತಿ ಗ್ರಂಥರಚನೆಗೆ ತೊಡಗದೆ ಇದ್ದದ್ದು ಗ್ರಂಥಲೋಕಕ್ಕೆ ದೊಡ್ಡ ನಷ್ಟ ಎಂದೇ ನನ್ನ ತಿಳಿವಳಿಕೆ. 'ಹಿಂದೂ' ಪತ್ರಿಕೆಯಲ್ಲಿ ಆರ್ಥಿಕ ವಿಷಯದ

ಗ್ರಂಥಗಳು ಒಂದೆರಡನ್ನು ವಿಮರ್ಶೆ ಮಾಡಿದ್ದನೆಂದು ನನ್ನ ನೆನಪು. 'ಜೀವನ' ಪತ್ರಿಕೆಗೂ ಒಂದೆರಡು ಕನ್ನಡ ಲೇಖನಗಳನ್ನು ಬರೆದಿರಬೇಕು. ಆತ ಉದ್ಯೋಗದಿಂದ ವಿಶ್ರಾಂತನಾಗಿ ಪೂರ್ಣ ವಿಶ್ರಾಂತಿ ಸುಖವನ್ನು ಅನುಭೋಗಿಸುವಂತಾದ ಮೇಲೆ ಕನ್ನಡ ದಲ್ಲಿ ಆತನಿಂದ ಆರ್ಥಿಕ ವಿಷಯಗಳನ್ನು ಕುರಿತು ಗ್ರಂಥರಚನೆ ಮಾಡಿಸಬೇಕು ಎಂಬ ಆಲೋಚನೆ ಇತ್ತು. ಈ ವಿಷಯವಾಗಿ ಒಮ್ಮೆ ಸೂಚನೆಯನ್ನೂ ಕೊಟ್ಟಿದ್ದೆ. ಆದರೆ ಅರುವತ್ತು ತುಂಬುವಷ್ಟರಲ್ಲಿ ವಿಧಿ ಆತನನ್ನು ನಮ್ಮಿಂದ ಅಗಲಿಸಿತು.

ನರಸಿಂಹಮೂರ್ತಿ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಕಗೊಳ್ಳುವ ಮುನ್ನ ಮಿತ್ರ ಆರ್. ಕೆ. ಶ್ರೀನಿವಾಸನ್ ಅವರ (ಕಾದಂಬರಿಕಾರ ಆರ್. ಕೆ. ನಾರಾಯಣ್ ಅವರ ತಮ್ಮ) ಜೊತೆಗೂಡಿ '**Labour and Housing in Bangalore City**' ಎಂಬ ವಿಷಯವಾಗಿ ಅಧ್ಯಯನ ನಡಸಿದ್ದು ಆ ಸಂಬಂಧದ ಸಂಶೋಧನ ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಶಾಖೆಯಿಂದ ಪ್ರಕಟವಾಯಿತು. 1950 ರಲ್ಲಿ ಮೈಸೂರು ಮಹಾರಾಜರವರ ಕಾಲೇಜಿನ ಶತಮಾನೋತ್ಸವ ನಡೆಯಿತಷ್ಟೆ. ಆ ಉತ್ಸವದ ಸವಿನೆನಪಿಗೆಂದು ಪ್ರಕಟವಾಗಿರುವ ಸಂಪುಟದಲ್ಲಿ ನರಸಿಂಹ ಮೂರ್ತಿ ಬರೆದಿರುವ '**The Union of my time**' ಎಂಬ ನೆನಪಿನ ನುಡಿಚಿತ್ರ ಲಘುಲಹರಿಯ ಬರವಣಿಗೆಯಲ್ಲೂ ಆತನ ಸಾಮರ್ಥ್ಯ ಹೇಗೆ ಬಹು ಫಲಗಳನ್ನು ಕೊಡಬಹುದಾಗಿತ್ತು ಎನ್ನುವದಕ್ಕೆ ನಿದರ್ಶನವಾಗಿದೆ. ಯೂನಿಯನ್ನಿನ ಇಂಗ್ಲಿಷ್ ಚರ್ಚಾಕೂಟಗಳಲ್ಲಿ ಭಾಗವಹಿಸುತ್ತಿದ್ದ ನಮ್ಮ ಗುರುಗಳ ವಾಗ್ವೈಖರಿಯನ್ನು ನರಸಿಂಹಮೂರ್ತಿ ಬಣ್ಣಿಸಿರುವ ರೀತಿಯಲ್ಲಿ ಸೂಕ್ಷ್ಮ ನಿರೀಕ್ಷಣ ಮತ್ತು ಲಘುಹಾಸ್ಯ ಮಿನುಗುವುದನ್ನು ಕಾಣಬಹುದು :

" A noteworthy feature of Union debates was the keen interest evinced in them not only by students but also by members of the staff from whom we derived inspiration and intellectual sustenance. Speaking of union debates, one can never forget certain personalities - Principal J. C. Rollo who enlivened the dullest of subjects with a style of speech fresh like air in the fields around Maharaja's College on a morning after a night of summer rain and with delightful humour, Professor A. B. Mackintosh whose child-like eyes twinkled with mischief when he countered heavy argument with delicate sarcasm; Professor A. R. Wadia whose silvery eloquence compelled respectful hearing; Professor V. L. D'Souza who could, with or without previous notice, make an appropriate speech for any occasion, and whose jokes, stories and anecdotes made him the most

popular "Mr. Speaker"; Professor C. R. Narasimha Sastry who spoke English with Vedic accent and whose undisguised cynicism thrust points home: Sri N. Kasturi whose genuine wit and refreshing outlook marked him out as an accomplished speaker; and Sri M. A. Venkata Rao whose profound learning and fluency made one wonder whether thought or speech was the quicker of the two with him."

ನಮ್ಮ ಪೂರ್ಣನ ವಾಗ್ಮಿತೆಯ ಬಗೆಗೆ ನರಸಿಂಹಮೂರ್ತಿ ಹೇಳಿರುವ ಮಾತುಗಳನ್ನು ಇಲ್ಲಿ ಉದ್ಧರಿಸದೆ ಇರಲಾರೆ :

"The late Sri K. R. Purna, who enriched college life in many ways, was a speaker of great ability, his general knowledge and deep study of subjects were excelled only by his powers of expression."

ಇನ್ನೊಂದು ಮುಖ್ಯ ಸಂಗತಿಯನ್ನು ಇಲ್ಲಿ ಉಲ್ಲೇಖಿಸಬೇಕು : ಮೈಸೂರಿನ ಅಗ್ರಹಾರದಲ್ಲಿ, ನನ್ನ ಕಾಲೇಜು ವ್ಯಾಸಂಗದ ದಿನಗಳಲ್ಲಿ, ನಾನು ವಾಸವಾಗಿದ್ದ ಬೀದಿಯ ಹಿಂದಿನ ಬೀದಿಯಲ್ಲಿ ಸುಮಾರು 12 ವರ್ಷಗಳ ಎಳೆಹರೆಯದ ಬಾಲಿಕೆ ಮದುವೆಯಾದ ತರುಣದಲ್ಲೆ ವಿಧವೆಯಾದದ್ದು ನನ್ನ ಹೃದಯವನ್ನು ಹಿಂಡಿತ್ತು. ಆ ಸಂದರ್ಭ, ಆಗ ಬರೆದ ನನ್ನ ಮೊದಲ ನಾಟಕ 'ಹೂವಿನ ಆಸೆ'ಗೆ ಸ್ಫೂರ್ತಿ ನೀಡಿತು. ನಾಟಕದಲ್ಲಿ ಬಾಲವಿಧವೆಗೆ ನಾನು ಮದುವೆ ಮಾಡಿಸಿದ್ದೇನೆ. ಆದರೆ ವಾಸ್ತವ ಜೀವನದ ಆ ವಿಧವೆ ಪುನರ್ವಿವಾಹವಾಗುವ ಪುಣ್ಯ ಪಡೆದಿರಲಿಲ್ಲ, ಸುಮಾರು 1934ರಲ್ಲಿ. ನನ್ನ ನಾಟಕ ಪ್ರಕಟವಾದದ್ದು 1936ರಲ್ಲಿ. ಈ ನಾಟಕವನ್ನು ನರಸಿಂಹಮೂರ್ತಿ ಓದಿದ್ದನೋ ಇಲ್ಲವೋ ನಾನರಿಯೆ. ಅಂತೂ, ಆತ ಬಾಲವಿಧವೆಯಾದ ಕನ್ಯೆಯನ್ನು ಮದುವೆಯಾದ ಸುದ್ದಿಯನು ಕೇಳಿ ನನಗೆ ಸಂತೋಷವಾಯಿತೆಂದು ಹೇಳಬೇಕಾಗಿಲ್ಲವಷ್ಟೆ. ನಾನು ನಾಟಕದ ಮೂಲಕ 'ಆಡಿ' ತೋರಿಸಿದ್ದನ್ನು ಆತ 'ಮಾಡಿ' ತೋರಿಸಿದ್ದ. ಸಮಾಜದ ಲೋಪದೋಷಗಳು ನಿವಾರಣೆಯಾಗಬೇಕಾದರೆ ಆಡಿದರೆ ಸಾಲದು, ಮಾಡಿ ಮಾರ್ಗದರ್ಶಕರಾಗಬೇಕು, ನರಸಿಂಹಮೂರ್ತಿ ಮಾಡಿದ ಹಾಗೆ. ಇಂದಿನ ದಿನಗಳಲ್ಲಿ ಬಾಲವಿಧವೆಯರ ಸಮಸ್ಯೆ ಇಲ್ಲವೆಂದೇ ಹೇಳಬೇಕು. ಅಂದಿನ ದಿನಗಳಲ್ಲಿ ನರಸಿಂಹಮೂರ್ತಿ ಇಟ್ಟದ್ದು ನಿಜವಾಗಿ ಒಂದು ದಿಟ್ಟ ಕ್ರಾಂತಿಕಾರಿ ಹೆಜ್ಜೆಯಾಗಿತ್ತು.

ವಿದ್ಯಾರ್ಥಿ ಜೀವನದಲ್ಲಿ ನರಸಿಂಹಮೂರ್ತಿ ಅನಾಥಾಲಯದ ನಿವಾಸಿಯಾಗಿದ್ದದರಿಂದ ಆತ ಸಹಜವಾಗಿಯೆ 'ತಾತಯ್ಯ'ನವರ ಪ್ರಭಾವಕ್ಕೆ ಒಳಗಾಗಿದ್ದ.

'ತಾಯಿನಾಡು' ಪತ್ರಿಕೆಯ ಸಂಪಾದಕರಾಗಿದ್ದ ಪಿ. ಆರ್. ರಾಮಯ್ಯನವರ ಸಂಪರ್ಕವೂ ನರಸಿಂಹಮೂರ್ತಿಯಮೇಲೆ ಪ್ರಭಾವ ಬೀರಿತ್ತು. ಹೀಗಿರುತ್ತ, ವಿದ್ಯಾರ್ಥಿ ದಶೆಯಲ್ಲಿ ಇತರ ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತಿದ್ದುದಕ್ಕಿಂತ ಹೆಚ್ಚು ತೀವ್ರವಾದ ರೀತಿಯಲ್ಲಿ ರಾಷ್ಟ್ರಪ್ರೇಮ ಆತನಲ್ಲಿ ವ್ಯಕ್ತಪಟ್ಟಿತ್ತು. ಆದರೆ ಆತನ ಜೀವನ ಗತಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದ ವಿಧಿ ಮೂರ್ತಿಯ ಮನಸ್ಸನ್ನು ಎಂ. ಸಿ. ಎಸ್. ಪರೀಕ್ಷೆಯ ಕಡೆಗೆ ಸೆಳೆಯಿತು. ಆ ಪರೀಕ್ಷೆಯಲ್ಲಿ ಆತ 'ರ್‍ಯಾಂಕ್' ಗಳಿಸಿ, ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿದ; ಕಾಲಕ್ರಮದಲ್ಲಿ, ದಕ್ಷ ಅಧಿಕಾರಿ ಎಂದು ಅಧಿಕಾರಿ ವಲಯಗಳಲ್ಲಿ ಮನ್ನಣೆ ಪಡೆದ. ಅಧಿಕಾರಾವಧಿಯ ಕಡೆಯ ಭಾಗದಲ್ಲಿ, ಕೊಡಗಿನಲ್ಲಿ ಛೀಫ್ ಕಮಿಷನರಾಗಿದ್ದಾಗ, ಆತನ ಆರೋಗ್ಯ ಹದಗೆಟ್ಟಿತು. ಆ ಕಾರಣದಿಂದ ಬೆಂಗಳೂರಿಗೆ ವರ್ಗವಾಗಿ ಬಂದದ್ದಾಯಿತು. ಆ ತನಕ ಆತನ ಹಾಗೂ ನನ್ನ ನಡುವೆ ಯಾವ ಬಗೆಯ ಸಂಪರ್ಕವೂ ಇರಲಿಲ್ಲ. ಬೆಂಗಳೂರಿನಲ್ಲಿ ಆತ ನೆಲಸಿದ ಮೇಲೆ ನನ್ನ ಮನೆಯನ್ನು ಹುಡುಕಿಕೊಂಡು ಮಗಳು ಮಂಗಳಾ ಅವರೊಂದಿಗೆ ಬಂದ ಸಂದರ್ಭ ಈ ಮೊದಲು ತಿಳಿಸಿರುವುದೇ ಆಗಿದೆ. ಅನೇಕಾನೇಕ ವರ್ಷಗಳ ಸಂಪರ್ಕ ರಹಿತ ಅಂತರ ಆತನ ಸ್ನೇಹ ಪರತೆಯನ್ನು ಮಸುಳಿಸಿರಲಿಲ್ಲ. ನನ್ನ ಎರಡನೆಯ ಮಗನ ಉಪನಯನ ಸಂದರ್ಭದಲ್ಲಿ ನಾನು ಕಳಿಸಿಕೊಟ್ಟಿದ್ದ ಆಹ್ವಾನವನ್ನು ಸ್ವೀಕರಿಸಿ ಬಂದು ವಟುವಿಗೆ **P.O.D.** ನಿಘಂಟನ್ನು ಉಡುಗೊರೆ ಕೊಟ್ಟ ಮೂರ್ತಿ. ಆ ತರುಣದಲ್ಲೆ ಅವರ ಎರಡನೆಯ ಮಗಳ ಮದುವೆಗೆ ಆಹ್ವಾನಿತನಾಗಿ ಹೋಗಿದ್ದೆ ನಾನು. ಮತ್ತೆ ಎಳೆಕೂಡಿ ಕೊಂಡ ಕೆಳೆಯಿಂದಾಗಿ ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿಯವರ, ಮಂಗಳಾ ಅವರ ಕನ್ನಡ ಕೃತಿಗಳು ನನಗೆ ಉಡುಗೊರೆಯಾಗಿ ಬರತೊಡಗಿದುವು. ಮಂಗಳ ನನ್ನ ಕವಿತೆಯನ್ನು ಕುರಿತು ಪತ್ರಿಕೆಯಲ್ಲಿ ಅಧ್ಯಯನಪೂರ್ಣವೂ ವಿಮರ್ಶಾತ್ಮಕವೂ ಆದ ಲೇಖನವನ್ನು ಬರೆದರು.

ಸದಾ ಸ್ನೇಹ ಸೂಸುವ ಮುಗುಳು ನಗೆಗಿಂತ ಹೆಚ್ಚಿನ ಕೊಡುಗೆಯನ್ನು ನರಸಿಂಹ ಮೂರ್ತಿಯಿಂದ ನಾನು ಎಂದೂ ಬಯಸಿರಲಿಲ್ಲ. ಅರುವತ್ತರ ಅಂಚಿನಲ್ಲಿದ್ದ ಆತನ ಅಂತ್ಯ ದರ್ಶನ ಪಡೆಯುವ ದೌರ್ಭಾಗ್ಯದಲ್ಲಿಯೂ ಆ ಮುಗುಳು ನಗೆಯ ಭಾಗ್ಯ ಪ್ರಾಪ್ತಿ ನನ್ನ ಪಾಲಿಗೆ ಉಳಿದೇ ಇತ್ತು.

ಆದರ್ಶ ಅಧಿಕಾರಿ . . . .

ಜಿ. ನಾರಾಯಣ

ಮೈಸೂರು ರಾಜ್ಯ ರಾಜಪ್ರಭುತ್ವ ಇದ್ದಾಗಲೇ ಇಡೀ ಭಾರತಕ್ಕೆ ಆದರ್ಶ ರಾಜ್ಯ ಎನಿಸಿಕೊಂಡಿತ್ತು. ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಸಾಧಕವಾದ ಯೋಜನೆಗಳನ್ನು ರೂಪಿಸಿ, ಅವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿತ್ತು. ವ್ಯವಸಾಯ, ವಾಣಿಜ್ಯ. ಕೈಗಾರಿಕೆ, ನೀರಾವರಿ, ವಿದ್ಯುದುತ್ಪಾದನೆ, ಮೊದಲಾದ ಕ್ಷೇತ್ರಗಳಲ್ಲೆಲ್ಲ ಅದು ಪ್ರಗತಿ ಸಾಧಿಸಿತ್ತು. ಆಡಳಿತ ನಿರ್ವಹಣೆಯಲ್ಲಿ ಪ್ರಜೆಗಳ ಪಾಲೂ ಇರಲೆಂದು ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆಗಳನ್ನು ಏರ್ಪಡಿಸಿತ್ತು. ಈ ಎಲ್ಲ ಪ್ರಗತಿ ಸಾಧನೆಗೆ ಜನಹಿತವನ್ನೇ ಧ್ಯೇಯವಾಗಿ ಹೊಂದಿದ್ದ ರಾಜ್ಯದ ಅರಸರು ಹಾಗೂ ಸಮರ್ಥರಾದ, ನಿಷ್ಠೆಯಿಂದ ಕೂಡಿದ ಆಡಳಿತಾಧಿಕಾರಿ ವರ್ಗ ಕಾರಣವೆಂದರೆ ಉತ್ಪ್ರೇಕ್ಷೆಯಲ್ಲ.

ಮೈಸೂರಿನ ರಾಜಪ್ರಭುತ್ವ ಇಂಡಿಯನ್ ಸಿವಿಲ್ ಸರ್ವಿಸ್ ಮಾದರಿಯಲ್ಲಿ ಮೈಸೂರು ಸಿವಿಲ್ ಸರ್ವಿಸ್ ವ್ಯವಸ್ಥೆಯನ್ನು ಮಾಡಿತ್ತು. ರಾಜ್ಯದ ಪ್ರತಿಭಾವಂತ ಯುವಕರು ಈ ಸರ್ವಿಸಿಗೆ ಆಯ್ಕೆಯಾಗುತ್ತಿದ್ದರು. ಅವರು ತಮ್ಮ ದಕ್ಷತೆ, ಸಾಮರ್ಥ್ಯ, ಆಡಳಿತ ನಿರ್ವಹಣೆಯಲ್ಲಿನ ಶ್ರದ್ಧೆ, ನಾಡಿನ ಹಿತಸಾಧನೆಯಲ್ಲಿನ ನಿಷ್ಠೆ ಇವುಗಳಿಗೆ ಹೆಸರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದು, ಇಡೀ ರಾಷ್ಟ್ರದ ಸಂಘಟನೆಯಾದ ಅನಂತರ, ಮೈಸೂರು ಸಿವಿಲ್ ಸರ್ವಿಸಿನ ಅಧಿಕಾರಿಗಳು ಅನೇಕರು, ಭಾರತದ ಆಡಳಿತಾಧಿಕಾರ ವರ್ಗದಲ್ಲಿ (ಐ.ಎ.ಎಸ್,) ಮುಂದುವರಿದು ಕರ್ನಾಟಕ ರಾಜ್ಯಕ್ಕೆ ನಿಷ್ಠೆಯಿಂದ ಸೇವೆಸಲ್ಲಿಸಿ ಜನಪ್ರಿಯತೆಗಳಿಸಿದರು. ಇಂಥ ಅಧಿಕಾರಿಗಳಲ್ಲಿ ಅಗ್ರಶ್ರೇಣಿಗೆ ಸೇರಿದವರು ಶ್ರೀ ನರಸಿಂಹಮೂರ್ತಿ ಅವರು.

ನನಗೆ ಅವರ ನೇರ ಪರಿಚಯ ಆಗುವ ಮೊದಲೇ ಅವರ ದಕ್ಷತೆ, ಸಾಮರ್ಥ್ಯ, ನಿಸ್ಪೃಹತೆ, ಕರ್ತವ್ಯ ಶ್ರದ್ಧೆಗಳ ಬಗ್ಗೆ ಕೇಳಿ ತಿಳಿದಿದ್ದೆ. ನೇರ ಪರಿಚಯ ಆದ ಅನಂತರ ಅವರ ವಿಚಾರವಾಗಿ ನಾನು ಕೇಳಿದ್ದುದ್ದೆಲ್ಲಾ ನೂರಕ್ಕೆ ನೂರರಷ್ಟು ಸತ್ಯ ಎಂಬುದು ನನಗೆ ಮನವರಿಕೆಯಾಯಿತು. ಅದಕ್ಕೂ ಹೆಚ್ಚಾಗಿ ನನ್ನನ್ನು ಆಕರ್ಷಿಸಿದ್ದು ಅವರ ನಿರಾಡಂಬರ ಜೀವನ, ಸರಳತೆ, ಸ್ನೇಹಪರತೆ.

ಶ್ರೀ ನರಸಿಂಹಮೂರ್ತಿ ಅವರು 1937-38ರ ಸುಮಾರಿಗೆ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿ ಸರ್ಕಾರಿ ನೌಕರಿಗೆ ಸೇರಿದರು. ಕ್ರಮ ಕ್ರಮವಾಗಿ ಡೆಪ್ಯುಟಿ ಕಮೀಷನರ್ ಮೊದಲಾದ ಮೇಲಿನ ಹುದ್ದೆಗಳಿಗೆ ಬಡತಿ ಹೊಂದಿದರು. ಮೈಸೂರಿನ ಮುನಿಸಿಪಲ್ ಕಮಿಷನರಾಗಿಯೂ, ಡಿವಿಜಲ್ ಕಮಿಷನರಾಗಿಯೂ ಅಧಿಕಾರ ನಿರ್ವಹಿಸಿದರು. ಇವರು ವಹಿಸಿಕೊಂಡಿದ್ದ ಎಲ್ಲ ಹುದ್ದೆಗಳಲ್ಲೂ ದಕ್ಷತೆ, ಸಾಮರ್ಥ್ಯ, ಕ್ರಿಯಾಶೀಲತೆ, ಪ್ರಾಮಾಣಿಕತೆಗಳಿಂದಾಗಿ ಕೀರ್ತಿ ಪಡೆದರು. ಮೇಲಾಗಿ ತಮ್ಮ ಸಹೋದ್ಯೋಗಿಗಳ ಹಾಗೂ ಸಾರ್ವಜನಿಕರ ಪ್ರೀತಿ ಗೌರವಗಳಿಗೂ ಪಾತ್ರರಾಗಿದ್ದರು.

ಶ್ರೀ ನರಸಿಂಹಮೂರ್ತಿ ಅವರು ಅಧಿಕಾರದ ಚೌಕಟ್ಟಿನೊಳಗೆ ಇದ್ದರೂ, ಅವರ ಆಸಕ್ತಿ ಅಷ್ಟಕ್ಕೇ ಸೀಮಿತವಾಗಿರಲಿಲ್ಲ. ಎಲ್ಲ ಸಾರ್ವಜನಿಕ ಕಾರ್ಯಗಳಲ್ಲೂ ಅವರು ಆಸಕ್ತಿ ಹೊಂದಿದ್ದರು. ವಿಶೇಷವಾಗಿ ಸಾಕ್ಷರತೆ, ಸಮಾಜ ಸುಧಾರಣೆ, ಸ್ತ್ರೀ ವಿದ್ಯಾಭ್ಯಾಸ ಮೊದಲಾದ ಕಾರ್ಯಗಳಲ್ಲಿ ಅವರಿಗೆ ವಿಶೇಷ ಒಲವು. ಅಕ್ಷರ ಪ್ರಚಾರ ಬಿರುಸಿನಿಂದ ನಡೆದು, ಜನತೆಯಲ್ಲಿನ ಅಜ್ಞಾನದ ಕತ್ತಲೆ ನಿವಾರಣೆ ಆಗುವವರೆಗೆ ಜನತೆಯ ನಿಜವಾದ ಪ್ರಗತಿ ಸಾಧ್ಯವಿಲ್ಲ ಎಂದು ನಂಬಿದ್ದವರು ಅವರು. ಆದ್ದರಿಂದಲೇ ಅಜ್ಞಾನದ, ಮೌಢ್ಯದ ವಿರುದ್ಧದ ಎಲ್ಲ ಕಾರ್ಯಕ್ರಮಗಳಲ್ಲೂ ಅವರು ಹೆಚ್ಚು ಆಸಕ್ತಿಯಿಂದ ಭಾಗವಹಿಸಿ ದುಡಿಯುತ್ತಿದ್ದರು.

ರಾಜ್ಯದ ಜನತೆಯ ಹಿತಸಾಧನೆಗಾಗಿ ದುಡಿಯುವುದು ಸಾಮಾನ್ಯವಾಗಿ ಅಂದಿನ ಆಡಳಿತಾಧಿಕಾರಿಗಳೆಲ್ಲರ ಧ್ಯೇಯವೇ ಆಗಿತ್ತು. ಅವರಿಗೆಲ್ಲಾ ವಿಶ್ವವಿಖ್ಯಾತ ಇಂಜನಿಯರ್ ಹಾಗೂ ಆಡಳಿತಗಾರ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ದಿವಾನ್ ಸರ್ ಮಿರ್ಜಾ ಅವರು ಮೇಲ್ಪಂಕ್ತಿ ಆಗಿದ್ದರು. ಮೈಸೂರು ರಾಜ್ಯ ಇಡೀ ವಿಶ್ವದಲ್ಲೇ ಆದರ್ಶ ರಾಜ್ಯವೆಂದು ಪ್ರಖ್ಯಾತವಾಗಬೇಕು ಎನ್ನುವುದು ಆ ಮಹಾನುಭಾವರ ಉದ್ದೇಶ. ಅವರಿಂದ ಸ್ಫೂರ್ತಿಗೊಂಡು ಆ ಉದ್ದೇಶ ಸಾಧನೆಗಾಗಿ ದುಡಿದ ಅಧಿಕಾರಗಳ ಶ್ರೇಣಿಗೆ ಸೇರಿದವರು ಶ್ರೀ ನರಸಿಂಹಮೂರ್ತಿ ಅವರು.

ಶ್ರೀ ನರಸಿಂಹಮೂರ್ತಿ ಅವರು ಬಡತನದಿಂದಲೇ ಜೀವನ ಆರಂಭಿಸಿ, ಸ್ವಪ್ರಯತ್ನದಿಂದ ಅಭ್ಯುದಯವನ್ನು ಕಂಡವರು. ವಿದ್ಯಾರ್ಥಿ ದೆಸೆಯಿಂದಲೇ ಅವರು ತಮಗೆ ಅಗತ್ಯವಾದ ಹಣವನ್ನು ಒದಗಿಸಿಕೊಳ್ಳಲು ತುಂಬಾ ದುಡಿದದ್ದುಂಟು. ಹೀಗಿದ್ದರೂ ಅವರು ತರಗತಿಗಳಲ್ಲಿ ಯಾವಾಗಲೂ ಮುಂದು. ಪರೀಕ್ಷೆಗಳಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ. ಇದರಿಂದ ಅಂದಿನ ಪ್ರಾಧ್ಯಾಪಕರುಗಳಾದ ರಾಲೋ, ಎಸ್. ಎಸ್. ಸುಬ್ಬರಾವ್ ಮೊದಲಾದವರಿಗೆ ತುಂಬಾ ಮೆಚ್ಚು.

ಶ್ರೀ ನರಸಿಂಹಮೂರ್ತಿ ಅವರು ಸರ್ಕಾರದ ನೌಕರಿಗೆ ಸೇರುವ ಮೊದಲು ಕೆಲವು ಕಾಲ ಪತ್ರಿಕೋದ್ಯೋಗಿಗಳಾಗಿ ಎಲ್ಲ ಸಾರ್ವಜನಿಕ ಸಮಸ್ಯೆಗಳನ್ನು ತೀವ್ರಾಸಕ್ತಿಯಿಂದ

ಗಮನಿಸಿ, ತಮ್ಮ ಪತ್ರಿಕೆಗೆ ವರದಿ ಮಾಡುತ್ತಿದ್ದರು. ಪತ್ರಿಕೋದ್ಯೋಗಿಯಾಗಿ ಅವರು ಸಾರ್ವಜನಿಕರೊಡನೆ ಬೆಳೆಸಿಕೊಂಡ ಸಂಪರ್ಕ, ಸಾಮಾಜಿಕ ಸಮಸ್ಯೆಗಳಲ್ಲಿ ತಳೆದ ಆಸಕ್ತಿ ಅವರು ಮುಂದೆ ಅಧಿಕಾರಿಗಳಾದ ಅನಂತರವೂ ಮುಂದುವರೆಯಿತು. ಅಧಿಕಾರಿಗಳಾಗಿ ಅವರು ಎಲ್ಲ ಪ್ರಶ್ನೆಗಳನ್ನೂ ತುಂಬ ಮಾನವೀಯ ದೃಷ್ಟಿಯಿಂದಲೂ ಪರಿಶೀಲಿಸಲು ಅವರು ಕೆಲಕಾಲ ಪತ್ರಿಕೋದ್ಯಮಿಯಾಗಿದ್ದು ಪಡೆದ ಅನುಭವ ಕಾರಣವೆಂದರೆ ತಪ್ಪಾಗಲಾರದು.

ಶ್ರೀ ನರಸಿಂಹಮೂರ್ತಿ ಅವರದು ತುಂಬಾ ಆಕರ್ಷಕ ವ್ಯಕ್ತಿತ್ವವೂ ಹೌದು. ತಮ್ಮ ಸರಳತೆ, ಸ್ನೇಹಪರತೆಗಳಿಂದ ಎಲ್ಲರ ವಿಶ್ವಾಸಕ್ಕೂ ಪಾತ್ರರಾಗಿದ್ದರು. ಅವರು ಎಷ್ಟೊಂದು ಸರಳರು, ನಿಗರ್ವಿ ಎಂದರೆ ಅವರನ್ನು ತಿಳಿಯದವರು ಯಾರಾದರೂ ನೋಡಿದರೆ ಇವರು ನಿಜಕ್ಕೂ ಉನ್ನತಾಧಿಕಾರಿಯೋ ಎಂದು ಶಂಕಿಸುತ್ತಿದ್ದುದುಂಟು.

ಇಂಥ ಆದರ್ಶ ಅಧಿಕಾರಿ ಅಕಾಲದಲ್ಲೇ ವಿಧಿವಶರಾದುದು ದೌರ್ಭಾಗ್ಯ. ಅವರು ಬದುಕಿದ್ದಿದ್ದರೆ, ಅವರಿಂದ ದೇಶಕ್ಕೆ, ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುತ್ತಿತ್ತು. ಅವರನ್ನು ತಿಳಿದವರೆಲ್ಲರ ಮನಸ್ಸಿನಲ್ಲೂ ಅವರ ನೆನಪು ಸದಾ ಹಸಿರು.

ಸ್ವ.೨

ಮೂರ್ತಿ . . . .

ಬಿ. ಆರ್. ಸುಬ್ಬರಾವ್

1930 ನೇ ಇಸವಿ. ಆಗ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಕೃಪಾಶ್ರಯದಲ್ಲಿ ಮೈಸೂರು ಅನಾಥಾಲಯ—ಸಮರ್ಪಕವಾಗಿ ನಡೆದುಬಂದಿತ್ತು. ಅವರ ಪತ್ರಿಕೆ ಸಂಪದಭ್ಯುದಯ ಬ್ರಿಟಿಷರ ದಬ್ಬಾಳಿಕೆಯಿಂದ ಮುಟ್ಟುಗೋಲಾಗಿತ್ತು. ಆದರೂ ಧೈರ್ಯಗೆಡದೆ ಹಿಂದೂ ಮೊದಲಾದ ಪತ್ರಿಕೆಗಳಲ್ಲಿ ಅನಾಥಾಲಯದ ವಿದ್ಯಾರ್ಥಿಯಾಗಿದ್ದ ಶ್ರೀಮಾನ್ ಸಿ. ನರಸಿಂಹ ಮೂರ್ತಿಗಳವರು ತಾತಯ್ಯನವರು ಹೇಳುತ್ತಿದ್ದ ಇಂಗ್ಲೀಷ್ ಸಮಾಚಾರವನ್ನು ಬರೆದು ಅಚ್ಚಿಗೆ ಕಳುಹಿಸುತ್ತಿದ್ದರು. ನಾನು ಕನ್ನಡ ವಿಷಯ ಹೇಳಿದ್ದನ್ನು ಬರೆದುಕೊಡುತ್ತಿದ್ದೆನು. ಅದನ್ನು ಸಹ ಪತ್ರಿಕೆಗಳಿಗೆ ಅಚ್ಚು ಮಾಡಲು ಕಳುಹಿಸುತ್ತಿದ್ದರು. ಇದರಿಂದ ನಮಗೆ ಒಂದು ಬಗೆಯ ಸೇವೆಯ ಹೆಮ್ಮೆ. ಇನ್ನೊಂದು ಬಗೆಯಲ್ಲಿ ತಿಳಿವು ಅಥವಾ ಭಾಷಾಜ್ಞಾನ ಹೆಚ್ಚಾಗುತ್ತಿತ್ತು. ಶ್ರೀಮಾನ್ ತಾತಯ್ಯನವರ ಆಶೀರ್ವಾದವೇ ನಮ್ಮ ಶ್ರೇಯಸ್ಸು.

ಶ್ರೀಮಾನ್ ಸಿ. ನರಸಿಂಹಮೂರ್ತಿಗಳವರು ಮಿತಭಾಷಿ, ಸರಳತೆ, ಸ್ನೇಹ, ಅನುಕಂಪದಿಂದ ಕೂಡಿದ ವ್ಯಕ್ತಿತ್ವ ಎಂಥವರನ್ನಾದರೂ ಆಕರ್ಷಿಸುತ್ತಿತ್ತು. ಅವರು ಮೈಸೂರು ಮುನಿಪಲ್ ಕಮಿಷನರ್ ಆಗಿದ್ದಾಗಲೂ, ಡೈರಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಆಗಿದ್ದಾಗಲೂ, ಮೈಸೂರು ಡಿವಿಷನಲ್ ಕಮಿಷನರ್ ಆಗಿದ್ದಾಗಲೂ ನಾನು ಸಾಂಪ್ರದಾಯಿಕವಾಗಿ ಅವರಲ್ಲಿಗೆ ಹೋಗಿದ್ದಾಗ ತಡಮಾಡಿ ನಿಲ್ಲಗೊಡದೆ ಕೂಡಲೇ ತಮ್ಮ ಬಳಿಗೆ ಬರಮಾಡಿಕೊಂಡು ಅವರ ಸಮಾನ ವಯಸ್ಕರಾದ ನಮ್ಮ ಅಣ್ಣಂದಿರನ್ನು ವಿಚಾರಿಸಿ ನನ್ನ ಬಗೆಗೂ ವಿಚಾರಿಸಿ ಮನಸ್ಸಂತೋಷಪಡಿಸುತ್ತಿದ್ದರು. ಹುದ್ದೆ ದೊಡ್ಡದಾದರೂ ಅವರ ಸರಳತೆ ಎದ್ದು ಕಾಣುತ್ತಿತ್ತು.

ಅವರು ಪದವೀಧರರಾಗಿ, ಅಧಿಕಾರಿಗಳ ಶ್ರೇಷ್ಠಮಟ್ಟದಲ್ಲಿದ್ದರು. ಅವರಲ್ಲಿ ಗಂಭೀರಭಾವ ಎದ್ದು ಕಂಡುಬರುತ್ತಿತ್ತು. ಅವರ ವಿವಾಹಕ್ಕೆ ನನ್ನ ಅಣ್ಣಂದಿರೊಡನೆ, ಹೋಗಿದ್ದೆನು. ಮೈಸೂರಿನಲ್ಲಿ ಹಾರ್ಡ್‌ವಿಕ್ ಕಾಲೇಜ್ ರಸ್ತೆಯ ಒಂದು ಮನೆಯಲ್ಲಿ ವಿವಾಹ ನಡೆಯಿತು. ಆಗಿನ ಜನರ ಮೌಢ್ಯ ಅಭಿಪ್ರಾಯ

ವನ್ನು ಮೂಲೆಗೊತ್ತಿ ಆದರ್ಶವಾಗಿ ವಿಧವಾ ವಿವಾಹ ಮಾಡಿಕೊಂಡು ತೃಪ್ತಿಯನ್ನು ಕಂಡುಕೊಂಡಿದ್ದರು. ಅವರ ಅಭಿಪ್ರಾಯದಲ್ಲಿ ಗಂಡಸು ಹೇಗಿದ್ದರೂ ವಿವಾಹ ಮಾಡಿಕೊಳ್ಳಬಹುದು. ಆದರೆ ಹೆಂಗಸು ತನ್ನ ಪತಿಯನ್ನು ಕಳೆದುಕೊಂಡಲ್ಲಿ ಆಕೆ ಉಸಿರು ಇರುವವರೆಗೆ ಒಂಟಿಬಾಳು ಬಾಳಬೇಕೇಕೆ ಎಂಬ ಚಿಂತನೆಯಿಂದ ಮಾರ್ಗದರ್ಶನ ಮಾಡಿ ತೋರಿಸಿದರು, ಸಮಾಜಕ್ಕೆ ಹೆದರದೆ.

ಅವರು ಕೊನೆಯಲ್ಲಿ ಬೆಂಗಳೂರಿನಲ್ಲಿ K.S.R.T.C. ವೈಸ್ ಛೇರ್ಮನ್‌ರಾಗಿದ್ದರು. ಈ ವಿಚಾರ ಪತ್ರಿಕೆಗಳಲ್ಲಿ ಓದಿ ತಿಳಿದಿದ್ದೆನು. ವಿದ್ಯಾಭ್ಯಾಸ ಮಾಡುವಾಗ ಜೊತೆಗೆ ಇದ್ದು ಊಟಮಾಡಿ ಮಲಗುತ್ತಿದ್ದರೂ, ಅನಂತರ ನಮ್ಮ ನಮ್ಮ ಜೀವನ ವೃತ್ತಿ ಬೇರೆ ಬೇರೆಯಾಗಿ ದೂರವಾದೆವು. ಆದರೂ ಒಮ್ಮೊಮ್ಮೆ ಅವಕಾಶ ಸಿಕ್ಕಿ ಭೇಟಿಯಾದಾಗ ಸರಳ ಸೌಜನ್ಯದಿಂದ ಮಾತನಾಡಿಸುತ್ತಿದ್ದರು. ಪ್ರೀತಿ–ಸಂತೃಪ್ತಿ ಭಾವನೆ ಭೇಟಿಯ ಪ್ರಯೋಜನವಾಗಿತ್ತು.

ಪತ್ರಿಕೆಯಲ್ಲಿ ಬಂದ ಅವರ ಮೃತವಾರ್ತೆ ಓದಿ ಮಾನಸಿಕವಾಗಿ ಆಘಾತಗೊಂಡು ಕೆಲವಾರು ತಿಂಗಳು ಏನೋ ಅಮೂಲ್ಯವಾದದ್ದನ್ನು ಕಳೆದುಕೊಂಡಂತೆ ಮನಸ್ಸು ತಲ್ಲಣಿಸುತ್ತಿತ್ತು. ಈಗಲೂ ನೆನೆಸಿದಾಗ ಹಿಂದಲ ನೆನಪು ಸ್ಫುರಿತವಾಗಿ ಮನಸ್ಸು ಕದಡುತ್ತದೆ. O

ಭಾಷಣವೇ ಕಲೆ . . . .

ರುಮಾಲೆ ಚನ್ನಬಸವಯ್ಯ

1934ನೇ ಇಸವಿ. ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯದಲ್ಲಿ ತೈಲವರ್ಣ ಚಿತ್ರಕಲೆ ಅಭ್ಯಸಿಸಲು ಹೋಗಿದ್ದೆನು. ಕಾಲೇಜಿನ ನನ್ನ ಸ್ನೇಹಿತರು ಹೊರರಾಷ್ಟ್ರಗಳ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು ಭಾಗವಹಿಸಿದ ಒಂದು ಚರ್ಚಾಕೂಟದ ಕಾರ್ಯ ಕ್ರಮಕ್ಕೆ ನನ್ನನ್ನು ಜಗನ್ಮೋಹನ ಬಂಗಲೆಗೆ, ರಾತ್ರಿ 8ಕ್ಕೆ ನಡೆದ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಿದ್ದರು. ಇಂಗ್ಲಿಷ್ ಭಾಷೆ ಮಾಧ್ಯಮದ ವಿಶ್ವವಿದ್ಯಾನಿಲಯಗಳ, ಹೊರ ರಾಷ್ಟ್ರಗಳ ಹಾಗೂ ಭಾರತದ ಪ್ರತಿನಿಧಿಗಳು ಭಾಗವಹಿಸಿದ್ದರು.

ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಶ್ರೀ ನರಸಿಂಹ ಮೂರ್ತಿಗಳು ಮತ್ತು ದಿವಂಗತ ಶ್ರೀಮತಿ ಜಯಲಕ್ಷ್ಮಿ ವರದಾಚಾರ್ಯರು ಭಾಗವಹಿಸಿದ್ದರು.

ಶ್ರೀ ಸಿ. ನರಸಿಂಹಮೂರ್ತಿಗಳು ಭಾಷಣ ಕಲೆಯಲ್ಲಿ ಗಂಭೀರವಾದ, ಉತ್ಪ್ರೇಕ್ಷೆ ಯಿಲ್ಲದ, ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಮನನಮಾಡಿಕೊಂಡು ಇಡೀ ಜನತೆಯಮೇಲೆ ಸರಳವಾಗಿ, ಸ್ಪಷ್ಟವಾಗಿ, ಅತಿಕಡಿಮೆ ಸಮಯದಲ್ಲಿ ನಿರೂಪಿಸುವ ಭಾಷಾಕಲಾ ಪ್ರೌಢಿಮೆ ಪಡೆದವರೆಂಬುದು ಅಂದಿನ ಅವರ ಭಾಷಣದಿಂದ ಸರ್ವರಿಗೂ ವಿದಿತವಾಯಿತು.

ಅವರು ಆಡಳಿತಗಾರರಾಗದೇ ವಿಶ್ವವಿದ್ಯಾನಿಲಯದಲ್ಲಿ ಭಾಷಾ ಪಂಡಿತರಾಗಿ, ಬೋಧಕರಾಗಿದ್ದಿದ್ದಲ್ಲಿ ಆ ಕ್ಷೇತ್ರಕ್ಕೂ ತಿಲಕಪ್ರಾಯರಾಗಿ ರಾಷ್ಟ್ರದ ಗೌರವ ಎತ್ತಿ ಹಿಡಿಯುತ್ತಿದ್ದರು. ○

ಕಲಾಭಿಮಾನಿ . . . .

ತಿಟ್ಟೆ ಕೃಷ್ಣ ಅಯ್ಯಂಗಾರ್

ಯಾವ ಮಹನೀಯರ ಸ್ಮರಣೆಯಿಂದ ಕರ್ಣಾಟಕ ಕಲಾವಿದರಿಗೆ ಆನಂದ ವೆನಿಸುವುದೋ, ಸ್ಫೂರ್ತಿಯುಂಟಾಗುವುದೋ, ಉತ್ಸಾಹವಿಮ್ಮಡಿಯಾಗುವುದೋ ಅಂತಹ ಮಹನೀಯರಾಗಿದ್ದ ನರಸಿಂಹಮೂರ್ತಿಗಳ ಸವಿನೆನಪಿಗಾಗಿ ಈಗ್ಯೆ ಹತ್ತು ವರ್ಷಗಳ ಹಿಂದೆ 'ಕಲಾಭಾರತಿ' ಎಂಬ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯು ಬೆಂಗಳೂರಿ ನಲ್ಲಿ ಸ್ಥಾಪನೆಯಾಗಿ, ತನ್ನ ದೇ ಆದ ವೈಶಿಷ್ಟ್ಯದಿಂದ ಕೂಡಿದ ಕಲಾಸೇವೆಯಲ್ಲಿ ಹತ್ತು ವರ್ಷಗಳು ತುಂಬಿರುವುದು ಒಂದು ಸಂತೋಷದ ಸಂಗತಿಯೇ ಸರಿ.

ಹೀಗೆ ವಿಜಯೀ ವೈಭವ ದಶವರ್ಷಗಳ ಪೂರೈಕೆಯ ಸವಿನೆನಪಿಗಾಗಿ ಈ ಸಂಸ್ಥೆಯವರು ಸಿ. ನರಸಿಂಹಮೂರ್ತಿಗಳು ಹಾಗೂ ಸಾಹಿತ್ಯ ಸಾಂಸ್ಕೃತಿಕ ಕಲೆಗಳ ಬಗೆಗೆ ಒಂದು ಸ್ಮರಣ ಗ್ರಂಥವನ್ನು ಪ್ರಚುರಪಡಿಸಲು ಮನಸ್ಸು ಮಾಡಿರುವುದು ನಿಜವಾಗಿಯೂ ಒಂದು ಸ್ತುತ್ಯ ಕಾರ್ಯ.

ಸಿ. ನರಸಿಂಹಮೂರ್ತಿಗಳು ಆಗಿನ ಮೈಸೂರು ಸರ್ಕಾರದಲ್ಲಿ ಉನ್ನತ ಅಧಿಕಾರಿ ಗಳಾಗಿ ಮೈಸೂರಿನಲ್ಲಿದ್ದಾಗ, ಅವರ ಮನೆಯಲ್ಲಿ ಸಂಗೀತ ಉಪಾಧ್ಯಾಯನಾಗಿದ್ದುದ ರಿಂದ ಅವರಿಗೂ ನನಗೂ ಸಂಪರ್ಕ ನಿಕಟವಾಯಿತು. ಅದು ಅನೇಕ ವರ್ಷಗಳು ನಡೆದು ಅವರ ಅತ್ಯಮೂಲ್ಯ ಸದ್ಗುಣಗಳ ಪರಿಚಯ ನನಗುಂಟಾಗಲು ಕಾರಣ ವಾಯಿತು.

ಸಿ. ನರಸಿಂಹಮೂರ್ತಿಗಳು ಸ್ವಭಾವತಃ ಸಾತ್ವಿಕರು, ದಯಾವಂತರು, ಸರಳರು, ನಿಗರ್ವಿಗಳು, ಕಾರ್ಯದಕ್ಷರು, ಸತ್ಯನಿಷ್ಠರು ಮತ್ತು ಕಲಾಭಿಮಾನಿಗಳು. ಇವರ ಈ ಮಹಾಗುಣಗಳು ಸುಗಂಧವನ್ನು ಮುಟ್ಟಿದವರಿಗೆಲ್ಲಾ ಹತ್ತಿಕೊಂಡು ಅವ ರನ್ನೆಲ್ಲಾ ಸುಗಂಧಿಗಳನ್ನಾಗಿ ಮಾಡುವಂತೆ, ಇವರ ಇಡೀ ಕುಟುಂಬವರ್ಗದವರಿಗೆಲ್ಲಾ ಸೇರಿ ಇವರ ಮನೆಯೇ ಸುಗುಣಾಗಾರವೆನಿಸಿತ್ತು. ಅಷ್ಟೇ ಅಲ್ಲದೆ ಗಂಧರ್ವಕಲೆಯಾದ ಸಂಗೀತದಲ್ಲಿ ಮೂರ್ತಿಗಳಿಗೆ ಅಪಾರವಾದ ಆಸಕ್ತಿ ಅನುರಾಗಗಳಿದ್ದವು. ಇವರಿಗೆ ಸಂಗೀತ ವಿದ್ವಾಂಸರಲ್ಲಿ ವಿಶೇಷ ವಿಶ್ವಾಸವಿತ್ತು. ಅವರ ಪುರೋಭಿವೃದ್ಧಿಗೆ ಇವರು ಹಂಬಲಿಸುತ್ತಿದ್ದರು.

ಲೇಖಕನಾದ ನನಗೆ ಇವರು ಕನ್ನಡದಲ್ಲಿ ಹಲವಾರು ಕೀರ್ತನೆಗಳನ್ನು ರಚಿಸಿ, ಹಾಡುವಂತೆ ಒತ್ತಾಯಪೂರ್ವಕವಾಗಿ ಪ್ರೇರೇಪಿಸಿದ್ದರು. ಎಂದರೆ ಅವರಿಗೆ ಸಂಗೀತದ ಮೇಲೂ, ಸಂಗೀತ ಕಲೆಯ ಬೆಳಸಿನ ಮೇಲೂ ಹಾಗೂ ತಾಯ್ನುಡಿಯಾದ ಕನ್ನಡದ ಮೇಲೂ ಎಷ್ಟು ವಿಶ್ವಾಸವಿತ್ತು ಎಂಬುದು ವ್ಯಕ್ತವಾಗುತ್ತದೆ.

ತಾ|| 24-2-1966 ರಲ್ಲಿ ಮೈಸೂರಿನ 'ಗಾನವಿಶಾರದ' ಬಿಡಾರಂ ಕೃಷ್ಣಪ್ಪ ನವರ 'ಶ್ರೀ ಪ್ರಸನ್ನ ಸೀತಾರಾಮ ಮಂದಿರದ' ಆಶ್ರಯದಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಜರುಗಿದ ಎಂಟನೇ ಸಂಗೀತ ಸಮ್ಮೇಳನವನ್ನು ಅಭಿಮಾನದಿಂದ ಉದ್ಘಾಟಿಸಿದ ಸಿ. ನರಸಿಂಹಮೂರ್ತಿಗಳು ತಮ್ಮ ಅಮೂಲ್ಯವಾದ ಭಾಷಣದಲ್ಲಿ ಶಾಸ್ತ್ರೀಯ ಸಂಗೀತದ ಬಗ್ಗೆ ಜನತೆಯಲ್ಲಿ ಅಭಿಮಾನ ಮೂಡಿಸಲು ಕರೆಯಿತ್ತರು. ಹಾಗೂ ಚಲನಚಿತ್ರಗಳ ಸಂಗೀತದಲ್ಲಿ ಶಾಸ್ತ್ರೀಯ ಸಂಗೀತವನ್ನು ಅಳವಡಿಸಲು ಕರೆಯಿತ್ತರು. ಇದರಿಂದ ಶಾಸ್ತ್ರೀಯ ಸಂಗೀತದಲ್ಲಿ ಅವರಿಗಿದ್ದ ಅತಿಶಯವಾದ ಆಸಕ್ತಿ ಅನುರಾಗಗಳ ಆಳವೆಷ್ಟೆಂಬುದು ವ್ಯಕ್ತವಾಗುತ್ತದೆ.

'ಕಲಾ ಭಾರತಿ' ದಶಮವರ್ಧಂತ್ಯುತ್ಸವವನ್ನು ಜರುಗಿಸುವ ಸುಸಂದರ್ಭದಲ್ಲಿ ನಾನು ಅದಕ್ಕೆ ಇತೋಪ್ಯತಿಶಯವಾದ ಕಲ್ಯಾಣವೂ ಕೀರ್ತಿ ವಿಸ್ತರಣವೂ ಉಂಟಾಗಿ ಚಿರಕಾಲ ಬೆಳಗುವಂತಾಗಲೆಂದು ಶ್ರೀ ಗಾನಸರಸ್ವತಿಯಲ್ಲಿ ಬೇಡುತ್ತೇನೆ. ○

ಅಣ್ಣಯ್ಯ....

ಜೆ. ಜಿ. ನಂಜಮ್ಮ

ನನ್ನ ಮದುವೆಯಾದ ಹೊಸದರಲ್ಲಿ ನನ್ನ ಪೂಜ್ಯ ತಾಯಿಯವರು ಸ್ವರ್ಗಸ್ಥರಾದ ಸಮಯದಲ್ಲಿ ನನ್ನನ್ನು ನಮ್ಮ ಅಣ್ಣನವರಾದ ಸಿ. ನರಸಿಂಹಮೂರ್ತಿಯವರು ತಮ್ಮ ಮನೆಗೆ ಕರೆಸಿಕೊಂಡು ಬಹಳವಾಗಿ ಸಮಾಧಾನ ಮಾಡಿದ್ದು ಈಗಲೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ನಾನು ಒಂದು ಸಣ್ಣ ಹಳ್ಳಿಯಲ್ಲಿದ್ದರೂ ಸಹ ಅವರು ನನ್ನನ್ನು ತಾವು ಕೆಲಸದಲ್ಲಿದ್ದ ಮದರಾಸಿಗೆ ಕರೆಸಿಕೊಂಡು ಅಲ್ಲಿ ನೋಡಬೇಕಾದ ಸ್ಥಳಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡುಹೋಗಿ ತೋರಿಸಿದರು. ಹಾಗೂ ನಾನು ಅಲ್ಲಿ ಇದ್ದಷ್ಟು ದಿವಸಗಳೂ ಸಹ ಬಹಳ ಸಂತೋಷದಿಂದ ನನ್ನನ್ನು ನೋಡಿಕೊಂಡರು. ಇದೇ ರೀತಿ ಅವರು ಮೈಸೂರು ವಿಭಾಗದ ವಿಭಾಗಾಧಿಕಾರಿಗಳಾಗಿದ್ದ ಕಾಲದಲ್ಲಿ ಸರ್ಕಾರದ ಪರವಾಗಿ ಚನ್ನರಾಯ ಪಟ್ಟಣ ತಾಲ್ಲೂಕು, ಶ್ರವಣ ಬೆಳಗೊಳದಲ್ಲಿ ಶ್ರೀ ಗೊಮ್ಮಟೇಶ್ವರ ಸ್ವಾಮಿಯವರಿಗೆ ಮಹಾ ಮಸ್ತಕಾಭಿಷೇಕ ನಡೆಯುವ ಸಮಯದಲ್ಲಿ ಅಲ್ಲಿಗೆ ಭೇಟಿ ಇತ್ತರು. ಬಿಡುವಿಲ್ಲದ ಕೆಲಸದಲ್ಲೂ ಬಿಡುವು ಮಾಡಿಕೊಂಡು ನಮ್ಮ ಊರಾದ ಜಂಬೂರಿಗೆ ನನ್ನ ಮನೆಗೆ ನನ್ನ ಪ್ರೀತಿಯ ಅತ್ತಿಗೆಯವರ ಜೊತೆಯಲ್ಲಿ ಬಂದು ಕೆಲವಾರು ಘಂಟೆಗಳು ಸಂತೋಷದಿಂದ ಕಾಲ ಕಳೆದು ನಂತರ ಮೈಸೂರಿಗೆ ಪ್ರಯಾಣ ಮಾಡಿದರು. ನಮ್ಮ ಅಣ್ಣನವರಿಗೆ ಚಿತ್ರಾನ್ನ, ಕಡಲೆಕಾಯಿ ಬಿತ್ತದ ಉಂಡೆ, ಮಿಠಾಯಿ ಕಂಡರೆ ಬಹಳ ಇಷ್ಟ. ಅವರು ಎಷ್ಟು ದೊಡ್ಡ ಕೆಲಸದಲ್ಲಿದ್ದರೂ ಇಲ್ಲಿಗೆ ಅಂದರೆ ನಮ್ಮ ಮನೆಗೆ ಬಂದಾಗ ನನ್ನ ಕೈಲಿ ಹೇಳಿ ಮಾಡಿಸಿಕೊಂಡು ತಿನ್ನುತ್ತಿದ್ದರು.

ನನ್ನ ಅಕ್ಕರೆಯ ಅಣ್ಣನವರನ್ನು ನಾನು ಪಡೆದಿದ್ದು ನನ್ನ ಪುಣ್ಯ. ಆದರೆ ಇಷ್ಟು ಬೇಗ ಅವರು ನಮ್ಮನ್ನು ಅಗಲಿದ್ದು ನಮ್ಮಗಳ ದೌರ್ಭಾಗ್ಯ.

ಶ್ರೀ ನರಸಿಂಹಮೂರ್ತಿಯವರು ಮತ್ತು ಪತ್ರಿಕೋದ್ಯಮ

ಅಗರಂ ರಂಗಯ್ಯ

ಸುಮಾರು ಅರ್ಧ ಶತಮಾನದ ಹಿಂದೆ ನನಗೆ ಶ್ರೀ ನರಸಿಂಹಮೂರ್ತಿಯವರ ಪರಿಚಯವಾಯಿತು. ನಮ್ಮ ಮುದ್ರಣಾಲಯದಲ್ಲಿ ತಾಯಿನಾಡು ಪತ್ರಿಕೆಯು ಆರಂಭವಾಗಿ ಕಾಸಿಗೊಂದು ಪ್ರತಿಯಂತೆ ಮಾರಾಟವಾಗುತ್ತಿತ್ತು. ಅದರ ಸಂಪಾದಕರಾದ ಶ್ರೀ ಪಿ. ಆರ್. ರಾಮಯ್ಯನವರಿಗೆ ಶ್ರೀ ನರಸಿಂಹಮೂರ್ತಿಯವರ ಭೇಟಿಯಾಗಿ ಅವರ ಪತ್ರಿಕೆಗೆ ನಗರದ ಸುದ್ದಿಗಳನ್ನು ಬರೆದುಕೊಡುವಂತೆ ನರಸಿಂಹಮೂರ್ತಿಯಂವರಿಗೆ ಅವರು ಹೇಳಿದರು. ಆಗ ಈ ವರದಿಗಾರರಿಗೆ ಸಂಪಾದಕರು ಕೊಡುತ್ತಿದ್ದ ಶುಲ್ಕ ತಿಂಗಳಿಗೆ 5 ರೂ. ಇದನ್ನು ನರಸಿಂಹಮೂರ್ತಿಯವರು ಮುಂದೆ ಅನೇಕ ಬಾರಿ ನೆನೆಸಿಕೊಂಡು ತಮ್ಮ ಭವಿಷ್ಯ ಜೀವನಕ್ಕೆ ಇದು ಒಳ್ಳೆ ಅಸ್ತಿಭಾರವನ್ನು ಹಾಕಿದುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಏಕೆಂದರೆ ಇದರಿಂದ ಅವರಿಗೆ ಸಮಾಜದ ಹಲವಾರು ವರ್ಗಗಳ ಪ್ರತಿಭಾವಂತ ಜನರ ಸಂಪರ್ಕವುಂಟಾಯಿತು ಮತ್ತು ಲೋಕಾನುಭವವು ಬಹಳಮಟ್ಟಿಗೆ ದೊರೆಯಿತು.

ಪ್ರತಿ ದಿನ ಅವರು ಪತ್ರಿಕೆಗೆ ಬರೆದು ತಂದುಕೊಡುತ್ತಿದ್ದ ಸುದ್ದಿಗಳ ವರದಿಗಳನ್ನು ವಿಮರ್ಶಿಸಿ, ತಿದ್ದಿ ಪತ್ರಿಕೆಗೆ ಸಿದ್ಧಮಾಡುವ ಕೆಲಸವನ್ನು ನನಗೆ ವಹಿಸಲಾಗಿತ್ತು. ಮೊದ–ಮೊದಲು ನರಸಿಂಹಮೂರ್ತಿಯವರು ಬರೆದು ತಂದ ಅನೇಕ ವಿಷಯಗಳನ್ನು ಪ್ರಾಮುಖ್ಯವಲ್ಲವೆಂದು ನಾನು ಹೊಡೆದು ಹಾಕುತ್ತಿದ್ದೆ. ಇನ್ನು ಕೆಲವಕ್ಕೆ ತಿದ್ದುಪಡಿಗಳನ್ನು ಮಾಡುತ್ತಿದ್ದೆ. ಮುಖ್ಯವಾಗಿ ವರದಿಗಳಿಗೆ ಆಕರ್ಷಣೀಯವಾದ ಶಿರೋನಾಮೆಯನ್ನು ಕೊಡುವುದು ನಮ್ಮ ಮುಖ್ಯ ಕೆಲಸವಾಗಿತ್ತು. ಈ ಎಲ್ಲ ಅಂಶಗಳ ಬಗ್ಗೆಯೂ ನರಸಿಂಹಮೂರ್ತಿಯವರು ಬಹುಬೇಗನೆ ಸ್ವಂತ ಪರಿಶ್ರಮದಿಂದ ಪರಿಷ್ಕರಣವನ್ನು ಹೊಂದಿದರು. ಕ್ರಮೇಣ ಅವರ ಬರವಣಿಗೆಗಳನ್ನು ನೇರವಾಗಿ ಪತ್ರಿಕೆಯಲ್ಲಿ ಮುದ್ರಣಕ್ಕೆ ಕೊಡುವಂತೆಯೂ ಆಯಿತು. ತಾಯಿನಾಡು ಪತ್ರಿಕೆಯ ಮೊಟ್ಟಮೊದಲನೆ ಗೌರವಾನ್ವಿತ ಸುದ್ದಿಗಾರರು ಶ್ರೀ ನರಸಿಂಹಮೂರ್ತಿಯವರೆಂದು ಧಾರಾಳವಾಗಿ ಹೇಳಬಹುದು.

ಶಿರೋನಾಮೆಗಳನ್ನು ಕೊಡುವುದರಲ್ಲಿ ಒಂದು ವಿಶೇಷ ಪ್ರಸಂಗ ನಡೆದುದನ್ನು ಶ್ರೀ ನರಸಿಂಹಮೂರ್ತಿಯವರು ಆಗಾಗ್ಗೆ ಒತ್ತಿ ಹೇಳುತ್ತಿದ್ದರು. ಆ ಸಮಯದಲ್ಲಿ ಮೈಸೂರು ನಗರದಲ್ಲಿ ಒಂದು ಕೋಲಾಹಲಕರವಾದ ಪ್ರಕರಣವು ನಡೆದಿತ್ತು. ಬೆಂಗಳೂರಿನ ದೇಶಮುಖಿ ಗೋವಿಂದರಾಯರೆಂಬುವರು ಮೈಸೂರಿನ ವಸುಂಧರ ದೇವಿ ಎಂಬಾಕೆಯನ್ನು ಮದುವೆಯಾದ ಸಂಬಂಧದಲ್ಲಿ ಇಲ್ಲಿನ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿತ್ತು. ಅದನ್ನು ನರಸಿಂಹಮೂರ್ತಿಯವರು ಪತ್ರಿಕೆಗೆ ವರದಿ ಮಾಡಿದಾಗ ಅವರು ಕೊಟ್ಟಿದ್ದ ಶಿರೋನಾಮೆಯು ಅಷ್ಟು ಆಕರ್ಷಣೀಯವಾಗಿರಲಿಲ್ಲ. ನಾನು ಅದನ್ನು ಬದಲಾಯಿಸಿ "ದೇಶಮುಖಿ ಗೋವಿಂದರಾಯರ ಗಾಂಧರ್ವ ವಿವಾಹ" ಎಂಬುದಾಗಿ ಬದಲಾಯಿಸಿದ್ದೆನು. ಅದು ಮುದ್ರಣವಾದ ದಿನ ಪತ್ರಿಕೆಗೆ ಬೇಡಿಕೆಯು ಬಹಳವಾಗಿತ್ತು. ಈ ಬದಲಾವಣೆಗಾಗಿ ಶ್ರೀ ನರಸಿಂಹ ಮೂರ್ತಿಯವರು ಬಹಳ ಸಂತೋಷಪಟ್ಟು ಆಗಾಗ್ಗೆ ಅದನ್ನು ಬಹಿರಂಗವಾಗಿ ಹೇಳುತ್ತಿದ್ದರು.

ಸುದ್ದಿಗಾರರ ಸಾಹಸ ಮತ್ತು ಕೌಶಲ್ಯದ ಬಗ್ಗೆ ನರಸಿಂಹಮೂರ್ತಿಯವರು ಅಭಿಮಾನದಿಂದ ಹೇಳುತ್ತಿದ್ದ ಮತ್ತೊಂದು ಮಾತು ಇದು. "ರವಿ ಕಾಣದುದನ್ನು ಕವಿ ಕಂಡ ; ಕವಿ ಕಾಣದುದನ್ನು ಕರಸ್ಪಾಂಡೆಂಟ್ ಕಂಡ" ಈ ಮಾತಿನ ಔಚಿತ್ಯವನ್ನು ಇಂದಿಗೂ ಮುಂದೆಯೂ ಪತ್ರಿಕಾ ರಂಗದಲ್ಲಿ ನಾವು ನಿರಂತರವಾಗಿ ಕಾಣಬಹುದು. ಪತ್ರಿಕೋದ್ಯಮಿಯ ಸಾಹಸದಲ್ಲಿ ಕೆಲವು ನಿರಾಧಾರವೆಂದು ಕಂಡು ಬರಬಹುದಾದ ಊಹಾಪೋಹಗಳನ್ನು ಸಹ ಪ್ರಚಾರ ಪಡಿಸಿ ಅವರಿಂದ ವಾಸ್ತವಾಂಶಗಳನ್ನು ಹೊರಗೆಡುಹಲು ದಾರಿ ಮಾಡಿ ಕೊಡಲಾಗುತ್ತದೆ. ಈ ದೃಷ್ಟಿಯಿಂದ ಕವಿಯ ಕಲ್ಪನೆಗೂ ಮೀರಿದ ಹಲವು ಸಾಹಸದ ಭಾವನೆಗಳನ್ನು ಸುದ್ದಿಗಾರನು ಪ್ರಚುರ ಪಡಿಸಬೇಕಾಗುತ್ತದೆ. ಇದರಲ್ಲಿ ಅನೇಕ ನಿಪುಣರಾದ ಪತ್ರಿಕೋದ್ಯೋಗಿಗಳು ಯಶಸ್ವಿಯಾಗಿ ಸತ್ಯಾಂಶವನ್ನು ಹೊರಗೆಡುಹಲು ಸಮರ್ಥರಾಗಿದ್ದಾರೆ.

ಪತ್ರಿಕೋದ್ಯಮದಲ್ಲಿ ಈ ರೀತಿ ಪಡೆದ ಅನುಭವವು ಮುಂದೆ ನರಸಿಂಹಮೂರ್ತಿಯವರಿಗೆ ರಾಜ್ಯ ವಾರ್ತಾ ಅಧಿಕಾರಿಯಾಗಲು ಬಹಳ ಮಟ್ಟಿಗೆ ಸಹಾಯಕವಾಗಿರಬೇಕೆಂದು ಧಾರಾಳವಾಗಿ ಹೇಳಬಹುದು. ಅವರು ವಿಶೇಷವಾದ ಜ್ಞಾನಾರ್ಜನೆ, ಸಂಶೋಧನೆ ಮತ್ತು ನಿರೂಪಣೆಗಳಿಗೆ ಹೆಸರುವಾಸಿಯಾಗಿದ್ದರು. ಇದರಿಂದ ಕ್ರಮೇಣ ಅವರು ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮೈಸೂರು ಡಿವಿಜಿನಲ್ ಕಮಿಷನರಾಗಿದ್ದಾಗ ಮಳೆ ಬೆಳೆಗಳಾಗದೆ ಭೀಕರ ಅಭಾವದ ಪರಿಸ್ಥಿತಿ ಉಂಟಾಗಿ ಕನ್ನಂಬಾಡಿ ಕಟ್ಟೆಯು ಸಹ ಒಣಗಿಹೋಗಿತ್ತು. ರೈತರುಗಳು ಬಹಳವಾಗಿ ಕಂಗಾಲಾಗಿದ್ದರು. ಹಿಂದೊಮ್ಮೆ ಇದೇ ರೀತಿ ಕ್ಷಾಮ ಪರಿಸ್ಥಿತಿ

ಉಂಟಾಗಿದ್ದಾಗ ಅಂದಿನ ಅಧಿಕಾರಿಗಳು ಪಶ್ಚಿಮ ವಾಹಿನಿಯ ಪವಿತ್ರ ಕಾವೇರಿ ನದಿಯ ತೀರದಲ್ಲಿ ಹನ್ನೆರಡು ದಿನಗಳ ಕಾಲ ಪರ್ಜನ್ಯ ಜಪವೆಂಬ ಅಪೂರ್ವ ಅನುಷ್ಠಾನವನ್ನು ಪಂಡಿತೋತ್ತಮರಿಂದ ನೆರವೇರಿಸಲಾಗಿ ಕೂಡಲೇ ಧಾರಕಾರವಾದ ಮಳೆ ಬಂದು ಕನ್ನಂಬಾಡಿ ಕಟ್ಟೆಯು ಭರ್ತಿಯಾಗಿ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಸಸ್ಯ ಸಂವೃದ್ಧಿ ಯುಂಟಾಗಿ ಅಲ್ಲಿನ ನಿವಾಸಿಗಳೆಲ್ಲರೂ ಆನಂದಭರಿತರಾಗಿದ್ದರು. ಅದೇ ರೀತಿ ತಮ್ಮ ಕಾಲದಲ್ಲೂ ಈ ಮಹಾ ಪ್ರಯೋಗವನ್ನು ನಡೆಸಬೇಕೆಂದು ಶ್ರೀ ನರಸಿಂಹಮೂರ್ತಿ ಯವರು ಸಂಕಲ್ಪಿಸಿದರು. ಅದೇ ಪಶ್ಚಿಮವಾಹಿನಿಯ ಕಾವೇರಿ ನದಿ ತೀರದಲ್ಲಿ ವಿಪ್ರೋತ್ತಮರಿಂದ ಹನ್ನೆರಡು ದಿನಗಳ ಕಾಲ ಜಪ, ತಪ ಅನುಷ್ಠಾನ, ಅನ್ನದಾನ ಮುಂತಾದುವುಗಳನ್ನು ನಡೆಸಲಾಯಿತು. ವೇದ ವಿದ್ವಾಂಸರಾದ ಆರು ಜನ ವಿಪ್ರೋತ್ತಮರು ಕಾವೇರಿ ನದಿಯಲ್ಲಿ ಸೊಂಟದವರೆಗೆ ನೀರಿನಲ್ಲಿ ನಿಂತು ಪ್ರತಿ ದಿನ ಐದಾರು ಗಂಟೆಗಳ ಕಾಲ ವೇದ ಘೋಷದಿಂದ ವರುಣ ದೇವನಿಗೆ ಮಳೆಗಾಗಿ ಮೊರೆ ಯಿಡುತ್ತಿದ್ದ ದೃಶ್ಯವು ಚಿತ್ತಾಕರ್ಷಕವಾಗಿತ್ತು. ಕಡೆಯ ದಿನ ಹೋಮ ಮತ್ತು ಪೂರ್ಣಾಹುತಿ ಆದ ಮೇಲೆ ಮಹಾಸಭೆ ನಡೆದು ಋತ್ವಿಜರೂ ಉಳಿದವರೂ ಅವರವರ ಊರುಗಳಿಗೆ ಹಿಂದಿರುಗುತ್ತಿದ್ದಂತೆಯೇ ಧಾರಾಕಾರವಾಗಿ ಮಳೆ ಬಂದು ಎಲ್ಲರಿಗೂ ವಿಶೇಷ ಸಮಾಧಾನವನ್ನುಂಟುಮಾಡಿತು. ತಾವು ಕೈಗೊಂಡ ಈ ಪ್ರಯತ್ನವು ಯಶಸ್ವಿಯಾದುದಕ್ಕಾಗಿ ನರಸಿಂಹಮೂರ್ತಿಯವರು ಆನಂದಭರಿತರಾದರು.

ಕೆಲವು ದಿನಗಳಲ್ಲೇ ಕನ್ನಂಬಾಡಿ ಕಟ್ಟೆಯು ಭರ್ತಿಯಾಯಿತು. ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಒಣಗುತ್ತಿದ್ದ ಪೈರುಗಳೆಲ್ಲವೂ ಮತ್ತೆ ಚೇತರಿಸಿಕೊಂಡು ಧಾನ್ಯ ಸಂವೃದ್ಧಿಯುಂಟಾಯಿತು. ಈ ದೃಶ್ಯವನ್ನು ಕಣ್ಣಾರೆ ಕಂಡು ಮಹಾಜನರಿಗೆ ವರದಿ ಮಾಡಲು ನರಸಿಂಹಮೂರ್ತಿಯವರು ಪತ್ರಿಕೋದ್ಯಮಿಗಳ ವಿಶೇಷ ಪ್ರವಾಸವನ್ನು ಆ ಪ್ರದೇಶಗಳಲ್ಲಿ ಏರ್ಪಡಿಸಿ ರೈತರಿಗೂ ಜನಸಾಮಾನ್ಯರಿಗೂ ಉಂಟಾದ ಮಹತ್ ಪ್ರಯೋಜನವನ್ನು ಅರಿವು ಮಾಡಿಕೊಟ್ಟರು.

ನರಸಿಂಹಮೂರ್ತಿಯವರು ವೃದ್ಧ ಪಿತಾಮಹಾ ವೆಂಕಟಕೃಷ್ಣಯ್ಯನವರ ಅಚ್ಚು ಮೆಚ್ಚಿನ ಶಿಷ್ಯರಲ್ಲಿ ಒಬ್ಬರು. ಅವರು ಸ್ಥಾಪಿಸಿದ ಅನಾಥಾಲಯದಲ್ಲಿ ನರಸಿಂಹ ಮೂರ್ತಿಯವರು ಅಶನ ವಸತಿಗಳನ್ನು ಹೊಂದಿ ಅವುಗಳ ಪೂರ್ಣ ಪ್ರಯೋಜನ ಪಡೆದು ತಮ್ಮ ವಿದ್ಯಾರ್ಥಿ ಜೀವನವನ್ನು ವಿಶೇಷ ಹಿರಿಮೆಯಿಂದ ಸಾಗಿಸಿದರು. ಎಲ್ಲ ಪರೀಕ್ಷೆಗಳಲ್ಲೂ ಅವರು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದರು. ಲೇಖನ, ಭಾಷಣ ಮುಂತಾದ ಸ್ಪರ್ಧೆಗಳಲ್ಲಿ ವಿಶೇಷ ಪ್ರಶಸ್ತಿಯನ್ನು ಪಡೆಯುತ್ತಿದ್ದರು. ಅವರ ಅಪೂರ್ವವಾದ ಮೇಧಾಶಕ್ತಿ ಮತ್ತು ಪ್ರತಿಭೆಯನ್ನು ಮೆಚ್ಚಿ ಆಗ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಡಾ॥ ರಾಮಕೃಷ್ಣರಾಯರು ಅವರಿಗೆ ತಮ್ಮ ಕುಮಾರಿ ಯನ್ನು ಕೊಟ್ಟು ವಿವಾಹ ನಡೆಸಿದರು.

ಶ್ರೀ ನರಸಿಂಹಮೂರ್ತಿಯವರ ನಯ, ವಿನಯ, ಸೌಹಾರ್ದ, ಸರಳತೆ, ಪ್ರಸನ್ನತೆ, ಪರೋಪಕಾರ ಪ್ರವೃತ್ತಿ ಮುಂತಾದ ಸದ್ಗುಣಗಳು ಎಲ್ಲರಿಗೂ ಅನುಕರಣೀಯವಾಗಿವೆ. ಕೇವಲ ಬಡತನದಲ್ಲಿ ಬೆಳೆದು ತಮ್ಮ ಸ್ವಬುದ್ಧಿ ಮತ್ತು ಶಕ್ತಿಗಳಿಂದ ಅಪಾರವಾದ ಜ್ಞಾನಾರ್ಜನೆಯನ್ನೂ ಲೋಕಾನುಭವವನ್ನೂ ಪಡೆದು ಅವರು ಆದರ್ಶ ಆಡಳಿತಾಧಿಕಾರಿ ಮತ್ತು ಸನ್ಮಾನ್ಯ ಪ್ರಜೆಯಾಗಿ ನಾಡು ನುಡಿಗಳ ಸೇವೆ ಸಲ್ಲಿಸಿ ಕೀರ್ತಿಶೇಷರಾಗಿದ್ದಾರೆ. ಅವರ ಜೀವನದ ಉನ್ನತ ಮಾದರಿಯು ನಮ್ಮ ತರುಣರೆಲ್ಲರ ಏಳಿಗೆಗೆ ದಾರಿದೀವಿಗೆಯಾಗಲೆಂದು ಹಾರೈಸೋಣ.

ಹೃದಯ ಕೈಕೊಟ್ಟಿತು . . . .

ನಿರಂಜನ

ಎಂಥ ಸಾವು ಇಷ್ಟ ? ನೂರನೆಯ ವಯಸ್ಸಿನಲ್ಲಿ ಪ್ರಾಣೋತ್ರಮಣವೆ ? ಇಳಿ ವಯಸ್ಸಿನಲ್ಲಿ ಬಂಧು ಬಳಗದ ಮಧ್ಯೆ ಕುಳಿತಿದ್ದಂತೆಯೇ ಕೊನೆಯುಸಿರೆ ? ಅಥವಾ ನಡೆಯುತ್ತಲಿದ್ದಂತೆಯೇ ಒಂದೆಡೆ ಕುಸಿದು ವಿದಾಯವೇ ?

ನರಸಿಂಹಮೂರ್ತಿಯವರು ಕೊನೆಯ ದಿನವನ್ನು ಕಳೆದದ್ದು ಹೀಗೆ :

ಎಂದಿನಂತೆ ಕಚೇರಿಗೆ ಹೋದರು. ಮಗಳ ಮದುವೆ ಮುಗಿದು ಒಂದು ವಾರವೂ ಕಳೆದಿರಲಿಲ್ಲ. ಆ ಓಡಾಟದ ಬಳಲಿಕೆ ನೀಗಲು ರಜಾ ಪಡೆಯಬಹುದಾಗಿತ್ತು. ಆದರೆ ಮೂವತ್ತು ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ದುಡಿದ ಅಧಿಕಾರಿಗೆ ಅಂಥ ರಜೆ ಬೇಕು ಎನಿಸಿರಲಿಲ್ಲ.

ಕಚೇರಿಯಂ ಕೆಲಸ, ಅಲ್ಲಿಂದ ಮಂತ್ರಿಗಳಲ್ಲಿಗೆ, ಇನ್ನೊಂದು ಹೊರೆಗೆ ಸಂಬಂಧಿಸಿ ಮೂರು ಗಂಟೆಗಳ ಕಾಲ ಚರ್ಚೆ. ಮೂರು ಗಂಟೆಗೆ ಮನೆಗೆ ಬಂದರು, ಊಟಕ್ಕೆಂದು. ಒಡತಿ ಕೇಳಿದರು : ವಿಶ್ರಾಂತಿ ತಗೋಬಾರದೆ ?

" ದೇಹಶ್ರಮ ಮಾಡ್ಕೋಬಾರದು, ಅಷ್ಟೆ, ಅಲ್ಲೇನು ಕುಣೀತೇನಾ ? " ನಗುತ್ತಾ ಮೂರೂವರೆಗೆ ಮತ್ತೇ ಕಚೇರಿಗೆ ಹೋದರು.

ಸಂಜೆ ಬಂದರು. ದುಡಿದರೂ ಪ್ರಸನ್ನ ಮುಖ, ಆ ದಿನ ಒಂದು ಸಮಾರಂಭ. ಅಲ್ಲಿಗೆ ಹೋಗಿ, ಆಮಂತ್ರಿಸಿದವರನ್ನು ಹರ್ಷಿತರನ್ನಾಗಿ ಮಾಡಿ, ಉಡುಗೊರೆ ನೀಡಿ ವಾಪಸಾದರು.

ಅಳಿಯ ಕೈಹಿಡಿದವಳೊಡನೆ ತಮ್ಮೂರಿಗೆ ಇನ್ನೂ ಹೊರಟಿರಲಿಲ್ಲ. ಹರ್ಷದ ವಾತಾವರಣ ಮನೆಯಲ್ಲಿ.

ಎಲ್ಲರೂ ಊಟಮಾಡಿದರು. ನರಸಿಂಹಮೂರ್ತಿಯವರು ಎಲ್ಲರೊಡನೆಯೂ ನಗುತ್ತ ಮಾತನಾಡಿದರು.

" ಮಾವಿನ ಹಣ್ಣು ಹೆಚ್ಚು " ಎಂದರು ಒಡತಿಗೆ.

ಸುಸಂಸ್ಕೃತ ಸಂಸಾರದ ಸುಖಸಂಕಥಾ ಕಾಲಯಾಪನೆ....

ನಡುವಿರುಳಿಗೆ ಮುಂಚೆ ನರಸಿಂಹಮೂರ್ತಿಯವರು ನಿದ್ದೆಹೋದರು.

........ಬೆಳಗಾಯಿತು. ನರಸಿಂಹಮೂರ್ತಿಯವರು ಎದ್ದಿರಲಿಲ್ಲ. ಮುಂಜಾವದ ಕಾಫಿಗೆ ಹೊತ್ತಾಯಿತಲ್ಲ ಎಂದು ಮನೆಯವರು ಕೊಠಡಿಯ ಬಾಗಿಲು ತಳ್ಳಿದರು.

ಐವತ್ತಾರು ಐವತ್ತೇಳು ವರ್ಷಗಳ ಕಾಲ ತಮ್ಮ ಸಜ್ಜನಿಕೆಯಿಂದ, ಸಂಸ್ಕಾರದಿಂದ ಹಲವು ಸಹಸ್ರ ಹೃದಯಗಳನ್ನು ಗೆದ್ದಿದ್ದ ನರಸಿಂಹಮೂರ್ತಿಯವರು ಇರಲಿಲ್ಲ. ಸಮಾಜಕ್ಕಾಗಿ ಸದಾ ಮಿಡಿದ ಎದೆಗುಂಡಿಗೆ ಯಾವುದೋ ಆವೇಳೆಯಲ್ಲಿ ಕೆಲಸ ನಿಲ್ಲಿಸಿತ್ತು. ಅವರ ನೆನಪಿನ ದೇಹವಷ್ಟೇ ಭಂಗವಿಲ್ಲದ ನಿದ್ರೆಯಲ್ಲಿತ್ತು.

* * * * *

'ಬನಶಂಕರಿ' ಪ್ರಕಟವಾದಾಗ ನನಗೊಂದು ಕಾಗದ ಬಂತು. ಚಿ. ನ. ಮಂಗಳಾ ಅದನ್ನು ಬರೆದಿದ್ದರು. ಇವರೂ ಕತೆಗಾರ್ತಿ ರಾಜೇಶ್ವರಿಯವರ, ಮೈಸೂರು ಸಂಸ್ಥಾನದ ದಕ್ಷ ಅಧಿಕಾರಿ ನರಸಿಂಹಮೂರ್ತಿಯವರ-ಮಗಳು ಎಂದು ನನಗೆ ತಿಳಿದದ್ದು ಅನಂತರ.

ನರಸಿಂಹಮೂರ್ತಿ ಜನಾನುರಾಗಿಯಾದ ಅಧಿಕಾರಿ ಮಾತ್ರವಲ್ಲ, ಸಾಹಿತ್ಯ ಪ್ರಿಯರೂ ಕೂಡ ಎಂದು ಕೇಳಿ ಸಂತೋಷಪಟ್ಟೆ.

ಆರು ವರ್ಷಗಳಿಗೆ ಹಿಂದೆ ಮೊದಲ ಬಾರಿ ಅವರನ್ನು ಕಂಡಾಗ ಅವರ ಸರಳ ವ್ಯಕ್ತಿತ್ವಕ್ಕೆ ಮಾರುಹೋದೆ.

'ಚಿಕವೀರ ರಾಜೇಂದ್ರ'ದ ಮುನ್ನುಡಿಯಲ್ಲಿ ಶ್ರೀನಿವಾಸರು ಕೃತಜ್ಞತೆ ಸಲ್ಲಿಸಿದ್ದ ನರಸಿಂಹಮೂರ್ತಿಯವರು "ನನಗಿಂತ ಕಿರಿಯರಿಲ್ಲ' ಎಂದಂತೆ ಅನಿಸಿತು.

* * * * *

ಮುಖದ ತೇಜಸ್ಸು, ಮೈಮಾಟ, ಆಗರ್ಭ ಸಿರಿವಂತರನ್ನು ನಾಚಿಸುವಂಥದು. ಬಾಲ್ಯದಲ್ಲಿ ಬಡತನದಲ್ಲಿ ವಿದ್ಯಾರ್ಜನೆ ಮಾಡಿದರು ಎಂದರೆ ನಂಬುವುದು ಕಷ್ಟ. ತಾತಯ್ಯನವರ ಅನಾಥಾಲಯದಲ್ಲಿ ಸ್ವಲ್ಪ ಸಮಯ ಪ್ರತಿಭಾಶಾಲಿಯಾದ ವಿದ್ಯಾರ್ಥಿಯಾಗಿ ಇವರಿದ್ದರು ಎನ್ನುವುದು–ಇಂದಿನ ಮುಂದಿನ ಪೀಳಿಗೆಗೊಂದು ದಂತಕಥೆ.

ಸಾರಸ್ವತ ಲೋಕಕ್ಕೆ ವಿಸ್ಮಯವೆನಿಸಬಹುದಾದದ್ದು ಎಂದರೆ, ಎಳೆ ಯೌವ್ವನವನ್ನು ಪತ್ರಿಕೋದ್ಯೋಗಿಯಾಗಿ ಇವರು ಕಳೆದರೆಂಬುದು. 'ಸಾಧ್ವಿ' 'ತಾಯಿನಾಡು'ಗಳಿಗೆ ಇವರು ವರದಿಗಾರರಾಗಿದ್ದರು, ಲೇಖನಗಳನ್ನು ಬರೆಯುತ್ತಿದ್ದರು.

ಮೈಸೂರು ಸಂಸ್ಥಾನದ ಅಧಿಕಾರಿಗಳ ಪರೀಕ್ಷೆಯಲ್ಲಿ ಮೊದಲಿಗರಾಗಿ ನರಸಿಂಹಮೂರ್ತಿಯವರು ಬದುಕಿನ ಸುದೀರ್ಘ ಅಧ್ಯಾಯವೊಂದನ್ನು ಆರಂಭಿಸಿದರು.

ನಿಷ್ಠೆ, ಶಿಸ್ತು, ನಿಸ್ಪೃಹತೆ - ಇವುಗಳನ್ನು ಜೀವನ ವಿಧಾನವಾಗಿ ರೂಪಿಸಿಕೊಂಡ ಅಲ್ಪ ಸಂಖ್ಯಾತರ ಸಾಲಿನಲ್ಲಿ ನರಸಿಂಹಮೂರ್ತಿ ಅಗ್ರಮಾನ್ಯರಾದರು.

ಈ ದುಡಿಮೆಗೆ ಅಂತಿಮ ಹಂತವಾಗಿ ಇನ್ನೇನು ಅವರು ರಾಜ್ಯದ ಛೀಫ್ ಸೆಕ್ರೆಟರಿ ಆಗಬೇಕು ಎನ್ನುವಷ್ಟರಲ್ಲೇ ಸಾವು ನಕ್ಕಿತು.

* * * * *

ಒಂದು ವಾರದ ಹಿಂದೆ ಮಗಳ ಮದುವೆಯ ಸಡಗರದಲ್ಲಿ ಊಟಕ್ಕೆ ಕುಳಿತಿದ್ದವರೆಲ್ಲರ ಬಳಿಗೆ ಬಂದು ನರಸಿಂಹಮೂರ್ತಿಯವರು ತಮ್ಮ ಸಹಜ ಆತ್ಮೀಯತೆಯಿಂದ ಮಾತಾಡಿದರು.

ಅವರ ಹೃದ್ರೋಗದ ಪ್ರಸ್ತಾಪ ಮಾಡಿದಾಗ, ಅವರನ್ನು ಇತ್ತೀಚೆಗೆ ನೋಡಿಕೊಳ್ಳುತ್ತಿದ್ದ ಡಾಕ್ಟರೆಂದರು.

"ಬಹಳ ಒಳ್ಳೆಯ ರೋಗಿ. ಇಲ್ಲದೆ ಹೋಗಿದ್ದರೆ ಹೋದ ವರ್ಷ ಎರಡನೆಯ ಸಲ ಅಟ್ಯಾಕ್ ಆದಾಗ ಅವರು ಉಳೀತಿರಲಿಲ್ಲ. ಶಿಸ್ತು, ಅಚ್ಚುಕಟ್ಟುತನ. ತಮ್ಮನ್ನು ತಾವು ಬಹಳ ಎಚ್ಚರಿಕೆಯಿಂದ ನೋಡ್ಕೋತಾರೆ."

ಅವರು ಹಾಗೆ ಹೇಳಿದ ಏಳೇ ದಿನಗಳಲ್ಲಿ ಹೃದಯ ಕೈಕೊಟ್ಟಿತು.

* * * * *

ಸುದ್ದಿ ಹಬ್ಬಿದಾಗ ಧಾವಿಸಿ ಬಂದವರು ಸಹಸ್ರಾರು ಜನ. ಅವರಿಂದೆಲ್ಲ ಸಾಲುಗಟ್ಟಿ ಅಂತಿಮ ಪ್ರಣಾಮ.

ವಯಸ್ಸಿನಲ್ಲಿ ನರಸಿಂಹಮೂರ್ತಿಯವರಿಗಿಂತ ಇಪ್ಪತ್ತು ವರ್ಷ ಹಿರಿಯರಾದ ಮಾಸ್ತಿ ಬಂದರು.

ಕೊಠಡಿಯಲ್ಲಿ ನಿಂತು ನಿಟ್ಟುಸಿರು ಬಿಟ್ಟರು.

ತಲೆಯೆತ್ತಿ ಬಳಿಯಲ್ಲಿದ್ದ ಗೋಕಾಕರತ್ತ ನೋಡಿ, ಕ್ಷಣ ಏನೂ ಆಡದೆ, ಬಳಿಕ ಅಂದರು :

"This was too much for the heart."

* * * * *

ಬಳಿಯಲ್ಲಿ ಮೇಜಿನ ಮೇಲೆ ಫೈಲುಗಳು - ಆಫೀಸು ಫೈಲುಗಳು. ಹೊರಗೆ ಹಿಂದಿನ ವಾರ ನಡೆದ ಶುಭ ಸಮಾರಂಭದ ಕುರುಹಾಗಿ ಉಳಿದಿದ್ದ ಹಸಿರು ಬಾಡಿದ ಚಪ್ಪರ.

ಸದ್ದಿಲ್ಲದೆ, ಯಾರಿಗೂ ತೊಂದರೆಯಾಗದಂತೆ, ನರಸಿಂಹಮೂರ್ತಿ ಹೊರಟು ಹೋಗಿದ್ದರು.

(ದಿನಚರಿಯಿಂದ) ೧೯೬೭

ನನ್ನ ತಾಯಿ – ಬದುಕು – ಬರಹ....

ಚಿ. ನ. ಮಂಗಳಾ

ನನ್ನ ತಾಯಿಯ ಬಗ್ಗೆ ನನಗೆ ಸ್ಪಷ್ಟವಾಗಿ ನೆನಪಿರುವ ಮೊದಲ ಚಿತ್ರ..........

ನಾನು ದೇಶೀಯ ವಿದ್ಯಾಶಾಲೆಯ ಪ್ರಾಥಮಿಕ ಶಾಖೆಯ ವಿದ್ಯಾರ್ಥಿನಿಯಾಗಿದ್ದೆ. ನನ್ನ ತಾತ ಆಗ ತಾನೆ ನನ್ನನ್ನು ಶಾಲೆಗೆ ಸೇರಿಸಿದ್ದರು. ಶಾಲೆಯ ವಾರ್ಷಿಕೋತ್ಸವ ಬಂದಿತು. ನಾನೂ ಹಲವಾರು ಸ್ಪರ್ಧೆಗಳಿಗೆ ಸೇರಿಕೊಂಡಿದ್ದೆ. ನಾನು ಕಂಠ ಪಾಠ ಮಾಡಬೇಕಾಗಿದ್ದ ಹಲವಾರು ಸಾಲುಗಳನ್ನು ನನ್ನ ತಾಯಿ ಹೇಳಿಕೊಡಬೇಕಾಗಿತ್ತು. ಆದರೆ ಅಷ್ಟರಲ್ಲೇ ಅವರು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದರು. ಚೆನ್ನಾಗಿ ಹೇಳಿ, ಬಹುಮಾನ ಗಳಿಸಬೇಕೆಂದಿದ್ದ ನನಗೆ ಅಮ್ಮ ಮನೆಯಲ್ಲಿಲ್ಲದಿರುವುದು ಕಂಡು ಅಳುವೇ ಬಂದುಬಿಟ್ಟಿತು. ಆದರೆ ನನ್ನ ತಂದೆ ಸಮಾಧಾನ ಮಾಡಿದರು. ತಾವೇ ಹೇಳಿ ಕೊಡುವುದಾಗಿ ಹೇಳಿದರು. ಹೇಳಿಯೂ ಕೊಟ್ಟರು. ಸಂಜೆ ಅಮ್ಮನನ್ನು ನೋಡಲು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮಾತಾಡಲೂ ಅಷ್ಟು ಶಕ್ತಿಯಿಲ್ಲದೆ ಹಾಸಿಗೆ ಯಲ್ಲಿ ಮಲಗಿದ್ದ ನನ್ನ ತಾಯಿ ಕೇಳಿದ ಮೊದಲ ಪ್ರಶ್ನೆ

"ಹಾಲು ಕುಡಿದೆಯಾ ?"

"ಹ್ಞ"

ಎರಡನೆಯ ಪ್ರಶ್ನೆ :

"ಕಾಂಪಿಟಿಷನ್ ಯಾವಾಗ ?"

"ಸೋಮವಾರ"

"ಸಾಲುಗಳನ್ನು ಗಟ್ಟಿ ಮಾಡಿ ಇಲ್ಲೇ ಬಂದು ಹೇಳು. ನಾನು ಹೇಳಿ ಕೊಡುತ್ತೀನಿ. ಚೆನ್ನಾಗಿ ಮಾಡು".

ನನಗಾದ ಸಂತೋಷ ಅಷ್ಟಿಷ್ಟಲ್ಲ. ಅಮ್ಮ ಆಸ್ಪತ್ರೆಯಲ್ಲಿ ಮಲಗೇ ನನಗೆ ಪದ್ಯಗಳನ್ನೂ ಕಥೆಗಳನ್ನೂ ಹೇಳಿಕೊಟ್ಟಳು. ನನ್ನ ರಿಹರ್ಸಲ್ಸ್ ಎಲ್ಲ ಅಲ್ಲಿಯೆ. ವೈದ್ಯರೂ ಅದಕ್ಕೆ ಅಡ್ಡಿ ಬರಲಿಲ್ಲ. ನನಗೆ ಪ್ರತಿಯೊಂದು ಸ್ಪರ್ಧೆಯಲ್ಲೂ ಬಹುಮಾನ ಬಂದಿತು. ಅಷ್ಟು ಹೊತ್ತಿಗೆ ಅಮ್ಮ ಆಸ್ಪತ್ರೆಯಿಂದ ಮನೆಗೆ ಬಂದಿದ್ದಳು.

ಮಕ್ಕಳು ಚೆನ್ನಾಗಿ ಕಲಿಯಬೇಕು, ಚೆನ್ನಾಗಿ ಬಾಳಬೇಕು ಎಂಬುದು ನನ್ನ ತಾಯಿಯ ಆಸೆ. ಎಲ್ಲ ತಾಯಿಯರ ಆಸೆಯ ಹಾಗೆ.

ಇದಕ್ಕಾಗಿ ನಮ್ಮ ತಾಯಿ ಪಡುತ್ತಿದ್ದ ಶ್ರಮ ಅಷ್ಟಿಷ್ಟಲ್ಲ.

ನಮ್ಮ ತಾಯಿಯ ಮನೆತನ ತುಂಬ ಸುಸಂಸ್ಕೃತ ವಿಚಾರವಂತ ಮನೆತನ. ನಮ್ಮ ತಾಯಿಯ ತಂದೆ ಮದರಾಸಿನ ಬಳಿಯಿರುವ ಲಾಲಾಪೇಟೆಯವರು. ತಂದೆ ಲಾಲಾ ಪೇಟೆ ರಾಮಕೃಷ್ಣರಾಯರು. ತೆಲುಗರು. ತಾಯಿ ಚಿದಂಬರಮ್ಮ. ಮದರಾಸಿನಲ್ಲೇ ವಿದ್ಯಾಭ್ಯಾಸ. ಮದರಾಸು ವಿಶ್ವವಿದ್ಯಾಲಯದಿಂದ ವೈದ್ಯ ಪದವಿ. ನಮ್ಮ ಅಜ್ಜಿಯ ಮನೆತನವೊದಲಿಂದಲೂ ಅಧ್ಯಾತ್ಮ ಜೀವನಕ್ಕೆ ಹೆಸರಾದದ್ದು. ಕಾವ್ಯ ರಚನೆ ಆ ಮನೆತನದ ಹೆಣ್ಣು ಮಕ್ಕಳ ದಿನ ನಿತ್ಯದ ಕ್ರಿಯೆ. ನನ್ನ ತಾಯಿಯ ತಾಯಿ, ಅಜ್ಜಿ, ಮುತ್ತಜ್ಜಿಯರು ಬರೆದಿರುವ ಅನುಭಾವ ಗೀತೆಗಳು ಹಲವಾರು ಸಂಪುಟಗಳಾಗಬಹುದು. ಅವನ್ನು ಪರಿಷ್ಕರಿಸುವ ಕಾರ್ಯ ಉಳಿದಿದೆ. ಇದೆಲ್ಲ ತೆಲುಗಿನಲ್ಲಿದೆ. ನಮ್ಮ ತಾಯಿ ಇರುವವರೆಗೂ ನನಗೆ ಮನೆಯಲ್ಲಿ ಕನ್ನಡಕ್ಕಿಂತ ತೆಲುಗಿನದೇ ಹೆಚ್ಚು ಬಳಕೆ.

ನಮ್ಮ ತಾಯಿ ಒಬ್ಬಳೇ ಮಗಳಾದರೂ ಮನೆಯಲ್ಲಿ ಶಿಸ್ತಿಗೆ ತುಂಬ ಪ್ರಾಶಸ್ತ್ಯ. ಮನೆಗೆಲಸಕ್ಕೆ ಎಂದೂ ಹಿಂದು ಮುಂದು ನೋಡಿದವರಲ್ಲ ನಮ್ಮ ತಾಯಿ. ಸ್ವಾವಲಂಬಿ ಗಳಾಗಬೇಕೆಂದು ನಮ್ಮ ತಂದೆ ತಾಯಿಯರ ಅಪೇಕ್ಷೆ. ಮನೆಯಲ್ಲಿ ನಮಗೆ ದೊರೆತ ಶಿಕ್ಷಣ ಇದೇ ಬಗೆಯದು.

ನಮ್ಮ ತಾಯಿಗೆ ಬಾಲ್ಯದಲ್ಲೇ ಮದುವೆಯಾಗಿ ಮದುವೆಯಾದ ಮರುಘಳಿಗೆ ಯಲ್ಲೇ ವೈಧವ್ಯ ಪ್ರಾಪ್ತವಾದರೂ ನಮ್ಮ ಅಜ್ಜಿ ತಾತ ಅವರಿಗೆ ಎಲ್ಲ ಬಗೆಯ ಪ್ರೋತ್ಸಾಹ ಕೊಟ್ಟಿದ್ದು ನಮ್ಮ ಸಾಮಾಜಿಕ ಜೀವನದ ಅಂಧಕಾರದಲ್ಲಿ ಕಂಡು ಬಂದ ಆಶಾಕಿರಣ. ನಮ್ಮ ತಾಯಿಯ ವಿದ್ಯಾಭ್ಯಾಸ ಮುಂದುವರಿದದ್ದೇ ಅಲ್ಲದೆ ಅವರಿಗೆ ಸಾಹಿತ್ಯ, ಕಲೆ, ಸಂಗೀತ ಇವುಗಳಲ್ಲೂ ಪರಿಶ್ರಮ ಸಾಧ್ಯವಾಯಿತು. ನಮ್ಮ ತಾಯಿ ಪಿಟೀಲು ನುಡಿಸುತ್ತಿದ್ದರು. ಚಿತ್ರ ಕಲೆಯಲ್ಲಿ ಅವರಿಗೆ ಆಸಕ್ತಿ, ಕಾಗದದ ಮೇಲೆ ಬಟ್ಟೆಗಳ ಮೇಲೆ ಆಕೆ ಬಿಡಿಸಿರುವ ಚಿತ್ರಗಳು ಹಲವಾರು. ಕಸೂತಿ, ರಂಗವಲ್ಲಿ ಇವಂತೂ ದಿನದ ಕಾರ್ಯಕ್ರಮ. ವಿಜ್ಞಾನದ ವಿದ್ಯಾರ್ಥಿನಿಯಾಗಿದ್ದ ನಮ್ಮ ತಾಯಿಗೆ ಗಣಿತದಲ್ಲಿ ವಿಶೇಷ ಒಲವು. ಜೊತೆಗೆ ಅವರಿಗೆ ಹಿಂದಿ, ಕನ್ನಡ, ಸಂಸ್ಕೃತ, ತಮಿಳು, ಇಂಗ್ಲಿಷ್ ಇವುಗಳಲ್ಲಿ ಪಾಂಡಿತ್ಯವಿತ್ತು.

ನಮ್ಮ ತಾಯಿಗೆ ಆಟಗಳಲ್ಲೂ ಆಸಕ್ತಿ. ಬೆಂಗಳೂರಿನ ಮಹಿಳಾ ಸಮಾಜದಲ್ಲಿ ಟೆನಿಸ್ ಆಡುತ್ತಿದ್ದ ಮೊದಲಿಗರಲ್ಲಿ ಅವರೂ ಒಬ್ಬರು.

ತೋಟಗಾರಿಕೆ ಅವರಿಗೆ ತುಂಬ ಪ್ರಿಯವಾದ ಹವ್ಯಾಸ. ಗಿಡ ಮರ ಹೂ ಬಳ್ಳಿಗಳಿಲ್ಲದೆ ಅವರು ಒಂದು ನಿಮಿಷವೂ ಇರುತ್ತಿರಲಿಲ್ಲ. ನಮ್ಮ ತಾಯಿ ಇದ್ದ

ಮನೆಗಳೆಲ್ಲ ನಂದನವನ. ಒಮ್ಮೊಮ್ಮೆ ಮಿತಿಯನ್ನೂ ಮೀರಿ ಬೆಳೆಯುತ್ತಿದ್ದ ಸಸ್ಯ ಸಂಪತ್ತನ್ನು ನೋಡಿ ಹಲವರು ನಮ್ಮ ಉದ್ಯಾನವನ್ನು ಪ್ರೀತಿಯಿಂದ 'ಗೊಂಡಾರಣ್ಯ' ಎನ್ನುತ್ತಿದ್ದುದೂ ಉಂಟು. ಅಲ್ಲದೆ ನಮ್ಮ ಮನೆಯಲ್ಲಿ ಮಾವಿನ ಮರದಲ್ಲಿ ಸೀಬೇ ಹಣ್ಣು ಬಿಟ್ಟರೂ ಆಶ್ಚರ್ಯವಿಲ್ಲ ಎಂದು ಹಾಸ್ಯ ಮಾಡುತ್ತಿದ್ದುದುಂಟು.

ನಮ್ಮ ತಾಯಿಗೆ ಒಡವೆ ಬಟ್ಟೆ ಬರೆಗಳಲ್ಲಿ ಎಂದೂ ಆಸಕ್ತಿಯಿರಲಿಲ್ಲ. ಅವರಿಗೆ ಪ್ರಿಯವಾದವು ಮೂರು. ಸಸ್ಯ ಸಂಪತ್ತು, ಸಾಹಿತ್ಯ ಪ್ರಪಂಚ, ಕಲಾ ಜಗತ್ತು ಮನೆಯೇ ಅವರ ಕರ್ಮಭೂಮಿ. ಕಾರ್ಯಭೂಮಿ.

ನಮ್ಮ ತಾಯಿಗೆ ತಮ್ಮ ತಂದೆಯ ಮನೆಯಲ್ಲಿ ಎಷ್ಟು ಪ್ರೋತ್ಸಾಹ ದೊರೆಯಿತೋ ಮತ್ತೆ ವಿವಾಹವಾದ ಮೇಲೆ ನಮ್ಮ ತಂದೆಯ ಮನೆಯಲ್ಲಿ ಅಷ್ಟೇ ಪ್ರೋತ್ಸಾಹ ದೊರೆಯಿತು.

ನಮ್ಮ ತಂದೆತಾಯಿಯರ ಮದುವೆಯಾದದ್ದು ಬೆಂಗಳೂರಿನ ದಂಡು ಪ್ರದೇಶದ ಮದುವೆಗಳ ರಿಜಿಸ್ಟ್ರಾರರ ಕಚೇರಿಯಲ್ಲಿ—8ನೇ ಮೇ 1937 ರಂದು. ಈ ರಿಜಿಸ್ಟರ್ ವಿವಾಹ ನಡೆದದ್ದು ನಮ್ಮ ತಾಯಿಯ ತಾತ ಶ್ರೀ ಡಿ. ಎಂ. ಲಕ್ಷ್ಮಯ್ಯನವರು ನಮ್ಮ ತಾತನ ಷಡ್ಡಕ ಇಂಜನಿಯರಾಗಿದ್ದ ಹೆಬ್ಬಾಳ ಶ್ರೀನಿವಾಸಶಾಸ್ತ್ರಿಗಳು ನಮ್ಮ ತಾಯಿಯ ತಂದೆ ಇವರ ಸಮ್ಮುಖದಲ್ಲಿ.

ನಲವತ್ತೆರಡು ವರುಷಗಳ ಹಿಂದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬ ವೊಂದರಲ್ಲಿ ನಡೆದ ಈ ವಿವಾಹ ಬರಿ ಕುಟುಂಬಕ್ಕೆ ಮಾತ್ರ ಸೀಮಿತವಾದ ಪ್ರಾಮುಖ್ಯ ತೆಯದಲ್ಲ. ಅದು ಒಂದು ಕಾಂತ್ರಿಕಾರಕವಾದ ಸಾಮಾಜಿಕ ಘಟನೆ. ಈ ವಿವಾಹಕ್ಕೆ ನಮ್ಮ ತಂದೆ ತಾಯಿಗಳ ಕುಟುಂಬದ ಹಿರಿಯರು ಒಪ್ಪಿದ್ದು ಇನ್ನೂ ಮಹತ್ತರ ಘಟನೆ.

ಈ ಘಟನೆಯಷ್ಟೇ ಸೋಜಿಗ ನಮ ತಂದೆಯ ತಂದೆ, ಅಕ್ಕ ತಂಗಿಯರು ನಮ್ಮ ತಾಯಿಯನ್ನು ಮನೆಯ ಸೊಸೆಯಾಗಿ ಒಪ್ಪಿಕೊಂಡಿದ್ದು, ವಿವಾಹದ ಆರತಕ್ಷತೆಯಲ್ಲಿ ಸಂಭ್ರಮದಿಂದ ಓಡಾಡಿದ ನಮ್ಮ ಸೋದರತ್ತೆಯರ ವಿಷಯವನ್ನು ಆರತಕ್ಷತೆಗೆ ಹೋಗಿದ್ದವರು ಈಗಲೂ ನನ್ನೊಡನೆ ಹೇಳುವುದುಂಟು.

ನಮ್ಮ ತಂದೆಯ ಕುಟುಂಬ ದೊಡ್ಡ ಕುಟುಂಬ. ನಮ್ಮ ತಾತ ಅಗ್ರಹಾರದ ಚಿದಂಬರಾಯರು. ನಮ್ಮ ತಾಯಿಯನ್ನು ಸ್ವಂತ ಮಗಳಿಗಿಂತ ಹೆಚ್ಚಾಗಿ ನೋಡಿಕೊಳ್ಳು ತ್ತಿದ್ದರು. 'ರಾಜಮ್ಮ' ಅವರಿಗೆ ಮಗನಿಗಿಂತ ಹೆಚ್ಚು. ಮಗನ ಮದುವೆಯಾದ ಮೇಲೆ ನಮ್ಮ ತಾತ ಮಗನ ಜೊತೆಯಲ್ಲೇ ಇದ್ದರು. ನಮ್ಮ ತಂದೆಯ ತಾಯಿ ನಮ್ಮ ತಂದೆಯ ವಿವಾಹವಾಗುವುದಕ್ಕೆ ಮೊದಲೇ ಕಾಲವಾಗಿದ್ದರು. ಬಡತನ ಅವರನ್ನು ಕಾಡಿಸಿತ್ತು. ನಮ್ಮ ತಂದೆಯ ತಮ್ಮ, ಅಕ್ಕತಂಗಿಯರು, ನಮ್ಮ ತಾಯಿ ಯನ್ನು ನೋಡಿಕೊಂಡ ರೀತಿ ಈಗಲೂ ತೋರಿಸುತ್ತಿರುವ ಪ್ರೀತಿ, ವಿಶ್ವಾಸ

ತುಂಬ ಪ್ರಮುಖವಾದ ಮತ್ತೊಂದು ಸಾಮಾಜಿಕ ಮೌಲ್ಯ. ಈ ಆತ್ಮೀಯತೆ ಒಂದು ಐತಿಹಾಸಿಕ ದಾಖಲೆ. ನಾನು ಶಾಲೆಯಿಂದ ಬಂದ ಕೂಡಲೆ ತಾತ ಚಿದಂಬರರಾಯರು ನನ್ನನ್ನು ತಮ್ಮ ಬಳಿ ಕೂಡಿಸಿಕೊಂಡು ನನಗೆ ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಅಲ್ಲದೆ ನಾನು ಪ್ರೈಮರಿ ಶಾಲೆಯನ್ನು ದಾಟುವುದಕ್ಕೂ ಮೊದಲೆ ರಾಮಾಯಣ ಮಹಾಭಾರತದ ಕಥೆಗಳೆಲ್ಲವನ್ನೂ ಅವರು ಹೇಳಿದ್ದರು. ತಾತನಿಂದ ಕೇಳಿದ ಆ ಕಥೆಗಳನ್ನು ತಂದೆ ತಾಯಿಗಳಿಗೆ ಹೇಳುವುದು ನನಗೊಂದು ಆನಂದ.

ನಮ್ಮ ತಂದೆ ತಾಯಿ ಇಬ್ಬರನ್ನೂ ಸಂಸಾರ ಸಮಾಜ ಎರಡೂ ಒಲಪಿನಿಂದ ಪರಿಗ್ರಹಿಸಿದ್ದು ನಲವತ್ತೆರಡು ವರುಷಗಳ ಹಿಂದೆ ನಡೆದ ' ಪವಾಡ '.

ದೈವಭಕ್ತಿ, ಧರ್ಮಶ್ರದ್ಧೆ ಇವು ನಮ್ಮ ತಾಯಿಗೆ ವಂಶಪಾರಂಪರ್ಯವಾಗಿ ಬಂದದ್ದು. ವೈದ್ಯರಾಗಿದ್ದ ನನ್ನ ತಾತನವರಿಗೆ ದೀನದಲಿತರ ಬಗ್ಗೆ ತುಂಬ ಅನುಕಂಪ. ಹೆಚ್ಚಾಗಿ ಹಳ್ಳಿಗಳಲ್ಲೇ ಅವರ ಸರ್ಕಾರಿ ಸರ್ವಿಸ್ಸು. ಕಾಯಿಲೆಯವರು ಬಡವರಾಗಿದ್ದರೆ ಅವರಿಗೆ ಮನೆಯಿಂದ ಬಿಸಿನೀರು, ಊಟ, ಗಂಜಿ, ಹಣ್ಣುಹಂಪಲು. ಬಡ ವಿದ್ಯಾರ್ಥಿಗಳಿಗೆ ಮನೆಯಲ್ಲೇ ಊಟ ವಸತಿ. ಅಧ್ಯಾತ್ಮದಲ್ಲಿ ಆಸಕ್ತಿ. ಇವೆಲ್ಲ ಗುಣಗಳು ನಮ್ಮ ತಾಯಿಯಲ್ಲಿ ಮನೆಮಾಡಿದ್ದವು. ನಮ್ಮ ತಾಯಿಯ ಮನೆಯುಲ್ಲಿ ಅಧ್ಯಾತ್ಮ ಜೀವನ ಬರಿ ' ಅಕೆಡೆಮಿಕ್ ' ಅಲ್ಲ. ಅದು ಅವರ ಬದುಕಿನ ರೀತಿ. ನನ್ನ ಅಜ್ಜಿ ಹೆಚ್ಚು ಓದಿದವರು ಅಲ್ಲದೆ ಇದ್ದರೂ ವೇದಾಂತದ ಪುಸ್ತಕಗಳನ್ನೂ ಸಾಹಿತ್ಯ ಕೃತಿಗಳನ್ನೂ ಓದಿ ನಮ್ಮೆಲ್ಲರ ಜೊತೆ ಚರ್ಚಿಸುತ್ತಿದ್ದರು. ನಮ್ಮ ಅಜ್ಜಿ ತಾತ ಅವರ ಬದುಕಿನಲ್ಲಿ ಶ್ರೀ ಶಂಕರಾಚಾರ್ಯರ ಅದ್ವೈತ ತತ್ವವೂ ಶ್ರೀ ರಾಮಕೃಷ್ಣಪರಮಹಂಸರ ಅಧ್ಯಾತ್ಮ ಜೀವನವೂ ತುಂಬ ಪ್ರಭಾವ ಬೀರಿದ್ದವು.

ಈ ವಾತಾವರಣದಲ್ಲಿ ಬೆಳೆದ ನಮ್ಮ ತಾಯಿ ಸಹಜವಾಗಿಯೇ ಮಾನವೀಯ ಮೌಲ್ಯಗಳನ್ನೂ ಅಧ್ಯಾತ್ಮತತ್ವವನ್ನೂ ಮೈಗೂಡಿಸಿಕೊಂಡಿದ್ದರು.

ದಾದಾ ಗೋಕಾಕ್ ಅವರ ಮೂಲಕ ನಮ್ಮ ತಂದೆ ತಾಯಿಯರಿಗೆ 1967ರಲ್ಲಿ ಶ್ರೀ ಸತ್ಯಸಾಯಿಬಾಬಾ ಅವರ ದರ್ಶನವಾಯಿತು. ಮೂರ್ತಿಯವರನ್ನು ಬಾಬಾ ಅಕ್ಕರೆಯಿಂದ ಆತ್ಮೀಯತೆಯಿಂದ ಕಂಡರು. ಶ್ರೀ ಸತ್ಯಸಾಯಿಬಾಬಾ ಮೂರ್ತಿ ಕುಟುಂಬದ ದಾರಿದೀಪವಾದರು. ಅಂತೆಯೇ ಸಾಯಿ ಅಧ್ಯಾತ್ಮ ಕೇಂದ್ರದ ಪೂಜ್ಯ ರಾಧಾಕೃಷ್ಣ ಸ್ವಾಮಿಗಳೂ ನಮ್ಮ ತಾಯಿಯವರನ್ನು ತುಂಬ ಆತ್ಮೀಯವಾಗಿ ಕಂಡರು.

ಬಾಬಾ ಅವರನ್ನು ದೈವವಾಗಿ ಸ್ವೀಕರಿಸಿದ ನಮ್ಮ ತಾಯಿ ಶುದ್ಧ ನಾಸ್ತಿಕವಾದಿಯಾದ ಗೋರಾ ಅವರನ್ನೂ ಅವರ ಕುಟುಂಬದವರನ್ನೂ ಅಷ್ಟೇ ಪ್ರೀತಿಯಿಂದ ಕಂಡರು. ಇದೂ ಒಂದು ಸೋಜಿಗವೇ. ಬೆಂಗಳೂರಿಗೆ ಬಂದಾಗ ಗೋರಾ ಅವರೂ

ಅವರ ಪತ್ನಿ ಮಕ್ಕಳೂ ನಮ್ಮ ಮನೆಗೆ ಬಂದು ನಮ್ಮ ತಾಯಿಯ ಜೊತೆ ಜೀವನದ ಹಲವಾರು ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಒಂದು ಬಗೆಯ ಆತ್ಮೀಯತೆ ನಮ್ಮ ಕುಟುಂಬಗಳ ನಡುವೆ ಬೆಳೆದು ಬಂದಿತ್ತು. ವೈಯ್ಯಕ್ತಿಕ ನೀತಿ ನಿಷ್ಠೆ ನಡವಳಿಕೆಗಳು ಎಷ್ಟೇ ಬೇರೆ ಬೇರೆಯಾಗಲಿ ಪ್ರೀತಿ ವಿಶ್ವಾಸಕ್ಕೆ ಅವು ಅಡಚಣೆಯಲ್ಲ ಎಂಬುದನ್ನು ನಮ್ಮ ತಾಯಿ ಜೀವನದಲ್ಲಿ ಬರೀ ಆಡಿ ತೋರಿಸದೆ ಬಾಳಿ ತೋರಿಸಿದರು.

ನಮ್ಮ ತಾಯಿಯ ಬದುಕು ಸರಳ, ಸುಂದರ ಸುಸಂಸ್ಕೃತ. ಅವರ ಬರಹವೂ ಅಷ್ಟೆ.

ನಮ್ಮ ತಾಯಿ ಎರಡು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಬೆಳದಿಂಗಳ ರಾತ್ರಿ', 'ಗುಲಾಬಿ ಹೂ' ಒಂದು ಕಾದಂಬರಿಯನ್ನೂ ಬರೆದು ಮುಗಿಸುವುದರಲ್ಲಿದ್ದರು. ಹಲವಾರು ಬಿಡಿ ಗೀತೆಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ತೆಲುಗಿನಲ್ಲಿ ಹಾಡು ಗಳನ್ನು ರಚಿಸಿದ್ದಾರೆ. ಮೈಸೂರು, ಬೆಂಗಳೂರು, ಮದರಾಸಿನ ಬಾನುಲಿ ಕೇಂದ್ರ ಗಳಿಂದ ಅವರ ಹಲವಾರು ಕಥೆಗಳೂ ಹರಟೆಗಳೂ ಬಿತ್ತರಗೊಂಡವು.

ನಮ್ಮ ತಾಯಿ ಸ್ವಾತಂತ್ರ ಪೂರ್ವಕ್ಕೆ ಬರಹವನ್ನು ಆರಂಭಿಸಿದ ಕತೆಗಾರ್ತಿ. ಮನೆಯ ಮಾತು ತೆಲುಗಾದರೂ ಅವರ ಕನ್ನಡ ಸುಲಲಿತ. ಭಾಷೆ ಶೈಲಿ ನಿರೂಪಣೆ ಸರಳ. ವಿಷಯ ಎಲ್ಲಿಯೂ ಅತಿಯಾಗುವುದಿಲ್ಲ. ಅವರ ಎರಡು ಕಥಾ ಸಂಗ್ರಹ ಗಳೂ ಮೈಸೂರಿನ ಕಾವ್ಯಾಲಯದಿಂದ ಪ್ರಕಾಶಿತ. ಅವರ ಕಥೆಗಳ ಬಗ್ಗೆ ಹಿರಿಯ ವಿಮರ್ಶಕರ ಅಭಿಪ್ರಾಯಗಳಲ್ಲಿ ಕೆಲವನ್ನು ಇಲ್ಲಿ ಉದ್ಧರಿಸಿದ್ದೇನೆ.

ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಗಳು ಕಾವ್ಯಾಲಯದ ಕೂಡಲಿ ಚಿದಂಬರಂ ಅವರಿಗೆ ಬರೆದ ಪತ್ರ "........ನೀವು ಪ್ರಕಟಿಸಿರುವ ಮಹಿಳಾ ಸಾಹಿತ್ಯವೆಲ್ಲವೂ ಚೆನ್ನಾಗಿದೆ. ತುಂಬ ಸಂರುಚಿ ಸಂಸ್ಕೃತಿ ಸೌಜನ್ಯಗಳಿಂದ ಕೂಡಿವೆ. ನಾವು ಕಥೆ ಓದುವುದು ಕಥೆಗಾಗಿ, ಆದ್ದರಿಂದ ನೇರವಾಗಿ ಒಳ್ಳೆಯ ವಸ್ತುವನ್ನು ಸುಲಭ ಶೈಲಿಯಲ್ಲಿ ಬರೆದಿದ್ದರೆ ನನಗೆ ಓದಲು ತುಂಬ ಇಷ್ಟ. ವರ್ಣನೆ ಲಕ್ಷಣತಂತ್ರ ಚಿತ್ತ ವಿಶ್ಲೇಷಣೆ ಪಾತ್ರಪರಿಪೋಷಣೆ ಮುಂತಾದ ಏನೇನೋ ಸ್ವಯಂ ನಿರ್ಮಿತ ತೊಡಕುಗಳಲ್ಲಿ ಸಿಕ್ಕಿ ಕೊಳ್ಳದೆ ವಾಸ್ತವಿಕತೆಯಿಂದಲೂ ಸರಳತೆಯಿಂದಲೂ ಅನುಭವಕ್ಕೆ ಬಂದು, ಮನವುಗುವ, ನಮ್ಮ ಜೀವನವನ್ನು ತಿದ್ದಬಲ್ಲ ಬರವಣಿಗೆಗೆ ಹಿರಿಯ ಬೆಲೆ ಕೊಡಬೇಕು. ಏನೇ ಹೇಳಿದರೂ ಈ ಪ್ರಪಂಚದಲ್ಲಿ ಕಷ್ಟ ಸುಖಗಳಿಗೆ ಸಂಸಾರ ಮೂಲ. ಅದನ್ನು ಹಸನು ಮಾಡಬಲ್ಲ ಜನ ಧನ್ಯರು. 'ಬೆಳದಿಂಗಳ ರಾತ್ರಿ' ಕಾವ್ಯಮಯವಾಗಿದೆ. 'ಮಾಡಿದರೆ ಮನೆ' ಸಂಸಾರಕ್ಕೆ ಪ್ರತೀಕ. 'ಸೇರಿದಮನೆ'ಯ ಉತ್ತರ ಭಾಗವಿದ್ದಿದ್ದರೆ ಚೆನ್ನಾಗಿತ್ತು.

ಶ್ರೀಮತಿ ರಾಜೇಶ್ವರಿಯವರು ತಮ್ಮ ಗ್ರಂಥವನ್ನು ತಮ್ಮ ಸ್ವರ್ಗಸ್ಥರಾದ ತಾಯಿ ತಂದೆಗಳ ನೆನಪಿಗೆ ಅರ್ಪಿಸಿರುವುದನ್ನು ನೋಡಿ ನನಗೆ ತುಂಬ ಸಂತೋಷ ವಾಯಿತು. ಡಾ॥ ರಾಮಕೃಷ್ಣರಾಯರನ್ನು ನಾನು ನೋಡಿದ್ದೆ. ಅವರು ಬದುಕಿದ್ದರೆ

ಈ ಪುಸ್ತಕ ಓದಿ ಎಷ್ಟು ಸಂತೋಷಪಡುತ್ತಿದ್ದರೋ. ತಂದೆ ತಾಯಿಗಳು ತಮ್ಮ ಮಕ್ಕಳು–ಅವರಲ್ಲಿಯೂ ಹೆಣ್ಣು ಮಕ್ಕಳು–ಓದಿ ವಿದ್ಯಾವಂತರಾಗಿ ಸುಸಂಸ್ಕೃತರಾಗಿ ಹಾಲಿನಂಥ ಸಾಹಿತ್ಯ–ಬರೆಯುವುದನ್ನು ಓದಿ ನೋಡಿ ಸಂತೋಷಪಡುವುದಕ್ಕೆ ಪುಣ್ಯ ಪಡೆದಿರಬೇಕು. ಪ್ರೀತಿಯ ಮಕ್ಕಳಿಗೂ ತಮ್ಮನ್ನು ಅಕ್ಕರೆಯಿಂದ ಸಲಹಿದ ತಾಯಿ ತಂದೆಗಳಿಗೆ ತಮ್ಮ ಸೃಷ್ಟಿಯನ್ನು ತೋರಿಸುವುದಕ್ಕಿಂತ ಏನು ಹೆಚ್ಚಿನ ಸುಖವಿದ್ದೀತು? ಆದರೆ ಅವಕ್ಕೆಲ್ಲ ಪುಣ್ಯ ಬೇಕು. ಅದು ಎಲ್ಲಿ ಅಡಗಿದೆಯೋ ಅದನ್ನು ಹೇಗೆ ಸಂಪಾದಿಸಬೇಕೋ !........"

* * *

ನಮ್ಮ ತಾಯಿಯವರ ಮೊದಲ ಕಥಾ ಸಂಕಲನ 'ಬೆಳದಿಂಗಳ ರಾತ್ರಿ'. ಹತ್ತೊಂಬತ್ತು ಕಥೆಗಳ ಈ ಸಂಕಲನಕ್ಕೆ ಸೇಸೆ ನುಡಿಯನ್ನು ಬರೆದಿದ್ದಾರೆ ಪೂಜ್ಯ ಮಾಸ್ತಿ ಅವರು. ವಿ. ಸೀ. ಅವರು ಬರೆದಿರುವ ಮುನ್ನುಡಿಯಿಂದ ಕೆಲವು ಮಾತುಗಳು: "...........ಶ್ರೀಮತಿ ರಾಜೇಶ್ವರಿ ಅವರು ಕೆಲವು ವರ್ಷಗಳಿಂದ ಆಗ ಈಗ ಹರಟೆ ಗಳನ್ನೂ ಸಣ್ಣ ಕತೆಗಳನ್ನೂ ಬರೆಯುತ್ತಿದ್ದಾರೆ. ಒಳ್ಳೆಯ ಮನೆತನಕ್ಕೆ ಸೇರಿ, ಮರ್ಯಾದೆ, ದಾಕ್ಷಿಣ್ಯ ಅರಿತ ಅವರ ಮನಸ್ಸು ಲೋಕವನ್ನು ಮರ್ಯಾದೆಯಿಂದಲೇ ದಾಕ್ಷಿಣ್ಯದಿಂದಲೇ ಕಂಡಿತು. ಅವರ ಅನುಭವದ ವ್ಯಾಪ್ತಿ ಸಹಜವಾಗಿ ತನ್ನ ಸುತ್ತ ಮುತ್ತಿನ ಪ್ರಪಂಚಕ್ಕೆ ಮಿತವಾದ್ದು. ಆದರೂ ಅವರು ಕಾಣುವ ಸುಖ, ದುಃಖ ಸರಸ, ವಿರಸ, ವ್ಯಂಗ್ಯ, ಭ್ರಾಂತಿ, ವಿಷಮತೆ, ವಿಶದತೆ ವಿಸ್ತಾರ ಸಹಜವಾದವು_ದಿನ ಜೀವನದಲ್ಲಿ ಕಾಣುತ್ತಿರುವವು. ಅವನ್ನೂ ಅವರು ಸಾಮರಸ್ಯದಿಂದ ನೋಡುತ್ತಾರೆ. ನೇರವಾಗಿ ಸರಳವಾಗಿ ಚಿತ್ರಿಸುತ್ತಾರೆ, ಬರೆಯುತ್ತಾರೆ. ಯಾವುದರಲ್ಲಿಯೂ ಅತಿಯಿಲ್ಲ. ಬೇಕೆಂದು ಆಳವನ್ನೊ, ಬೇರೆ ಪ್ರಮಾಣಗಳನ್ನೋ ಅತಿ ಮಾಡರು. ಬೇಕೆಂದು ಕರ್ಕಶತೆಯನ್ನೂ ವಿಕಟತೆಯನ್ನೂ ಬೆಳಸರು. ಸಂತೋಷವಿಲ್ಲದ ಜನ, ಏನು ಮಾಡಿದರೂ ದೊರೆತರೂ ಸಂತೋಷಪಡದೆ ವಿರಸವನ್ನೂ ಜೀವನದ ಕಹಿಗಳನ್ನೇ ಮೆರಸಿ ಕತೆಗಾರಿಕೆಯನ್ನು ಬಳಸುತ್ತಿರುವ ಕಾಲದಲ್ಲಿ ನೇರವಾಗಿ ಏನನ್ನಾದರೂ ಕಂಡೇವೇ ಎನ್ನಿಸುತ್ತದೆ. ಹಾಗೆಯೇ ಕತೆಯಂ ತಂತ್ರ ಅತಿಜಾಣವಾಗಿ ಕಲ್ಪನೆಯ ದುಃಸಾಹಸಗಳನ್ನು ಬೆಳೆಸದೆ ಕತೆಗಿಂತ ತಂತ್ರಭಾಗ, ಶೈಲಿಬೆಡಗು, ಅನುಚಿತ ಮನೋ ವಿಶ್ಲೇಷಣ ಬೇರೆಡೆ ಹೆಚ್ಚಾಗುವುದುಂಟು. ಅಂಥವುಗಳನ್ನುಕಾಣಿಸುವ ಗೋಜಿಗೆಹೋಗದೆ ಮನಸ್ಸನ್ನೂ ಬರವಣಿಗೆಯನ್ನೂ ಕಾಪಾಡಿಕೊಂಡಿದ್ದಾರೆ ಇವರು. ಆ ಪ್ರಾಗಲ್ಭ್ಯದ ಬರವಣಿಗೆಯಲ್ಲಿ ಉಗ್ರತೆ, ಆವೇಶ, ತೀವ್ರವೇದನೆ, ಗಾಢ ಗೂಢ, ಪದರ ಇರುತ್ತವೆ. ಬೆರಗುಗೊಳಿಸಬಲ್ಲ ಕೌಶಲವೂ ಇರಬಲ್ಲದು. ಕೆಲವು ನಷ್ಟಗಳು ನಷ್ಟವಲ್ಲವೇನೋ. ಹೊಸ ಕಾಲದಲ್ಲಿ ಕತೆಗಾರರಿಗೆ ಪ್ರಿಯವಾದ ಕೆಲವು ವೃತ್ತಿಗಳನ್ನೂ ಇವರು ಆರಿಸಿ ಕೊಳ್ಳುವುದಿಲ್ಲ. ಆದ್ದರಿಂದ ಅಲ್ಲಿ ತರಬಹುದಾಗಿದ್ದ ರಂಗು ರೋಮಾಂಚಗಳನ್ನೂ ಸೆಳೆತಗಳನ್ನೂ ಈ ಕತೆಗಳಲ್ಲಿ ಕಾಣಲಾಗದು. ಇರುವುದು ತಿಳಿಯಾಗಿ, ನಿಷ್ಕಪಟವಾಗಿ ಮರ್ಯಾದೆ ಮೀರದೆ ಇದೆ.

ಜ್ಞಾನಪೀಠದ ಆಯ್ಕೆ ಸಮಿತಿಯ ಅಧ್ಯಕ್ಷರೂ, ಕೇಂದ್ರ ಸಾಹಿತ್ಯ ಅಕೆಡೆಮಿಯ ಉಪಾಧ್ಯಕ್ಷರೂ ಆದ ವಿನಾಯಕರ ಅಭಿಪ್ರಾಯ :

ಈ ಕಥಾ ಸಂಕಲನದ ದರ್ಶನ ಕೌಟುಂಬಿಕ ಜೀವನ ಸಮಾಜದಲ್ಲಿ ಹಿಂದು–ಮುಂದುವರಿಯುವ ರೀತಿಯನ್ನು ಕುರಿತದ್ದು. ಒಂದು ಉತ್ತಮ ಹೃದಯವಂತಿಕೆಯೂ ತಿಳುವಳಿಕೆಯೂ ಇಲ್ಲಿ ರಸವತ್ತಾಗಿ ಮೂಡಿ ಬಂದಿವೆ.

‘ಅಜ್ಜಿಯ ಕತೆ’ ‘ಬೆಳದಿಂಗಳ ರಾತ್ರಿ’ ಬಹಳ ಚೆನ್ನಾಗಿವೆ. ಅಜ್ಜಿಯ ಕತೆಯಲ್ಲಿ ಜಾನಪದ ಕಲ್ಪಕತೆಯು ಅರಳಿ ನಿಂತಿದೆ. ಎರಡನೆಯದರ ಮುಕ್ತಾಯ ಸ್ವಲ್ಪ ಕೃತ್ರಿಮವೆನಿಸುತ್ತದೆ.

ಆಸೆ-ನಿರಾಸೆ, ಸಿನಿಮಾಕ್ಕೆ ಸೇರಿದಳು, ಮಹಾಸತಿ, ಸೇರಿದ ಮನೆ, ನೆರೆಹೊರೆ, ಬಂಧಮುಕ್ತೆ ಇವುಗಳಲ್ಲಿಯ ರುದ್ರತೆ – ವಿಡಂಬನೆಗಳು ಹೃದಯಸ್ಪರ್ಶಿಯಾಗಿವೆ. ಆಸೆ ನಿರಾಸೆ ಕಾರ್ಮಿಕರ ಜೀವನವನ್ನು ಕುರಿತು ಬರೆದದ್ದು. ಸಂಗ್ರಹಕ್ಕೆ ಇದರಿಂದ ವೈವಿಧ್ಯತೆ ಬರುತ್ತದೆ.

ಉಳಿದ ಕತೆಗಳಲ್ಲಿ ವಿನೋದಕ್ಕೆ ಇಲ್ಲವೆ ಹಾಸ್ಯಮಯ ವಿಡಂಬನೆಗೆ ಪ್ರಧಾನತೆಯಿದೆ. ‘ಕ್ಲಬ್‌ಡೆ’ದಲ್ಲಿ ಓ ಹೆನ್ರಿ ರೀತಿಯ ಅತಿಶಯೋಕ್ತಿಯಿದೆ.

ಬಂಧಮುಕ್ತೆ, ಸ್ಕೂಲ್‌ಡೇ, ಸೇರಿದ ಮನೆ ಇವು ಒಂದು ರೀತಿಯಿಂದ ಮುರುಟಿದಂತೆ ಸಂಕ್ಷಿಪ್ತವಾದರೆ ಕಾಲಹರಣ, ಕಲೆಗಿಂತ ನೀತಿಗೆ ಹೆಚ್ಚು ಪ್ರಾಧಾನ್ಯ ಕೊಟ್ಟಿದೆ. ಆದರೆ ತುಂಬಿದ ಕತೆಯಾಗಲಿ, ಕಿರಿಯದಿರಲಿ ಸಂಗ್ರಹದಲ್ಲೆಲ್ಲ ಒಂದು ವಿವೇಕ ಹಾಗೂ ಹೃದಯವಂತಿಕೆ ತುಂಬಿಕೊಂಡು ಜೀವಂತವಾದ ಕಲೆಯನ್ನು ಪ್ರಸ್ತಾಪಿಸಿವೆ.

* * *

ಸುಪ್ರಸಿದ್ಧ ವಿಮರ್ಶಕರಾದ ಶ್ರೀಯುತ ಕೆ. ನರಸಿಂಹಮೂರ್ತಿ ಅವರು ಕೃತಿಯ ಬಗ್ಗೆ ತಮ್ಮ ಆತ್ಮೀಯ ಕಾಗದ ಬರೆದರು.

I thoroughly enjoyed reading these stories. The writing is full of promise. The style is unpretentious and realistic and there is an undercurrent of poetic feeling. The poetic impression is due to the image of our traditional conception of a housewife, happy loving and happily loved, that hovers like a hardly realizable dream over these rather sad pages. The stories strive towards an approximation to this ideal and so suggest it again and again. Typical of this trend is the most romantic tale of the volume, the title story. The volume describes dangers from so many sides to the domestic felicity that its very precariousness adds enchantment to the ideal image of happy conjugal life. While the as-yet-inadequate technique calls for the description

'didactic' for such an array of 'object-lesson' situations, the writer's gracious personality casts over the entire volume a spell that is half poetic and that lends what life and reality the stories possess.

Stories that are almost succesful are ಅಜ್ಜಿ ಹೇಳಿದ ಕತೆ, ಅವರು ಕಟ್ಟಿದ ಮನೆ, ಸ್ಕೂಲ್‌ಡೇ and ನೆರೆ-ಹೊರೆ."

ಸಂಕಲನದಲ್ಲಿನ ಎಲ್ಲ ಕಥೆಗಳನ್ನೂ ಇತಿ-ಮಿತಿಗಳ ದೃಷ್ಟಿಯಿಂದ ವಿಮರ್ಶಿಸಿದ್ದಾರೆ.

"ಇದೇನು? and ಅಯ್ಯೋ ಪಾಪ ಅಂದರೆ! are anecdotal and obvious. ಸೇರಿದ ಮನೆ ends with the improbable departure of Kamala, leaving the usual letter. ಬೆಡಗಿನ ರಾಣಿ ರಾಗಿಣಿ presents a poor specimen of a seductive woman. ಕಾಲಹರಣ has a didactic close. ಸಿನಿಮಾಕ್ಕೆ ಸೇರಿದಳು ceases to interest-after the young man's character is introduced. The husband in ಮಾಡಿದ ಮನೆ is neither fish nor flesh........In ಬೆಳ್ಳಗಿರುವುದೆಲ್ಲಾ ಹಾಲಲ್ಲ the character of the President is not hypocritical enough. ಮಹಾಸತಿ and ಕಾಲಚಕ್ರ are only vague outlines of possible novels. ಪೇಪರಿನಲ್ಲಿ ಹೆಸರು is the last word in absurdity. ಬಂಧಮುಕ್ತೆ and ಆಸೆ-ನಿರಾಸೆ are too sentimental to be moving.

But let me not go on like this. I myself dislike being fastidious when there is such a feast of traditional, tender and homely sentiment before me. Let me repeat therefore that I have so thoroughly enjoyed reading these stories. This cannot be said of many collections of women's stories. So I congratuate your mother on her maiden collection and wish that she may produce in the near future another and a more inpressive one.

* * *

ಈ ಕೃತಿ ಪ್ರಕಟವಾದದ್ದು 1957ರಲ್ಲಿ. ಇದಾದ ಹನ್ನೊಂದು ವರುಷಗಳ ಮೇಲೆ ನಮ್ಮ ತಾಯಿಯ ಇನ್ನೊಂದು ಕಥಾ ಸಂಕಲನ **ಗುಲಾಬಿ ಹೂ** ಕಾವ್ಯಾಲಯ ದಿಂದ ಪ್ರಕಟವಾಯಿತು. ಈ ಸಂಕಲನದಲ್ಲಿನ ಕತೆಗಳಲ್ಲಿ ಅವರು ಆರಿಸಿಕೊಂಡ ವಸ್ತು, ಶೈಲಿ, ನಿರೂಪಣೆ ಹೆಚ್ಚು ತೀವ್ರತೆಯನ್ನು ಪಡೆದವು. ಈ ಸಂಕಲನವೂ ಹಿಂದಿನಂತೆಯೇ ವಿಮರ್ಶಕರ ಮೆಚ್ಚುಗೆ ಪಡೆಯಿತು.

ಈ ಕೃತಿಗೆ ಮುನ್ನುಡಿ ಬರೆಯುತ್ತಾ ಡಾ॥ ವಿ. ಕೃ. ಗೋಕಾಕರು "ಸುತ್ತಣ ಪ್ರಪಂಚವನ್ನು ಅನಾಸಕ್ತ ಆದರೆ ಸಾತ್ವಿಕ ಹಾಗೂ ಸತ್ವಯುತ ದೃಷ್ಟಿಯಿಂದ ನೋಡುವ ಪ್ರಜ್ಞೆ ಲೇಖಕಿಯರಿಗೆ ಇದೆ. ಅದನ್ನು ಉಚಿತವಾಗಿ ಸಾಹಿತ್ಯಕ್ಕೆ ತಿರುಗಿಸುವ ಕಲೆಯೂ ಅವರಿಗೆ ಸಾಧಿಸಿದೆ. **ಯಾರ ಮಾತು ನಡೀತು, ಸಮಾಧಿ** ಹಾಗೂ **ಬೇಬಿ ಹುಟ್ಟಿದ ಹಬ್ಬ** ಇಲ್ಲಿಯ ಉತ್ತಮ ಕಥೆಗಳು. ಇವುಗಳಲ್ಲಿ ಅನುಭಾವ ಕಲಾವಂತಿಕೆಗಳು ಸಂಜೋಡಿಯಾಗಿ ಹೊಂದಿಕೊಂಡಿವೆ. **ಸಮಾಧಿ**ಯಲ್ಲಿಯ ವಿಸ್ಮಯ ಕಾರಕ ಘಟನೆಯಿಂದಾಗಿ ಉದ್ದೀಪಿತವಾದ ಅದ್ಭುತ, **ಯಾರ ಮಾತು ನಡೀತು** ಎಂಬಲ್ಲಿ ದಂಪತಿಗಳ ನಡುವಿನ ನ್ಯಾಯದ ಬಗ್ಗೆ ದೈವ ಕೊಟ್ಟ ತೀರ್ಪು, ಬೇಬಿಯಲ್ಲಿ ಆವಿದ್ಧ ಪ್ರಯೋಗದಿಂದ ಸುಕುಮಾರದೆಡೆಗೆ ಕತೆಯನ್ನು ತಿರುಗಿಸುವಲ್ಲಿಯ ಕಲಾವಂತಿಕೆ, ಇವೆಲ್ಲ ಮೆಚ್ಚತಕ್ಕಂತಹವು. ಇವುಗಳನ್ನು ಪೂರ್ಣ ಕೃತಿಗಳೆಂದು ಕರೆಯಬಹುದು" ಎಂದಿದ್ದಾರೆ.

'ಗುಲಾಬಿ ಹೂ' ಸಂಕಲದಲ್ಲಿನ ಕಥೆಗಳು ಎಲ್ಲ ದೃಷ್ಟಿಯಿಂದಲೂ ಮೊದಲನೆಯ ಕಥಾ ಸಂಕಲನಕ್ಕಿಂತ ಹೆಚ್ಚು ಸಂಕೀರ್ಣವಾಗಿವೆ.

ಸಂಸಾರ ನಿರ್ವಹಣೆ, ಮಕ್ಕಳ ಪೋಷಣೆ ಇವೇ ಹೆಚ್ಚಾಗಿ ಬರೆಯುವುದಕ್ಕೆ ನಮ್ಮ ತಾಯಿಗೆ ಸಿಗುತ್ತಿದ್ದ ವೇಳೆ ಅತ್ಯಲ್ಪ. ಆದರೆ ಆ ಅಲ್ಪಕಾಲದಲ್ಲೇ ಅವರು ತಮ್ಮ ಅನಿಸಿಕೆಗಳನ್ನು ಕತೆ, ಹರಟೆ, ಲಘು ಬರಹ. ಪ್ರಹಸನ, ಬಿಡಿ ಕವನಗಳು ಈ ಪ್ರಕಾರಗಳಲ್ಲಿ ಮೂಡಿಸಿದ್ದಾರೆ.

ಈ ಬರಹದಲ್ಲಿ ಋಜುತ್ವವಿದೆ. ಸಾತ್ವಿಕ ಶಕ್ತಿಯಿದೆ. ಸಾಂಸಾರಿಕ ಜೀವನದ ಅರಿವಿನ ಜೊತೆಗೆ ಸಮಕಾಲೀನ ಪ್ರಜ್ಞೆಯೂ ಇದೆ. ಅಂತೆಯೇ ನಮ್ಮ ತಾಯಿಯ ಬರಹಕ್ಕೆ ಮಹಿಳೆಯರು ರಚಿಸಿರುವ ಕೃತಿಗಳಲ್ಲಿ ಮಾತ್ರವೇ ಅಲ್ಲದೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಂದು ಗಣನೀಯವಾದ ಸ್ಥಾನವಿದೆ.

ಆದರ್ಶ ದಂಪತಿಗಳು . . . .

ಜಯಲಕ್ಷ್ಮಿ ಶ್ರೀನಿವಾಸ್

1937 ನೇ ಇಸವಿ. ಆಗ ಮೈಸೂರಿನ ಲಕ್ಷ್ಮೀಪುರದ ಬಡಾವಣೆಯಲ್ಲಿ ನಮ್ಮ ಮನೆ. ನನ್ನ ಪೂಜ್ಯ ಯಜಮಾನರು ಆಗ ಮೈಸೂರು ನಗರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದರು. ಆಗ ಶ್ರೀ ನರಸಿಂಹಮೂರ್ತಿಯವರು ಆದೇ ತಾನೇ ಮೈಸೂರಿನ ಸಿವಿಲ್ ಸರ್ವೀಸ್ (M.C.S.) ಪರೀಕ್ಷೆಯಲ್ಲಿ ಪ್ರಥಮಸ್ಥಾನದಲ್ಲಿ ತೇರ್ಗಡೆ ಹೊಂದಿದರೆಂದು ಹಿರಿಯರು, ಗೆಳೆಯರು, ನೆಂಟರು ಎಲ್ಲರೂ ಆನಂದದಲ್ಲಿ ಮಿಂದೆವು. ಕೆಲವೇ ದಿನಗಳಲ್ಲಿ ನನ್ನ ಪೂಜ್ಯ ತಂದೆಯವರ ಮಿತ್ರರ ಪುತ್ರಿಯೂ ನನ್ನ ನೆಚ್ಚಿನ ತಂಗಿ ಸೌ॥ ಶಾಂತನ ಪ್ರಿಯಗೆಳತಿಯೂ ಆದ ಚೆಲುವೆ, ಸುಗುಣೆ, ಸುಕೋಮಲೆಯಾದ ಸೌಭಾಗ್ಯವತಿ ರಾಜೇಶ್ವರಿಯನ್ನು ತಂದುಕೊಂಡು ಯುವಕ ಸಿ. ನರಸಿಂಹಮೂರ್ತಿಯವರ ವಿವಾಹವು ನಿಷ್ಕರ್ಷೆಯಾಯಿತು.

ಬೆಂಗಳೂರಿನಲ್ಲಿ ಅವರಿಬ್ಬರ ಮದುವೆ ಜರುಗಿತೆನ್ನಿ. ಆ ಬಳಿಕ, ಮೈಸೂರಿನಲ್ಲಿ ನಮ್ಮ ಮನೆಯ ಪಕ್ಕದ ಮನೆಯಲ್ಲೇ ಆ ನೂತನ ದಂಪತಿಗಳಿಗೆ ಆರತಿ–ಅಕ್ಷತೆ ನಡೆಯಿತು. ಅದಕ್ಕೆ ನನ್ನ ಪತಿವರ್ಯರೂ. ನಾನೂ, ನಮ್ಮ ಹೆಣ್ಣು ಮಕ್ಕಳು ಲೀಲಾ ಮತ್ತು ಮಾಲತಿಯ ಜೊತೆಗೆ ಹೋಗಿ ಹಿಗ್ಗಿ ಮೆರೆದುದು ಈಗಲೂ ನನ್ನ ಕಣ್ಣಿಗೆ ಕಟ್ಟಿದಂತೆ ಇದೆ. ಅಬ್ಬಾ ! ಎಂತಹ ಅಪೂರ್ವ ಜೋಡಿ ! ಆ ಬಳಿಕ ನವದಂಪತಿಗಳ ಅನುರಾಗದ ಅನ್ಯೋನ್ಯ ದಾಂಪತ್ಯ ಬಾಳ್ವೆಯನ್ನು ನಾನು ಕಂಡು ತಲೆದೂಗಿರುವೆನು. ಅವರುಗಳ ಭವಿಷ್ಯತ್ ಬಾಳಿನ ಚಿಹ್ನೆಯನ್ನು ಅಂದು (ಅವರುಗಳ ಆರತಿ–ಅಕ್ಷತೆಯ ಸಮಾರಂಭದ ಸಮಯದಲ್ಲಿ) ಆ ದಂಪತಿಗಳ ಮುಖಗಳ ವರ್ಚಸ್ಸಿನಲ್ಲೇ 'ಅಂಗೈಯ ನೆಲ್ಲೀಕಾಯಿ 'ಯಂತೆ ಕಂಡೆನೆನ್ನಿ. ಆ ಬಳಿಕ, ಶ್ರೀ ಸಿ. ನರಸಿಂಹಮೂರ್ತಿಯವರು ಉನ್ನತ ಉದ್ಯೋಗಗಳನ್ನು ವಹಿಸಿ, ದಕ್ಷತೆಯಿಂದ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಪ್ರಾಯದಲ್ಲೂ, ಔದ್ಯೋಗಿಕ ಕ್ಷೇತ್ರದಲ್ಲೂ ಅವರಿಗೆ ಹಿರಿಯರಾದ ನನ್ನ ಪೂಜ್ಯ ಪತಿವರ್ಯರು ಆಗಿಂದಾಗ್ಗೆ ನನ್ನಲ್ಲಿ ಹೊಗಳಿದಾಗ ಅವರ ಜಾಣ್ಮೆಯನ್ನೂ, ಶೀಲ ಸ್ವಭಾವವನ್ನೂ ಕುರಿತಾಗಿ ನಾವಿಬ್ಬರೂ ಮೆಚ್ಚಿಗೆ ಸೂಸುತ್ತಿದ್ದೆವು.

ರಾಜೇಶ್ವರಿಯೂ ಪತಿಗೆ ತಕ್ಕ ಪತ್ನಿ. ಸುಶೀಲೆ, ಸಾಧ್ವೀಮಣಿ. ಬಡಬಗ್ಗರಲ್ಲೂ–ವಯೋಧಿಕರಲ್ಲೂ, ದಯೆತೋರಿ, ಪ್ರಿಯವಾಗಿ ನೆರವು ನೀಡುತ್ತಿದ್ದಳು. ಸ್ನೇಹ ಪರಳೂ ಹೌದು. ನನ್ನ ತಂಗಿ ಶಾಂತನಿಗಂತೂ ಆಕೆಯೆಂದರೆ ಪ್ರಾಣ. ಶಾಂತಳ ಪತಿವರ್ಯರು ಭಾರತ ಸರ್ಕಾರದ ವಿದೇಶ ವಿಭಾಗದಲ್ಲಿ (Indian Foreign Servcie) ಉದ್ಯೋಗಸ್ಥರಾದುದರಿಂದ ಶಾಂತ ಬಹುವಾಗಿ ವಿದೇಶಗಳಲ್ಲೇ ಸಂಚಾರ ಮಾಡುತ್ತಿದ್ದಳು, ಮೂರು ಅಥವಾ ನಾಲ್ಕು ವರ್ಷಗಳಿಗೊಮ್ಮೆ ಅವಳು ಬೆಂಗಳೂರಿಗೆ ಬಂದಳೆಂದರೆ, ತನಗೆ ಸಮಯ ಸಿಕ್ಕಿದಾಗಲೆಲ್ಲಾ ರಾಜೇಶ್ವರಿಯನ್ನು ನೋಡಿಬರಲು ಹೋಗಿಬಿಡುವಳು. ಅವಳು ಇಲ್ಲಿಗೆ ಬಂದ ಆ ಅಲ್ಪ ಕಾಲದಲ್ಲಿ, ಅಕ್ಕ–ತಂಗಿಯರಾದ ನಾವುಗಳು ಅವಳನ್ನು ಕಾಣಲು ನಮ್ಮ ತೌರಿಗೆ ಹೋದರೆ ಶಾಂತ ಸಿಗುತ್ತಿರ ಲಿಲ್ಲ! ''ನಮ್ಮಮ್ಮ ಶಾಂತನೇ ? ರಾಜೇಶ್ವರಿಯ ಮನೆಗೆ ಹೋಗಿದ್ದಾಳೆ. ನಿಮಗೆಲ್ಲಿ ಸಿಗುವಳು" ಎಂದು ಹಾಸ್ಯವಾಗಿ ನುಡಿಯುತ್ತಿದ್ದರು! ಈ ಒಂದು ವಾಕ್ಯದಲ್ಲೇ ರಾಜೇಶ್ವರೀ ನರಸಿಂಹಮೂರ್ತಿಯ ಹುಟ್ಟುಗುಣದ ರಹಸ್ಯವನ್ನು ವಾಚಕರು ತಿಳಿಯ ಬಹುದು. ಆಕೆಯೊಬ್ಬ ನುರಿತ ವಯಲಿನ್ ವಾದಕಿ. ನನ್ನ ತಂಗಿ ವೈಣಿಕ ಪ್ರವೀಣೆ. ಅವರಿಬ್ಬರೂ ಸಹಪಾಠಿಗಳು. ಅವರಿಬ್ಬರ ವಿದ್ಯಾಭ್ಯಾಸದ ಕಾಲದಲ್ಲಿ, ಅವರುಗಳ ಪ್ರೌಢ ವಿದ್ಯಾಶಾಲೆಯ ವಿಶೇಷ ಉತ್ಸವಗಳಲ್ಲಿ ರಾಜೇಶ್ವರಿಯ ವಯಲಿನ್ ಮತ್ತು ಶಾಂತನ ವೀಣಾವಾದನವಿಲ್ಲದೆ 'ಆರ್ಕೆಸ್ಟ್ರಾ' (Orchestra) ಶೋಭಿಸುತ್ತಿರಲಿಲ್ಲ. ಅಷ್ಟು ಮಾತ್ರವಲ್ಲದೆ ಆಕೆ ನುರಿತ ಲೇಖಿಕಿಯಾಗಿಯೂ ಇದ್ದಳು. ಸ್ವಂತ ಕಲ್ಪನೆಯ ಕತೆಗಳನ್ನೂ ಬರೆಯುತ್ತಿದ್ದಳು. ತೆಲುಗು ಕನ್ನಡ ಎರಡೂ ಭಾಷೆಗಳಲ್ಲೂ ಬರೆದಿದ್ದಾಳೆ.

ಆ ಕುಟುಂಬದವರೆಲ್ಲರೂ ಆಯುರಾರೋಗ್ಯದಿಂದ ಬಹುಕಾಲ ಬಾಳಿ ಬದುಕ ಲೆಂದು ಭಗವಂತನನ್ನು ಬೇಡಿಕೊಳ್ಳುತ್ತೇನೆ.

ಶ್ರೀಮತಿ ಚಿ. ನ. ಮಂಗಳಾ ತನ್ನ ಮಾತಾಪಿತರ ನೆನೆಪಿನ ಚಿಹ್ನೆಯಾಗಿ 'ಕಲಾ ಭಾರತಿ'ಯೆಂಬ ಸಾಂಸ್ಕೃತಿಕ ಸಂಸ್ಥೆಯನ್ನು ಜನಸಾಮಾನ್ಯರ ಸಂತೋಷಕ್ಕಾಗಿ ನಡೆಸಿ ಕೊಂಡು ಬರುತ್ತಿದ್ದಾಳೆ. ನಿಜಕ್ಕೂ ಇದೊಂದು ಹೆಮ್ಮೆಯ ವಿಷಯ. ನಮ್ಮ ತಾಯ್ನಾಡ ಸಂಸ್ಕೃತಿಯು ದಿನೇ ದಿನೇ ಪ್ರವರ್ಧನಗೊಂಡು, ನಾಡು ಸೊಬಗಿನಿಂದ ಮೆರೆಯಲು ಇಂತಹ ಸಾಂಸ್ಕೃತಿಕ ಪೀಠಗಳು ಅತ್ಯವಶ್ಯಕ. ಈ ಕಲಾಪೀಠದ ಹತ್ತನೆಯ ವೈಭವದ ಉತ್ಸವಕ್ಕೆ ನನ್ನ ಶುಭಾಶಯಗಳು.

ಪ್ರತಿಭಾವಂತ ದಂಪತಿಗಳು . . . .

ಟಿ. ಸುನಂದಮ್ಮ

ಮೈಸೂರು ಸಿವಿಲ್ ಸರ್ವೀಸಿನ ಹಿರಿಯ ಅಧಿಕಾರಿಯಾಗಿದ್ದ ನಮ್ಮ ತಂದೆಯವರಿಗೆ ಪ್ರತಿವರ್ಷ ಉತ್ತೀರ್ಣರಾದ ಅಭ್ಯರ್ಥಿಗಳ ಬಗೆಗೆ ಅಪಾರ ಅಭಿಮಾನ. ಆ ದಿನ ಕಛೇರಿಯಿಂದ ಬಂದವರು, "ಈ ಬಾರಿ ಎಂ.ಸಿ.ಎಸ್. ಮಾಡಿರುವವರಲ್ಲಿ ಸಿ. ನರಸಿಂಹಮೂರ್ತಿ ಎನ್ನುವ ಹುಡುಗ ಮೈಸೂರಿನವನು" ಎಂದು ಹೇಳಿದರು. ನಮ್ಮ ತಾಯಿಯವರು (ಮೈಸೂರಿನಲ್ಲಿ ಹುಟ್ಟಿ ಬೆಳೆದವರು) ಕೂಡಲೇ ಅವರದೆರಡು ಮಾತು ಸೇರಿಸಿದರು. "ಆ ಹುಡುಗನಿಗೆ ಕೊಟ್ಟಿರುವುದು ಡಾಕ್ಟರ್ ರಾಮಕೃಷ್ಣ ರಾಯರ ಮಗಳನ್ನು : ಅಣ್ಣಯ್ಯನಿಗೆ (ನಮ್ಮ ತಾತನವರು, ಅಂದರೆ ನಮ್ಮ ತಾಯಿಯವರ ತಂದೆ) ತುಂಬ ಬೇಕಾದವರು ರಾಮಕೃಷ್ಣರಾಯರು."

ಅನಂತರ ಕೆಲವೇ ತಿಂಗಳಲ್ಲಿ ನಡೆದ ಸರಕಾರೀ ಸಮಾರಂಭವೊಂದರಲ್ಲಿ ಶ್ರೀ ನರಸಿಂಹಮೂರ್ತಿಯವರನ್ನು ನಾನು ಮೊದಲಬಾರಿಗೆ ನೋಡಿದ್ದು ; ಸ್ಫುರದ್ರೂಪಿ ಸುಂದರ ಯುವಕ ; 'ಮನ್ಮಥ' ಎಂದರೂ ಸೂಕ್ತವೆನಿಸುವ ವ್ಯಕ್ತಿತ್ವ !

ನಾಲ್ಕೈದು ವರ್ಷಗಳಮೇಲೆ ಸಜ್ಜನರಾಯರ ಕಲ್ಯಾಣ ಮಂಟಪದಲ್ಲಿ ನನ್ನ ಮೈದುನನ ಮದುವೆ ನಡೆಯಿತು ; ಸಂಜೆಯ ಆರತಕ್ಷತೆಗೆ ಬಂದಿದ್ದ ಎಳೆ ಮುತ್ತೈದೆಯನ್ನು ನಮ್ಮ ಬೀಗಿತಿ ಪರಿಚಯಿಸಿದರು—"ಇವರು ಮಿಸೆಸ್. ಸಿ. ನರಸಿಂಹಮೂರ್ತಿ".

ನನಗೆ ಶ್ರೀಮತಿ ರಾಜೇಶ್ವರೀ ನರಸಿಂಹಮೂರ್ತಿಯವರ ನಿಕಟ ಸಂಪರ್ಕವಾದದ್ದು ಅವರು ಬಸವನಗುಡಿ ಸ್ತ್ರೀ ಸಂಘದ ಸದಸ್ಯೆಯಾದಮೇಲೆ ; ನಗೆಮೊಗದ ಸರಳ ಉಡಿಗೆ ತೊಡಿಗೆಯ, ನಿರಾಡಂಬರ ಗೃಹಿಣಿ. ಶ್ರೀಮಂತ ತಂದೆ ತಾಯಿಯರ ಏಕಮಾತ್ರ ಪುತ್ರಿ, ಸಿವಿಲ್ ಸರ್ವಿಸ್ ಉನ್ನತಾಧಿಕಾರಿಯ ಧರ್ಮಪತ್ನಿ ; ಆದರೆ ಒಂದಿಷ್ಟೂ ಗರ್ವವಿಲ್ಲ ! ಬಹುಬೇಗ ಆತ್ಮೀಯತೆಯನ್ನು ಬೆಳೆಸಿಕೊಳ್ಳಬಲ್ಲ ಘನ ವ್ಯಕ್ತಿತ್ವ ಆಕೆಯದು.

ಬಸವನಗುಡಿ ಸ್ತ್ರೀ ಸಂಘದ ಚಟುವಟಿಕೆಗಳಲ್ಲಿ ನಾನು ಸಕ್ರಿಯ ಪಾತ್ರವಹಿಸುತ್ತಿದ್ದೆ. ಮಕ್ಕಳಿಗಾಗಿ 'ಬಾಲಸಂಘ' ಸ್ಥಾಪಿಸಿ, ಅವರಿಗೆ ತರಪೇತಿ ಕೊಟ್ಟು ಆಕಾಶ

ವಾಣಿಯಲ್ಲಿ ಕಾರ್ಯಕ್ರಮಗಳನ್ನು ಪ್ರಸಾರಮಾಡುವುದು, ಸಂಘದ ರಂಗಸ್ಥಳದ ಮೇಲೆ ಅವರಿಂದ ವಿವಿಧ ವಿನೋದಾವಳಿ ನಡೆಸುವುದು, ಇತ್ಯಾದಿ. ಬೆಣ್ಣೆ ಬೊಂಬೆಗಳಂತಿದ್ದ ಚಿ. ಚಂದ್ರು ಹಾಗೂ ಚಿ. ವಾಣಿಗೆ 'ಬಾಲಸಂಘ'ದಲ್ಲಿ ಪಾತ್ರ ; ಸಕಾಲಕ್ಕೆ ಮಕ್ಕಳನ್ನು ಕರೆತರುತ್ತಿದ್ದವರು ತಾಯಿ ಶ್ರೀಮತಿ ರಾಜೇಶ್ವರಿ.

ನಗೆನಾಟಕಗಳನ್ನು ಬರೆದು ಸಂಘದ ವಾರ್ಷಿಕೋತ್ಸವದಲ್ಲಿ ಸದಸ್ಯೆಯರಿಂದ ಪ್ರದರ್ಶಿಸುವ ಪರಿಪಾಠ ಹದಿನೈದು ವರ್ಷಗಳ ಕಾಲ ನನ್ನದಾಗಿತ್ತು. "ಮಾತು ಮನೆ ಕೆಡಿಸಿತು" ಕಿರುನಾಟಕದಲ್ಲಿ ಶ್ರೀಮತಿ ರಾಜೇಶ್ವರಿಯದು ಮುಖ್ಯ ಪಾತ್ರ. ಮಿಕ್ಕ ಪಾತ್ರಧಾರಿಗಳು 'ಕಪ್ಪೆ ತಕ್ಕಡಿಗೆ ಹಾಕಿದಂತೆ' ರಿಹರ್ಸಲ್‌ಗೆ ಬಂದರೆ. ಹತ್ತು ನಿಮಿಷ ಮೊದಲಾಗಿ ಬರುತ್ತಿದ್ದರು, ಶ್ರೀಮತಿ ರಾಜೇಶ್ವರಿ. ಆಗ ಅವರು ವಾಸಿಸುತ್ತಿದ್ದುದು ಬಸವನಗುಡಿಯಲ್ಲಿದ್ದ ನಮ್ಮ ತಾತನವರ ಮನೆಯಲ್ಲಿ. (ಈಗಿನ 'ದ್ವಾರಕಾನಾಥ ಭವನ').

ನಾಟಕದ ಅಭ್ಯಾಸದ ಒಂದು ಘಟ್ಟದಲ್ಲಿ ಶ್ರೀಮತಿ ರಾಜೇಶ್ವರಿಯವರು ತುಂಬ ನಗುತ್ತಿದ್ದರು ; ಮೂರು ನಾಲ್ಕು ದಿನಗಳ ನಂತರ ಕುತೂಹಲದಿಂದ ಕಾರಣ ಕೇಳಿದೆ. ಅಲ್ಲಿ ಬರುವ ಒಂದು ಪದದ ದ್ವಂದ್ವಾರ್ಥವನ್ನು ಅವರು ತೋರಿಸಿಕೊಟ್ಟಾಗ ಅವರ ಚುರುಕು ಮಾತಿಗೆ ಮೆಚ್ಚಿದೆ. (ಅಪಾರ್ಥಕ್ಕೆ ಎಡೆ ಕೊಡಬಹುದಾದ ಆ ಪದವನ್ನು ಬದಲಾಯಿಸಿದೆನೆಂದು ಹೇಳಬೇಕಾಗಿಲ್ಲ !)

ಲಾಲ್‌ಬಾಗ್‌ನ ಚಿನ್ನದ ಹಬ್ಬದ ಭವನದಲ್ಲಿ ಎರಡನೆಯ ಮಗಳು ಕುಮಾರಿ ಲಕ್ಷ್ಮಿಯ ಕಲ್ಯಾಣದ ಆರತಕ್ಷತೆ ಏರ್ಪಡಿಸಿ, ಬಂಧುಮಿತ್ರರನ್ನು ಆದರದಿಂದ ಸ್ವಾಗತಿಸಿದ ಶ್ರೀ ಸಿ. ನರಸಿಂಹಮೂರ್ತಿಯವರನ್ನು ಒಂದು ವಾರದಲ್ಲೇ ಮೃತ್ಯುದೇವತೆ ಸ್ವಾಗತಿಸುವಳೆಂದು ಯಾರ ಕನಸು ಮನಸಿನಲ್ಲೂ ಇರಲಿಲ್ಲ.

ಪತಿವಿಯೋಗ ಶ್ರೀಮತಿ ರಾಜೇಶ್ವರಿಗೆ ಅದೆಂಥ ಆಘಾತವಾಯಿತೋ ! ಕೆಲವೇ ವರ್ಷಗಳಲ್ಲಿ ಆತನನ್ನು ಸೇರಿಕೊಂಡುಬಿಟ್ಟರು !

ಶ್ರೀ ನರಸಿಂಹಮೂರ್ತಿಯವರ ಆಡಳಿತ ದಕ್ಷತೆ ಅಧಿಕಾರವರ್ಗದವರಿಗೆಲ್ಲಾ ವೇದ್ಯವಾಗಿತ್ತು. ಶ್ರೀಮತಿ ರಾಜೇಶ್ವರಿ ಆದರ್ಶ ಗೃಹಿಣಿ ಹಾಗೂ ಸಾಹಿತಿ : ಅವರು ಬರೆದಿರುವ ಸಣ್ಣಕತೆಗಳು ಬಾಳಿನ ಆಳ ಅನುಭವದ ಪ್ರತಿಬಿಂಬಗಳು. ಸಂಸಾರ ನಿರ್ವಹಣೆಯ ಭಾರ ಕಡಿಮೆಯಾಗುವವರೆಗೆ ಅವರ ಆಯುಷ್ಯ ಇದ್ದಿದ್ದರೆ, ಇನ್ನೂ ಹೆಚ್ಚಿನ ಸಾಹಿತ್ಯ ಸೇವೆಯನ್ನು ಅವರಿಂದ ನಿಜಕ್ಕೂ ನಿರೀಕ್ಷಿಸಬಹುದಾಗಿತ್ತು !

ಈ ಪ್ರತಿಭಾವಂತ ದಂಪತಿಗಳ ನೆನಪಾಗಿ ಹಿರಿಯಮಗಳು ಶ್ರೀಮತಿ ಚಿ. ನ. ಮಂಗಳಾ ಸ್ಥಾಪಿಸಿರುವ "ಕಲಾಭಾರತಿ" ಸೂಕ್ತವಾದ ಕಾಣಿಕೆ. ○

ಹಾಡು ಹಕ್ಕಿಗೆ ಹಾಡುವುದೇ ಧರ್ಮ . . . .

ಶ್ಯಾಮಲಾ ಜಿ. ಭಾವೆ

ಕನ್ನಡದ ಹೆಸರಾಂತ ಕವಿಯೊಬ್ಬರು ಗೀತೆಯೊಂದರಲ್ಲಿ ಹಾಡುಹಕ್ಕಿಯ ಅನಿಸಿಕೆಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ—

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ, ಧರ್ಮ ನನಗೆ
ಆದರೆ
ಕೇಳುವವರಿಹರೆಂದು ನಾ ಬಲ್ಲೆ ಅದರಿಂದ
ಹಾಡುವೆನು ಮೈದುಂಬಿ ಎಂದಿನಂತೆ.

ತಂದೆ ತಾಯಿ ಇಬ್ಬರೂ ಸಂಗೀತದ ಅಪ್ರತಿಮ ಸಾಧಕರು. ಅವರಿಗೆ ಮಗಳಾದ ನಾನು ಸಹಜವಾಗಿಯೇ ಸಂಗೀತದ ದೀಕ್ಷೆ ಪಡೆದೆ. ನಾನು ಕಲಿತ ಮೊದಲ ಅಕ್ಷರಗಳು ಸರಿಗಮ ಪದನಿಸ. ಮೊದಲ ಮೊದಲ ಮಾತುಗಳು ಬಗೆ ಬಗೆಯ ಸುಂದರ ಸ್ವರ ಸಂಚಾರಗಳು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಸಂಗೀತ ಸಾಮ್ರಾಜ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸಲು ನನಗೆ ದೈವಯೋಗದಿಂದ ಸಾಧ್ಯವಾಗಿದೆ. ಗದ್ದಲದ ಗಡಿಬಿಡಿಯ, ಸದ್ದಿನ, ಸಡಗರದ, ಸಂಭ್ರಮ ಉಲ್ಲಾಸದ ಮದುವೆಯ ಮನೆಯ ಆರತಕ್ಷತೆಯಲ್ಲಿ ನಾನು ಹಾಡುತ್ತಿರಬಹುದು ; ಸಂಗೀತಜ್ಞರ, ಕಲಾರಸಿಕರ, ಪಂಡಿತರ ವಿದ್ವತ್ ಸಭೆಯಲ್ಲಿ ನನ್ನ ಗಾಯನ ನಡೆದಿರಬಹುದು ; ಮನೆಯ ಅಂಗಳದಲ್ಲಿ ಅಭಿಮಾನೀ ಸ್ನೇಹಿತರೊಂದಿಗೆ ಮೆಚ್ಚಿದ ರಾಗ-ರಾಗಿಣಿಯರ ಪರಿಚಯ ನಡೆದಿರಬಹುದು—ಎಲ್ಲಾ ಸಂದರ್ಭಗಳಲ್ಲೂ ನಿರಾತಂಕವಾಗಿ, ಶುಭ್ರವಾಗಿ, ಅಂತರ ಗಂಗೆಯಾಗಿ ಹರಿವ ಸಂಗೀತದ ಸಲಿಲ ಝುರಿ ನನ್ನ ಪ್ರಪಂಚವನ್ನು ಸುಂದರವಾಗಿಸಿದೆ.

ನಿಜ, ಎಲ್ಲ ವೃತ್ತಿಯಲ್ಲಿರುವಂತೆ ಈ ಸಂಗೀತಗಾರ್ತಿಯ ದಿನದಿನದ ಜೀವನದಲ್ಲಿ ಪ್ರಾಪಂಚಿಕ ವ್ಯವಹಾರಗಳ ಭಾವನಾಹೀನ ಎಳೆಯೊಂದು ಇದ್ದೇ ಇರುತ್ತವೆ. ಆದರೆ ಕಲಾಭಿಮಾನಿಗಳ ಎದುರು ಸಂಗೀತ ಶಾರದೆಯನ್ನು ಆರಾಧಿಸಿ, ಆವಾಹಿಸಿ ಕುಳಿತಾಗ ಜಗತ್ತಿನ ಸಮಸ್ತ ಕೋಟಲೆಗಳೂ ಹೇಳಹೆಸರಿಲ್ಲದಂತೆ ಮಾಯವಾಗಿ ಬಿಡುತ್ತದೆ. ಶ್ರೋತೃಗಳೂ ಅಷ್ಟೇ. ಸಂಗೀತದ ಸಮ್ಮೋಹಕ ಶಕ್ತಿಗೆ ತಲೆದೂಗುತ್ತಾರೆ. ನಿಸ್ಸಾರ ಬದುಕಿನಿಂದ ಹೊರಬಂದು ದೈವಿಕ ವಿಶ್ವದ ಪ್ರಜೆಗಳಾಗುತ್ತಾರೆ. ಅವರನ್ನು

ಅಲ್ಲಿಗೆ ಕರೆದೊಯ್ಯುತ್ತಿರುವ ಮಾರ್ಗದರ್ಶಿ ನಾನು ಎಂದುಕೊಂಡಾಗ, ರಸಾಸ್ವಾದ ಮಾಡುತ್ತಿರುವ ನೂರಾರು, ಸಾವಿರಾರು ಕಲಾರಸಿಕರಿಗೆ ನಾನು ನಡೆಸುತ್ತಿರುವ ಕಿಂಚಿತ್ ಸೇವೆಯು ಅರಿವಾದಾಗ, ಸಂಗೀತಗಾರ್ತಿ ಎಂದು ಹೇಳಿಕೊಳ್ಳಲು ಅಭಿಮಾನವೆನಿಸುತ್ತದೆ, ಹೆಮ್ಮೆಯೆನಿಸುತ್ತದೆ.

ಉತ್ತಮ ಸಂಗೀತಗಾರ್ತಿ ಎನಿಸಿಕೊಳ್ಳಲು ಒಂದಿಷ್ಟು ಪರಿಶ್ರಮ, ಅಭ್ಯಾಸ, ಅಗತ್ಯ. ಪ್ರತಿಭೆ ಒಂದು ಮುಖ್ಯವಾದ ಅಂಶ ನಿಜ. ಆದರೆ ಪ್ರತಿಭಾವಂತರೆಲ್ಲ ಅಪ್ರತಿಮ ಕಲಾವಿದರಾಗಲು ಸಾಧ್ಯವಾಗಿಲ್ಲ. ಪ್ರತಿಭೆಗೆ ಅನುರೂಪವಾದ ಅಭ್ಯಾಸ ಬೇಕು. ತಾನು ಆರಿಸಿಕೊಳ್ಳುವ ಗುರುವಿನ ಆಯ್ಕೆ ಕೂಡ ಅತ್ಯಂತ ಮುಖ್ಯವಾದದ್ದೇ. ಈ ದಿಶೆಯಲ್ಲಿ ಅದೃಷ್ಟದ ಆಟ, ಮಾರ್ಗದರ್ಶನ ನೀಡುವ ಹಿರಿಯರ ನೆರವು ಮಹತ್ವದ ಪಾತ್ರವನ್ನು ವಹಿಸುತ್ತವೆ. ಗುರುವಿನ ಹಿನ್ನಲೆ, ಆತನ ಶೈಲಿ ಇವುಗಳನ್ನ ಪರೀಕ್ಷಿಸಲು ವಿದ್ಯೆಯನ್ನರಸಿ ಬರುವ ಶಿಷ್ಯನಿಗೆ ಅತ್ಯಂತ ದುಸ್ತರ. ಆದರೂ ಈ ದಿನಗಳಲ್ಲಿ ಸಂಗೀತ ವಿದ್ಯಾರ್ಥಿಗೆ ಇದೊಂದು ಅಸಾಧ್ಯದ ಕೆಲಸವೇನಲ್ಲ. ತನ್ನ ಮನೋಧರ್ಮದ ಪರಿಚಯವಂತೂ ತನಗೆ ಇದ್ದೇ ಇರುತ್ತದೆ. ಅವರ ಜೊತೆಗೆ ಮೇಳೈಸುವ ಮಾರ್ಗ ದರ್ಶನ ಇಂತೆಡೆ ದೊರಕುತ್ತದೆಂಬ ಭಾವನೆ ಕೆಲವೊಮ್ಮೆ ನಿರ್ದಿಷ್ಟವಾಗಿ ತೋರುತ್ತದೆ. ಒಟ್ಟಿನಲ್ಲಿ ಆರಂಭದ ದಿನಗಳಲ್ಲಿ ವಿದ್ಯಾರ್ಥಿ, ಅದರಲ್ಲೂ ಸಂಗೀತದ ವಿದ್ಯಾರ್ಥಿ ತನ್ನ ಕ್ಷೇತ್ರದಲ್ಲಿ ತನು-ಮನ ಒಂದಾಗಿಸಿ ವ್ಯವಸಾಯ ಮಾಡಬೇಕು. ಇಂದು ಈ ತನ್ಮಯತೆ, ತಾದಾತ್ಮ್ಯತೆ ಮರೆಯಾಗುತ್ತಿರುವುದು ದುರ್ದೈವ.

ಇರಲಿ, ನಾವು ಪ್ರತಿಭೆಯು ಬಗ್ಗೆ ಕೂಡ ಒಂದಿಷ್ಟು ವಿಚಾರ ಮಾಡಿದೆವಲ್ಲವೇ ? ಈ ಬಗ್ಗೆ ಒಂದು ಮಾತು. ಪ್ರತಿಭಾವಂತರಿಗೆ ಎಚ್ಚರಿಕೆ ಎಂದೇ ಹೇಳಬೇಕು. ಈ ಕೆಲವು ಮಂದಿಗೆ 'ತಲೆ ನಿಲ್ಲದ' ಕೊರತೆ. ಎಂದರೆ ಅಹಂಕಾರದ, ಮದದ ಪ್ರಜ್ಞೆ ಇವರಿಗೆ ಶಿಸ್ತಿನ ಹಾಗೂ ವಿಧೇಯತೆಯ ಇತಿಶ್ರೀ ಹಾಡಿಸುತ್ತದೆ. ಆದುದರಿಂದ ಪ್ರತಿಭಾ ವಂತ ಎಂದುಕೊಳ್ಳುವ ಯಾರೇ ಆದರೂ ಈ ಆಕರ್ಷಣೆಗೆ ಬಲಿಯಾಗಬಾರದು.

ಇನ್ನು ಸಂಗೀತದ ಒಂದು ಪ್ರಮುಖ ವಿಭಾಗಕ್ಕೆ ಬರೋಣ. ನಿಮಗೇ ಎನ್ನಿಸ ಬಹುದು, ಕೆಲವು ಸಂಗೀತ ಕಛೇರಿಗಳಲ್ಲಿ ನಿಮಗೆ ಭಾವುಕತೆಯ, ಭಕ್ತಿಯ, ಪಾರವಶ್ಯ ತೆಯ ಅನುಭವ ದೊರಕಿದರೆ ಮತ್ತೆ ಕೆಲವು ಕಛೇರಿಗಳಲ್ಲಿ ಬುದ್ಧಿವಂತಿಕೆಯ ಕಸರತ್ತು ನಡೆದಿರುತ್ತದೆ. ಜಾಣ್ಮೆಯ ಪ್ರದರ್ಶನ, ಸ್ವರ ಜ್ಞಾನಗಳ ಸರ್ಕಸ್ಸು, ತಾಳ ವೈಖರಿಯ ಗಮ್ಮತ್ತು ಇವುಗಳು ಕಂಡುಬರುತ್ತವೆ. ಈ ಎರಡೂ ವಿಭಾಗ ಸುಂದರವಾಗಿ ಸಂಗ ಮಿಸಿದಾಗ ಅವಿರ್ಭಾವವಾಗುವ ಅನಂತ ಆನಂದದ ಅನುಭವ—ನಿಜವಾದ ಸಂಗೀತ.

ಸಂಗೀತಗಾರ್ತಿಯಾಗಿ ನನ್ನ ಕೆಲವು ಅನಿಸಿಕೆಗಳನ್ನು ಒಂದೆರಡು ಮಾತಿನಲ್ಲಿ ತಿಳಿಸಿದ್ದೇನೆ. ನನ್ನ ಭಾವನೆಗಳ ಮಾಧ್ಯಮ ಬರಹವಲ್ಲ—ಸಂಗೀತ. ಅಲ್ಲಿಗೆ ನಿಮಗೆ ಸದಾ ಆಹ್ವಾನ! ನಮಸ್ಕಾರ. ○

ಸಂಸ್ಕೃತ ಪ್ರಶಂಸಾ . . . .

ಎಂ. ಸಿ. ಭಟ್ಟಾಚಾರ್ಯ

ಮಾತು ಮಾನವನಿಗೆ ಲಭ್ಯವಾಗಿರುವ ವಿಶೇಷ ವರ. ಮಾತು ಇಲ್ಲದಿದ್ದಲ್ಲಿ ಮಾನವನೂ ಸಹ ಪಶುವಿನಂತೆ ಮೂಕ ಪ್ರವೃತ್ತಿಯುಳ್ಳವನಾಗುತ್ತಿದ್ದ. ಮಾತಿನಿಂದ, ಮಾನವ ಮೂಡಿಸಿರುವ ಭಾಷೆಗಳಿಂದ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಬಹುದು. ಈ ಪ್ರಪಂಚದಲ್ಲಿ ಅನೇಕ ಭಾಷೆಗಳಿವೆ. ಅವುಗಳಲ್ಲಿ ಸಂಸ್ಕೃತ ಭಾಷೆಗೆ ಅಗ್ರಸ್ಥಾನವಿದೆ. ಈಗಿನ ಆಧುನಿಕ ಯುಗದಲ್ಲಿ ಸಂಸ್ಕೃತ ವಿದ್ಯಾಧ್ಯಯನವು ಕಡಿಮೆಯಾಗಿದ್ದರೂ ಸಹ ಅದರ ಯೋಗ್ಯತೆ ಅದಕ್ಕೆ ಇದ್ದೇ ಇದೆ. ಕೆಸರಿನಲ್ಲಿ ಬಿದ್ದಿರುವ ವಜ್ರಕ್ಕೆ ಅದರ ಬೆಲೆ ಹೇಗೆ ಇದೆಯೋ ಅದೇ ರೀತಿ ಸಂಸ್ಕೃತ ಭಾಷೆಯ ಬೆಲೆ ಅದಕ್ಕೆ ಇದೆ. 'ಸಮ್ಯಕ್ ಕೃತಂ ಸಂಸ್ಕೃತಮ್' ಎಂಬ ಪದದ ಅರ್ಥದಲ್ಲಿಯೇ ಅದರ ಮಹತ್ವವು ಅಡಗಿದೆ. ಸಂಸ್ಕೃತ ಅಂದರೆ ಚೆನ್ನಾಗಿ ಮಾಡಲ್ಪಟ್ಟ ಭಾಷೆ ಎಂದು ಅರ್ಥ. ಪಾಣಿನಿಯ ವ್ಯಾಕರಣಸೂತ್ರಾನುಸಾರವಾಗಿ ಬಿಗಿಯಾದ ಶಬ್ದ ಸಂಪತ್ತಿನಿಂದ ಕೂಡಿರುವ ಭಾಷೆ ಎಂಬುದೇ ಇದರ ಅರ್ಥ. ಸಂಸ್ಕೃತಭಾಷೆಗಿರುವ ವ್ಯಾಕರಣ ಸಂಪತ್ತು ಯಾವ ಭಾಷೆಗೂ ಇಲ್ಲ. ಎಲ್ಲ ವ್ಯಾಕರಣಗಳಿಗೂ ಸಂಸ್ಕೃತ ವ್ಯಾಕರಣದ ರಚನಾ ವಿಧಾನ ಆಧಾರವಾಗಿದೆ. ವಿಭಕ್ತಿ–ವಚನ–ಸಂಧಿ–ಸಮಾಸ–ಪ್ರತ್ಯಯ–ಅವ್ಯಯ–ವಿಶೇಷ್ಯ–ವಿಶೇಷಣಗಳು–ಉಪಮೇಯ ಉಪಮಾನಗಳು–ಅಲಂಕಾರಗಳು–ಛಂದಸ್ಸು–ಇವುಗಳ ಬುನಾದಿಯ ಮೇಲೆ ಭದ್ರವಾದ ರೀತಿಯಲ್ಲಿ ನಿರ್ಮಿತವಾಗಿರುವ ಒಂದು ಭವ್ಯ ಭವನ ಸಂಸ್ಕೃತ.

"ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣ ಭಾರತೀ ।
ತಸ್ಯಾಂ ಹಿ ಕಾವ್ಯಂ ಮಧುರಂ ತತ್ರಾಪಿ ಚ ಸುಭಾಷಿತಮ್ ॥

ಭಾಷೆಗಳಲ್ಲಿ ಮುಖ್ಯವಾದುದು, ಕೇಳಲು ಮಧುರವಾದದ್ದು ಮತ್ತು ದೇವಭಾಷೆ ಎಂದು ಪ್ರಶಸ್ತಿಯನ್ನು ಪಡೆದಿರುವ ಭಾಷೆ ಎಂದರೆ ಅದು ಸಂಸ್ಕೃತ. ಅದರಲ್ಲೂ ಆ ಭಾಷೆಯಲ್ಲಿ—ವಾಲ್ಮೀಕಿ, ವ್ಯಾಸ, ಕಾಳಿದಾಸ, ಭಾರವಿ, ಬಾಣಭಟ್ಟ, ದಂಡಿ ಮುಂತಾದ ಉದ್ದಾಮ ಕವಿಗಳಿಂದ ಬರೆಯಲ್ಪಟ್ಟಿರುವ ಕಾವ್ಯಗಳು ಇನ್ನೂ

ಧರ್ಮರ. ಮಾನವರಿಗೆ ನೀತಿಯನ್ನು ಬೋಧಿಸಿ, ಸುಜ್ಞಾನವನ್ನು ಪ್ರಸಾದಿಸಿ ಕೆಟ್ಟಮಾರ್ಗದಲ್ಲಿ ಪ್ರವೇಶಿಸದಂತೆ ಮಾಡಿ ಸನ್ಮಾರ್ಗಕ್ಕೆ ದಾರಿ ತೋರಿಸಿ ಮಾನವನ ಜೀವಿತವನ್ನು ಸಾರ್ಥಕಗೊಳಿಸುವ ಭಾಷೆ ಎಂದರೆ ಸಂಸ್ಕೃತವೇ ಆಗಿದೆ. ಅಂಥಹ ಮಟ್ಟಕ್ಕೆ ಮಾನವನನ್ನು ಒಯ್ಯುವ ಸುಭಾಷಿತಗಳು ಲಕ್ಷಗಟ್ಟಲೆ ಈ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಪುರಾಣೇತಿಹಾಸ ಕಾವ್ಯಗಳಲ್ಲಿ ಲಭ್ಯವಾಗುತ್ತವೆ. ಹೀಗೆಯೇ ಭರ್ತೃಹರಿ ಮುಂತಾದವರ ಸುಭಾಷಿತ ಸಂಗ್ರಹಗಳೂ ಮಾನವಜೀವಿತವನ್ನು ಉದ್ಧರಿಸುವ ಮಹತ್ವಪೂರ್ಣವಾದ ಮಾತುಗಳುಳ್ಳವಾಗಿವೆ.

ಶ್ರುತಿಗಳು ಎಂದು ಪ್ರಸಿದ್ಧವಾಗಿರುವ ವೇದಮಂತ್ರಗಳೆಲ್ಲವೂ ಸಹ ಭಕ್ತಿ, ನೀತಿ. ಮುಂತಾದ ವಿಷಯಗಳಿಂದ ಕೂಡಿ—ಧರ್ಮಾರ್ಥ ಕಾಮ ಮೋಕ್ಷಗಳನ್ನು ಮಾನವನಿಗೆ ಪ್ರಸಾದಿಸುತ್ತಿವೆ. ಆದ್ದರಿಂದ ಸಂಸ್ಕೃತ ಭಾಷೆಯು ಮಾನವನಿಗೆ ಕಲ್ಯಾಣವನ್ನು ಉಂಟುಮಾಡುವ ಭಾಷೆ ಎಂದು ಏಕಗ್ರೀವದಿಂದ ಒಪ್ಪಲೇಬೇಕು.

ಸಂಸ್ಕೃತಕ್ಕೆ ಜನ್ಮಭೂಮಿ ಭಾರತ ದೇಶ. ಈ ಭಾಷೆಯು ಭಾರತೀಯರಿಗೆ ದೈವದತ್ತವಾದದ್ದು. ಇದನ್ನೇ ವಿದ್ಯಾ ಎಂಬ ಹೆಸರಿನಿಂದ ಕರೆಯುತ್ತಾರೆ. ಇದು "ವಿದ್" ಎಂಬ ಧಾತುವಿನಿಂದ ಉದ್ಭವಿಸಿರುವದು. "ವಿದ್" ಎಂದರೆ ತಿಳಿಯುವುದು ಎಂದು. ಯಾವುದನ್ನು ಮಾನವನು ತಿಳಿಯಬೇಕು ? ಮಾನವನ ಜನ್ಮ ಸುಖ–ಭೋಗಗಳನ್ನು ಅನುಭವಿಸುವುದಕ್ಕಾಗಲೀ ಅನ್ಯಾಯದಿಂದ ಅರ್ಥಾರ್ಜನೆ ಮಾಡುವುದಕ್ಕಾಗಲೀ ಭಗವಂತನಿಂದ ಅನುಗ್ರಹಿಸಲ್ಪಟ್ಟಿಲ್ಲ. ಧರ್ಮಾಧರ್ಮಗಳನ್ನು, ಯುಕ್ತಾ-ಯುಕ್ತಗಳನ್ನು ಚೆನ್ನಾಗಿ ಅರಿತು. ಕರ್ಮಭೂಮಿಯಾದ ಭಾರತದಲ್ಲಿ ಜನ್ಮ ತಾಳಿರುವುದರಿಂದ, ಸನ್ಮಾರ್ಗ ಪ್ರವರ್ತಕನಾಗಿ, ಪರೋಪಕಾರಿಯಾಗಿ ಹಿಂಸಾಕೃತ್ಯಗಳನ್ನು ಅನ್ಯಾಯಗಳನ್ನು ವರ್ಜಿಸಿ, ಭಗವದ್ಭಕ್ತಿಯನ್ನು ಸಾಧಿಸಿ, ಮುಕ್ತಿಯನ್ನು ಪಡೆಯುವುದೇ ಮಾನವನ ನಿಜವಾದ ಕರ್ತವ್ಯ. ಇಂತಹ ವಿಚಾರಗಳಿಗೆಲ್ಲಾ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಉದ್ಗ್ರಂಥಗಳೇ ಆಧಾರ—

ಅನೇಕಸಂಶಯೋಚ್ಛೇದಿ ಪರೋಕ್ಷಾರ್ಥಸ್ಯ ದರ್ಶಕಮ್ ।
ಸರ್ವಸ್ಯ ಲೋಚನಂ ಶಾಸ್ತ್ರಂ ಯಸ್ಯ ನಾಸ್ತ್ಯಂಧ ಏವ ಸಃ ॥

ಮಾನವನ ಅನುಮಾನಗಳನ್ನು ಪರಿಹರಿಸಿ, ಕಣ್ಣಿಗೆ ಕಾಣದಿರುವ ಮಹತ್ವವಾದ ಅರ್ಥವು ಕಣ್ಣಿಗೆ ಗೋಚರವಾಗುವಂತೆ ಮಾಡುವ ಸಚ್ಛಾಸ್ತ್ರಜ್ಞಾನವು ಯಾವನಿಗೆ ಇಲ್ಲವೋ ಅವನು ನಿಜವಾಗಿಯೂ ಕುರುಡನೇ ಸರಿ. ಶಾಸ್ತ್ರವೆಂಬುದು ದಿವ್ಯದೃಷ್ಟಿಯನ್ನು ಪ್ರಸಾದಿಸಬಲ್ಲ ಒಂದು ಕಣ್ಣು. ಅದು ಇಲ್ಲದಿದ್ದಲ್ಲಿ ಅವನು ಕುರುಡನೇ ಆಗುತ್ತಾನೆ. ಇಂತಹ ಶಾಸ್ತ್ರಗಳಿಗೆಲ್ಲ ಜನ್ಮಸ್ಥಾನ ಸಂಸ್ಕೃತ ಭಾಷೆ.

ದ್ರಾಕ್ಷಾ ಮ್ಲಾನಮುಖೀ ಜಾತಾ ಶರ್ಕರಾ ಚಾಶ್ಮತಾಂ ಗತಾ ।
ಸುಭಾಷಿತರಸಸ್ಯಾಗ್ರೇ ಸುಧಾ ಭೀತಾ ದಿವಂಗತಾ ॥

—ಈ ಸುಭಾಷಿತವನ್ನು ನೋಡಿ. ಸುಭಾಷಿತದ ಮಧುರವಾದ ರಸದ ಮಹಿಮೆಯನ್ನು ನೋಡಿ ದ್ರಾಕ್ಷಿಯ ಮುಖವು ಬಾಡಿತು. ಸಕ್ಕರೆಯು ಕಲ್ಲಿನ ಆಕಾರವನ್ನು ಪಡೆಯಿತು ಮತ್ತು ಅಮೃತವು ಭಯದಿಂದ ಸ್ವರ್ಗದಲ್ಲಿ ಅಡಗಿತು.

ಸಂಸಾರಕಟುವೃಕ್ಷಸ್ಯ ದ್ವೇ ಫಲೇ ಹ್ಯಮೃತೋಪಮೇ ।
ಸುಭಾಷಿತರಸಾಸ್ವಾದಃ ಸಂಗತಿಃ ಸುಜನೈಃ ಸಹ ॥

ಕಹಿಯಾದ ಬೇವಿನಮರ—ಆ ಮರದಲ್ಲಿ ಅಮೃತಕ್ಕೆ ಸಮಾನವಾದ ಎರಡು ಹಣ್ಣುಗಳಿವೆ—ಒಂದು ಸುಭಾಷಿತಗಳ ರಸವನ್ನು ಆಸ್ವಾದನೆ ಮಾಡಿ ಅದರ ಅರ್ಥ ವನ್ನು ತಿಳಿದು ಸನ್ಮಾರ್ಗದಲ್ಲಿ ತೊಡಗುವುದು. ಎರಡನೆಯದು ಸಜ್ಜನರ ಸಹವಾಸ ಮಾಡುವುದು. ಇಂತಹ ಆಳವಾದ ಅರ್ಥಗಳಿಂದ ಕೂಡಿ ಮಹಾಸಾಗರದಂತೆ ವಿಶಾಲವಾಗಿ ಗಂಭೀರವಾಗಿರುವ ಭಾಷೆ ಸಂಸ್ಕೃತ.

ಒಬ್ಬ ಮಹಾಕವಿಯು ಹೇಳಿರುವ ಈ ಮಾತನ್ನು ಗಮನಿಸಿ—

ಅಬ್ಧಿರ್ಲಂಘಿತ ಏವ ವಾನರಭಟೈಃ ಕಿಂತ್ವಸ್ಯ ಗಂಭೀರತಾಂ
ಆಪಾತಾಲನಿಮಗ್ನಪೀವರತನುರ್ಜಾನಾತಿ ಮಂಥಾಚಲಃ

ಶ್ರೀರಾಮನು ಸೇತುವೆಯನ್ನು ಕಟ್ಟಿದಾಗ ಲಕ್ಷಾಂತರ ವಾನರಭಟರು ಸಮುದ್ರವನ್ನು ದಾಟಿದರು. ಆದರೆ ಅದರ ಆಳ ಅವರಿಗೆ ಏನು ಗೊತ್ತು ? ಸಮುದ್ರಮಥನ ಕಾಲ ದಲ್ಲಿ ಪಾತಾಳದವರೆವಿಗೂ ಮುಳುಗಿದ ಮಂಥರಪರ್ವತಕ್ಕೆ ಅದರ ಆಳ ತಿಳಿದಿದೆ. ಹಾಗೆಯೇ ಯಾವನು ನಿರಂತರವೂ ಪವಿತ್ರವಾದ ಮಹತ್ವಪೂರ್ಣವಾದ ಭಾಷಾ ಧ್ಯಯನದಲ್ಲಿ ಮುಳುಗಿದ್ದಾನೆಯೋ ಅವನಿಗೆ ಮಾತ್ರ ಆ ಭಾಷೆಯ ಆಳ ಗೊತ್ತಿರುತ್ತದೆ. ಪಾಮರರು ಅಜ್ಞಾನಿಗಳು ದೂಷಣೆ ಮಾಡುವುದರಿಂದ ಅದಕ್ಕೆ ಯಾವ ಚ್ಯುತಿಯೂ ಇಲ್ಲ. ಭರ್ತೃಹರಿಯ ಈ ಸುಭಾಷಿತವನ್ನು ನೋಡಿ—

ಕೇಯೂರಾ ನ ವಿಭೂಷಯಂತಿ ಪುರುಷಂ ಹಾರಾ ನ ಚಂದ್ರೋಜ್ಜ್ವಲಾಃ
ನ ಸ್ನಾನಂ ನ ವಿಲೇಪನಂ ನ ಕುಸುಮಂ ನಾಲಂಕೃತಾ ಮೂರ್ಧಜಾಃ ।
ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ
ಕ್ಷೀಯಂತೇ ಖಲು ಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಮ್ ॥

ಮನುಷ್ಯನಿಗೆ ಬಂಗಾರದಿಂದ ನಿರ್ಮಿತವಾದ ಆಭರಣಗಳು ಅಲಂಕಾರಗಳಲ್ಲ. ಚಂದ್ರ ನಂತೆ ಹೊಳೆಯುತ್ತಿರುವ ವಜ್ರಖಚಿತವಾದ ಒಡವೆಗಳು ಹಾರಗಳು ಭೂಷಣಗಳಲ್ಲ. ಸ್ನಾನ—ಗಂಧಲೇಪನ ಹೂಗಳು. ಶೃಂಗಾರವಾದ ರೀತಿಯಲ್ಲಿ ಬೆಳೆಸಲ್ಪಟ್ಟ ತಲೆ ಗೂದಲು ಅವನಿಗೆ ಭೂಷಣವಲ್ಲ. ಸುಸಂಸ್ಕೃತವಾದ ಮಾತೇ ನಿಜವಾದ ಅಲಂಕಾರ.

ಭೂಷಣಗಳು ಕ್ಷಯಿಸಬಹುದು ಆದರೆ ವಾಕ್ಕು ಎಂಬ ಭೂಷಣವು ಕ್ಷಯಿಸದು.

ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್ ।
ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಸ್ಸುಖಮ್ ॥

ಮನುಷ್ಯನಿಗೆ ವಿನಯ ವಿಧೇಯತೆಗಳನ್ನು ಕೊಡಬಲ್ಲದ್ದು ವಿದ್ಯೆಯೇ. ವಿನಯ ಗುಣ ದಿಂದ ಯೋಗ್ಯತೆಯನ್ನು ಪಡೆಯುತ್ತಾನೆ. ಯೋಗ್ಯತೆಯಿಂದ ನ್ಯಾಯ ರೀತಿಯಲ್ಲಿ ಧನಾರ್ಜನೆ ಮಾಡುತ್ತಾನೆ. ಆ ಧನದಿಂದ ಧರ್ಮವನ್ನು ಸುಖವನ್ನು ಗಳಿಸುತ್ತಾನೆ. ಆದ್ದರಿಂದ ವಿದ್ಯೆಯೇ ಸರ್ವಕ್ಕೂ ಮೂಲ.

ಇಂತಹ ವಿದ್ಯೆಯನ್ನು ಇಷ್ಟಾರ್ಥಗಳನ್ನು ಕೊಡಬಲ್ಲ ಕಲ್ಪವೃಕ್ಷಕ್ಕೆ ಹೋಲಿಸಿರುವುದನ್ನು ಈ ಕೆಳಗಿನ ಶ್ಲೋಕದಲ್ಲಿ ಗಮನಿಸಿ—

ಮಾತೇವ ರಕ್ಷತಿ ಪಿತೇವ ಹಿತೇ ನಿಯುಂಕ್ತೇ
ಕಾಂತೇವ ಚಾಭಿರಮಯತ್ಯಪನೀಯ ಖೇದಮ್ ।
ಲಕ್ಷ್ಮೀಂ ತನೋತಿ ವಿತನೋತಿ ಚ ದಿಕ್ಷು ಕೀರ್ತಿಂ
ಕಿಂ ಕಿಂ ನ ಸಾಧಯತಿ ಕಲ್ಪಲತೇವ ವಿದ್ಯಾ ॥

ವಿದ್ಯೆಯು ತಾಯಿಯಂತೆ ಮನುಷ್ಯನನ್ನು ಕಾಪಾಡುತ್ತದೆ. ತಂದೆಯಂತೆ ಶಿಕ್ಷಿಸಿ ಒಳ್ಳೆಯ ಹಾದಿಯಲ್ಲಿ ನಡೆಯುವಂತೆ ಪ್ರೇರೇಪಿಸುತ್ತದೆ. ಧರ್ಮ ಪತ್ನಿಯಂತೆ ಅವನ ಕಷ್ಟವನ್ನು ಪರಿಹರಿಸಿ ಮನಸ್ಸಿಗೆ ಆನಂದವನ್ನು ನೀಡುತ್ತದೆ. ಧನಾರ್ಜನೆಗೆ ಸಹಾಯ ಮಾಡುತ್ತದೆ. ದಿಕ್ಕುಗಳಲ್ಲಿ ಅವನ ಕೀರ್ತಿಯು ಹರಡುವಂತೆ ಮಾಡುತ್ತದೆ—ಹೀಗೆ ವಿದ್ಯೆಯು ಸರ್ವ ಫಲಗಳನ್ನೂ ಕೊಡುವ ಒಂದು ಕಲ್ಪವೃಕ್ಷ.

ಇದರ ಮಹತ್ವವನ್ನು ಸ್ವಲ್ಪ ಗಮನಿಸಿ—

ನ ಚೋರಹಾರ್ಯಂ ನ ಚ ರಾಜಹಾರ್ಯಂ
ನ ಭ್ರಾತೃಭಾಜ್ಯಂ ನ ಚ ಭಾರಕಾರಿ ।
ವ್ಯಯೇ ಕೃತೇ ವರ್ಧತ ಏವ ನಿತ್ಯಂ
ವಿದ್ಯಾಧನಂ ಸರ್ವಧನಪ್ರಧಾನಮ್ ॥

ಎಲ್ಲ ಬಗೆಯಾದ ಐಶ್ವರ್ಯಗಳಲ್ಲಿ ಪ್ರಧಾನವಾದ ಐಶ್ವರ್ಯ ವಿದ್ಯೆ. ಇದು ಕಳ್ಳರಿಂದ ಕದಿಯಲು ಸಾಧ್ಯವಿಲ್ಲ, ರಾಜರಿಂದ ಅಪಹರಿಸಲು ಸಾಧ್ಯವಿಲ್ಲ, ಅಣ್ಣ ತಮ್ಮಂದಿರಿಗೆ ಇದರಲ್ಲಿ ಭಾಗವಿಲ್ಲ, ಹೊರಲು ಭಾರವಾದ ವಸ್ತುವಲ್ಲ, ಪಾಠ ಪ್ರವಚನಗಳ ಮೂಲಕ ಅದನ್ನು ಖರ್ಚುಮಾಡಿದಲ್ಲಿ, ಅದು ಇನ್ನೂ ಅಭಿವೃದ್ಧಿಯನ್ನು ಪಡೆಯುತ್ತದೆ. ಹೀಗೆ ವಿದ್ಯೆಯೇ ಪ್ರಧಾನವಾದ ಧನ.

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಸ್ಸುಖಕರೀ ವಿದ್ಯಾ ಗುರೂಣಾಂ ಗುರುಃ ।
ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾ ದೇವತಾ
ವಿದ್ಯಾ ರಾಜಸು ಪೂಜ್ಯತೇ ನಹಿ ಧನಂ ವಿದ್ಯಾವಿಹೀನಃ ಪಶುಃ ॥

ವಿದ್ಯೆಯೇ ಮನುಷ್ಯನಿಗೆ ನಿಜವಾದ ಸ್ವರೂಪ. ವಿದ್ಯೆಯು ರಹಸ್ಯದಲ್ಲಿ ಇಡಲ್ಪಟ್ಟಿರುವ ಆಪದ್ಧನ. ವಿದ್ಯೆ ಸುಖಭೋಗಗಳನ್ನು ಮಾನವನಿಗೆ ಕೊಡಬಲ್ಲ ವಸ್ತು. ವಿದ್ಯೆಯಿಂದ ಮನುಷ್ಯನ ಕೀರ್ತಿ ಹರಡುತ್ತದೆ. ವಿದ್ಯೆ ಗುರುವಿಗೆ ಗುರು, ಪರದೇಶಗಳಲ್ಲಿರುವಾಗ ವಿದ್ಯೆಯೇ ಅವನಿಗೆ ಬಂಧು. ಎಲ್ಲಕ್ಕಿಂತಲೂ ಹೆಚ್ಚಾದ ದೇವತೆ ವಿದ್ಯೆಯೇ. ರಾಜರ ಸಭೆಗಳಲ್ಲಿ ಗೌರವಿಸಲ್ಪಡುವ ವಸ್ತುವು ವಿದ್ಯೆಯೇ ಹೊರತು, ಹಣವಲ್ಲ. ವಿದ್ಯೆ ಇಲ್ಲದವನು ಒಂದು ಪಶು.

ಈ ಶ್ಲೋಕದ ಅರ್ಥವನ್ನು ಗಮನಿಸಿ—

ಸಾಹಿತ್ಯ ಸಂಗೀತ ಕಲಾವಿಹೀನಃ
ಸಾಕ್ಷಾತ್ಪಶುಃ ಪುಚ್ಛವಿಷಾಣಹೀನಃ ।
ತೃಣಂ ನ ಖಾದನ್ನಪಿ ಜೀವಮಾನಃ
ತದ್ಭಾಗಧೇಯಂ ಪರಮಂ ಪಶೂನಾಮ್ ॥

—ಯಾವನಿಗೆ ಸಾಹಿತ್ಯ–ಸಂಗೀತ ಮತ್ತು ಕುಶಲಕಲೆಗಳ ಪರಿಜ್ಞಾನವಿಲ್ಲವೋ ಅಂತಹ ಮನುಷ್ಯನು, ಹುಲ್ಲನ್ನು ತಿನ್ನದೆ ಜೀವನವನ್ನು ನಡೆಸುತ್ತಿದ್ದರೂ, ಬಾಲ ಕೊಂಬುಗಳಿಲ್ಲದ ಒಂದು ಪಶುವಿಗೆ ಸಮಾನ. ಅವನು ಹುಲ್ಲನ್ನು ತಿನ್ನದೆ ಇರುವುದು ಆ ಪಶುಗಳ ಅದೃಷ್ಟ. ಅವನು ಹುಲ್ಲನ್ನು ತಿನ್ನುವವನಾಗಿದ್ದರೆ ಪಶುಗಳು ಮೇವು ಇಲ್ಲದೆ ಕಷ್ಟಪಡುತ್ತಿದ್ದವು.

ಇಂತಹ ಅಭಿಪ್ರಾಯಗಳನ್ನು ಹೊರಚೆಲ್ಲುವ ಮುತ್ತಿನಂತಹ ಮಾತುಗಳು ಸಂಸ್ಕೃತ ಭಾಷೆಯಲ್ಲಿ ಅಪಾರವಾಗಿವೆ—

ಶುನಃ ಪುಚ್ಛಮಿವ ವ್ಯರ್ಥಂ ಜೀವಿತಂ ವಿದ್ಯಯಾ ವಿನಾ ।
ನ ಗುಹ್ಯಗೋಪನೇ ಶಕ್ತಂ ನ ಚ ದಂಶನಿವಾರಣೇ ॥

ನಾಯಿಯ ಬಾಲ ಹೇಗೆ ಪ್ರಯೋಜನವಿಲ್ಲದ್ದೋ ಹಾಗೆಯೇ ಅವಿದ್ಯಾವಂತನ ಜೀವನ. ನಾಯಿಯ ಬಾಲವು ಮರ್ಮಸ್ಥಾನವನ್ನು ಮುಚ್ಚಿಟ್ಟುಕೊಳ್ಳಲು ಉಪಯೋಗವಿಲ್ಲ. ನೊಣಗಳನ್ನು ಹೊಡೆದೋಡಿಸಲು ಸಾಧ್ಯವಿಲ್ಲ. ಅದರಂತೆಯೇ ವಿದ್ಯೆ ಇಲ್ಲದವನ ಬಾಳು ವ್ಯರ್ಥ.

ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್ ।
ವ್ಯಸನೇನ ಚ ಮೂರ್ಖಾಣಾಂ ನಿದ್ರಯಾ ಕಲಹೇನ ವಾ ॥

ಬುದ್ಧಿವಂತರ ಸಮಯವು ನೀತಿದಾಯಕಗಳಾದ ಕಾವ್ಯ-ಶಾಸ್ತ್ರಾದಿಗಳನ್ನು ಓದುವುದರಿಂದ ಕಳೆದುಹೋಗುತ್ತದೆ. ಮೂರ್ಖರ ಕಾಲವು ಜೂಜು, ಪಾನ, ಸ್ತ್ರೀ ಸುಖ ಮುಂತಾದ ವ್ಯಸನಗಳಿಂದಲೂ, ನಿದ್ದೆಯಿಂದಲೂ, ಜಗಳಗಳಿಂದಲೂ ಕಳೆದುಹೋಗುತ್ತದೆ.

ಇದು ಎಂತಹ ಅಮೋಘವಾದ ನುಡಿ ಎಂಬುದನ್ನು ವಿಚಾರಿಸಿಕೊಳ್ಳಿ—

ರೂಪ ಯೌವನ ಸಂಪನ್ನಾಃ ವಿಶಾಲಕುಲಸಂಭವಾಃ ।
ವಿದ್ಯಾಹೀನಾ ನ ಶೋಭಂತೇ ನಿರ್ಗಂಧಾ ಇವ ಕಿಂಶುಕಾಃ ॥

ಒಳ್ಳೆಯ ರೂಪವಿದೆ, ಯೌವನವೂ ಇದೆ, ಪ್ರಸಿದ್ಧವಾದ ಮನೆತನದಲ್ಲಿಯೂ ಹುಟ್ಟಿದ್ದಾನೆ. ಪಾಪ ! ಅವನಿಗೆ ವಿದ್ಯಾಗಂಧವೇ ಇಲ್ಲ. ಯಾವ ಸುವಾಸನೆಯೂ ಇಲ್ಲದ ಮುತ್ತುಗದ ಹೂವು ಎಷ್ಟು ಬಣ್ಣದಿಂದ ಕೂಡಿದ್ದರೂ ಯಾರೂ ಅದನ್ನು ತಲೆಯಲ್ಲಿ ಮುಡಿದುಕೊಳ್ಳುವುದಿಲ್ಲ. ಹಾಗೆಯೇ ವಿದ್ಯೆ ಇಲ್ಲದ ಈ ಮನುಷ್ಯನು ಪ್ರಪಂಚದಲ್ಲಿ ಬೆಳಕಿಗೆ ಬರುವುದಿಲ್ಲ.

ಈ ಪ್ರಕಾರವಾದ ಸಾಹಿತ್ಯ ಸಂಪತ್ತಿನಿಂದ ಕೂಡಿ, ಎಲ್ಲರಿಗೂ ಮನರಂಜನೆ ನೀಡಿ ಋಜುಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಭಾಷೆ—ಸಂಸ್ಕೃತ. ಇಂತಹ ಭಾಷೆಗೆ ಜನ್ಮಸ್ಥಾನವಾದ ನಮ್ಮ ಭಾರತದೇಶ ಪುಣ್ಯತಮವಾದದ್ದು. ಋಷಿವರ್ಯರಿಗೂ. ಮಹಾಕವಿಗಳಿಗೂ ಮಾತೃಭೂಮಿ. ಇಂತಹ ಪವಿತ್ರವಾದ ಭಾರತ ದೇಶದಲ್ಲಿ ಜನಿಸಿ, ಜೀವನದಲ್ಲಿ ಸಂಸ್ಕೃತವನ್ನು ಕಲಿಯದೆ—ಅಭ್ಯಾಸಮಾಡದೇ ಅದನ್ನು ಮೃತಭಾಷೆ ಪುರೋಹಿತರ ಭಾಷೆ ಎಂದು ದೂಷಿಸುವ ಮಾನವನು ನಿಜವಾಗಿಯೂ ಕುರುಡನೂ ಮತ್ತು ಮಾತೃದ್ರೋಹಿಯೂ ಆಗುತ್ತಾನೆ ಎಂದು ಹೇಳಿದಲ್ಲಿ ಅತಿಶಯೋಕ್ತಿ ಅಲ್ಲ.

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ

ತನ್ನ ಹುಟ್ಟಿಗೆ ಕಾರಣಳಾದ ತಾಯಿ ಮತ್ತು ತಾನು ಹುಟ್ಟಿದ ಮಣ್ಣು—ಇವು ಎರಡೂ ಸ್ವರ್ಗಕ್ಕಿಂತಲೂ ಮಹತ್ತರವಾದವುಗಳು. ಹಾಗೆಯೇ ಎಲ್ಲ ಭಾಷೆಗಳಿಗೂ ಮಾತೃಪ್ರಾಯವಾಗಿರುವ ಸಂಸ್ಕೃತವನ್ನು ಅಭ್ಯಸಿಸದೇ ಅದರ ಆಳವನ್ನು ತಿಳಿದುಕೊಳ್ಳದೇ ಅದರ ಬಗ್ಗೆ ಉದಾಸೀನತೆಯನ್ನು ತೋರಿಸುವ ಮನುಷ್ಯನು ತನ್ನ ತಾಯಿಗೇ ದ್ರೋಹವನ್ನೆಸಗಿದವನಾಗುತ್ತಾನೆ. ಆದ ಕಾರಣ ಭಾರತೀಯನಾಗಿ ಜನಿಸಿದ ಪ್ರತಿ ವ್ಯಕ್ತಿಯೂ ಜಾತಿ ಮತ ಭೇದವಿಲ್ಲದೆ ಈ ಭಾಷೆಗೆ ಮಾನ್ಯತೆಯನ್ನು ಕೊಟ್ಟು ಅತಿ ಪ್ರಾಚೀನ ಕಾಲದಿಂದ ಗೌರವವನ್ನು ಪಡೆದಿರುವ ಈ ಭಾಷೆಗೆ ತನ್ನ ಶಕ್ತಿಯನ್ನೂ ಮೀರಿ ಪ್ರೋತ್ಸಾಹ ಕೊಡುವುದು ಪ್ರತಿಯೊಬ್ಬನ ಆದ್ಯ ಕರ್ತವ್ಯ.

ಸೌಂದರ್ಯ ಪ್ರಜ್ಞೆ . . . .

ಬಿ. ಶ್ರೀನಿವಾಸಮೂರ್ತಿ

ಅನೇಕ ಗುಣಗಳು ಮಾನವನಿಗೆ ಸ್ವಾಭಾವಿಕವಾಗಿಯೇ ಮೈಗೂಡಿಕೊಂಡಿರುತ್ತವೆ. ಈ ಗುಣಗಳು ಅವನಿಗೆ ದೊರೆಯುತಕ್ಕ ವಿದ್ಯೆ, ಸಂಸ್ಕಾರ, ಪರಿಸರ ಮತ್ತು ಅವನ ಗ್ರಹಣ ಸಾಮರ್ಥ್ಯ ಇತ್ಯಾದಿಗಳಿಂದ ವಿಕಾಸಗೊಂಡು ಅವನು ಸಮಾಜದಲ್ಲಿ ಸುಸಂಸ್ಕೃತನೂ ಮತ್ತು ರಸಿಕನೂ ಆಗಿ ಶೋಭಿಸುವಂತೆ ಮಾಡುತ್ತವೆ. ಈ ಹುಟ್ಟುಗುಣಗಳಲ್ಲಿ ಕೆಲವೆಂದರೆ, ಪ್ರೀತಿ, ದ್ವೇಷ, ಕೋಪ, ಕ್ರೀಡಾಮನೋಭಾವ, ಅನ್ವೇಷಕ ಬುದ್ಧಿ, ಸೌಂದರ್ಯೋಪಾಸನೆ ಮುಂತಾದವು. ಈ ಗುಣಗಳಲ್ಲಿ ಕೆಲವನ್ನು ಮಾನವನು ತನ್ನ ಸದಸದ್ವಿವೇಕದಿಂದ ಹತೋಟಿಯಲ್ಲಿಟ್ಟುಕೊಂಡು ಸಂಯಮದಿಂದ ನಡೆದುಕೊಳ್ಳಬೇಕಾಗುವುದು. ಮತ್ತೆ ಕೆಲವನ್ನು ರೂಢಿಸಿಕೊಂಡು ಸುಪುಷ್ಟವಾಗಿ ಬೆಳೆಯಿಸಿ ತನ್ನ ಉನ್ನತಿಗೆ ಉಪಯೋಗಿಸಿಕೊಳ್ಳಬೇಕಾಗುವುದು. ಪ್ರಕೃತದಲ್ಲಿ ಮಾನವನ ಸೌಂದರ್ಯೋಪಾಸನೆಯ ಗುಣವನ್ನು ಸ್ಥೂಲವಾಗಿ ಗಮನಿಸೋಣ.

ಆದಿಮಾನವನಿಂದ ಹಿಡಿದು ಆಧುನಿಕ ನಾಗರಿಕನವರೆಗೆ ಸೌಂದರ್ಯಪ್ರಜ್ಞೆ, ಸೌಂದರ್ಯೋಪಾಸನೆ ಅಥವಾ ಸೌಂದರ್ಯ ಪ್ರಶಂಸಾತ್ಮಕ ಜ್ಞಾನ ಸ್ವಾಭಾವಿಕವಾಗಿಯೇ ಇರುವ ಒಂದು ವಿಶಿಷ್ಟ ಗುಣ. ಈ ಗುಣ ಮಾನವನ ಜೀವನದಲ್ಲಿಯೇ ಅತ್ಯಂತ ಮುಖ್ಯವಾದ ಗುಣವೆನ್ನಬಹುದು. ಈ ಗುಣವು ಇಲ್ಲದೆ ಹೋಗಿದ್ದರೆ ಅಂಥ ಮನುಷ್ಯ ಹೇಗಿರುತ್ತಿದ್ದ ಎನ್ನುವುದನ್ನು ನಾವು ಊಹಿಸಿಕೊಳ್ಳುವುದು ಕೂಡ ಕಷ್ಟ. ಅವನು ಮೃಗದಂತೆ ಇರುತ್ತಿದ್ದನೇಸೋ ಎಂದರೆ, ಇಲ್ಲ, ಏಕೆಂದರೆ ಪಶುಪಕ್ಷಿಗಳಿಗೂ ಈ ಸೌಂದರ್ಯ ಪ್ರಜ್ಞೆ ಇರುವುದು ಸುಸ್ಪಷ್ಟವಾಗಿದೆ. ಮನುಷ್ಯನ ಮಧುರ-ಸುಂದರ ಜೀವನಕ್ಕೆ ಈ ಸೌಂದರ್ಯ ಪ್ರಜ್ಞೆ ಅತ್ಯಗತ್ಯವಾದುದು. ಮನುಷ್ಯನಿಗೆ ಮನಶ್ಶಾಂತಿ ಮತ್ತು ಆನಂದ ಲಭಿಸುವುದೇ ಈ ಜ್ಞಾನದಿಂದ. ಈ ವಿಶಿಷ್ಟವಾದ ಗುಣವಿಲ್ಲದ ಮಾನವನೇ ಇಲ್ಲ. ಎಲ್ಲರಲ್ಲಿಯೂ ಇರುವ ಈ ಗುಣ ಸಾಧನೆ, ಸಂಸ್ಕಾರ ಸನ್ನಿವೇಶ ಇತ್ಯಾದಿಗಳಿಂದ ಕೆಲವರಲ್ಲಿ ಹೆಚ್ಚಾಗಿ ಪುಷ್ಟಿಗೊಂಡು ಶೋಭಿಸುತ್ತದೆ. ಅಷ್ಟು ಮಾತ್ರವಲ್ಲದೆ ಇತರರಲ್ಲಿಯೂ ಇರುವ ಈ ಗುಣಕ್ಕೆ ಚೈತನ್ಯವನ್ನುಂಟುಮಾಡಿ ಅವರಿಗೂ ಮನದಾನಂದವನ್ನುಂಟುಮಾಡುತ್ತದೆ.

ಸೌಂದರ್ಯ ಪ್ರಜ್ಞೆ ಅಂದರೇನು ?

ಇಷ್ಟು ಮುಖ್ಯವಾದ ಈ ಗುಣ ಸೌಂದರ್ಯಪ್ರಜ್ಞೆ ಅಥವಾ ಸೌಂದರ್ಯ ಪ್ರಶಂಸಾತ್ಮಕ ಜ್ಞಾನ ಅನ್ನುವುದು ಏನು, ಅದು ಹೇಗಿರುತ್ತದೆ ಎಂಬ ಪ್ರಶ್ನೆಗೆ ಹೀಗೆ ಸಂಕ್ಷಿಪ್ತವಾಗಿ ಉತ್ತರವನ್ನು ಹೇಳಬಹುದು, ಸೌಂದರ್ಯವಿರುವ ಕಡೆಯನ್ನು ಗುರುತಿಸಿ ಅದನ್ನು ಅರ್ಥಮಾಡಿಕೊಂಡು ಅನುಭವಿಸುವುದು ಮತ್ತು ಅಂಥ ಸೌಂದರ್ಯವನ್ನು ಸೃಷ್ಟಿಸಿ ಆನಂದಪಡುವುದು—ಇತರರನ್ನು ಆನಂದಗೊಳಿಸುವುದು ಇವೇ ಸೌಂದರ್ಯ ಪ್ರಜ್ಞೆ ಅಥವಾ ಇಂಗ್ಲೀಷಿನಲ್ಲಿ ಹೇಳುವಂತೆ '' Aesthetic sense '' ಎನ್ನುವುದು. ಈ ಜ್ಞಾನವು ಹೆಚ್ಚು ಪಕ್ವವಾಗಿರುವವರನ್ನೇ ನಾವು ಪಂಡಿತರು, ರಸಿಕರು, ಕಲಾವಿದರು ಇತ್ಯಾದಿಯಾಗಿ ಕರೆಯುತ್ತೇವೆ. ಆದುದರಿಂದ ಈ ಜ್ಞಾನವು ಲೇಶವಾದರೂ ಇಲ್ಲದಿರುವ ಮಾನವನೇ ಇಲ್ಲವೆಂದು ಹೇಳಲು ಸಾಧ್ಯ.

ನಮ್ಮಲ್ಲಿ ವಿನೋದಕ್ಕೆ ಹೇಳುವುದುಂಟು, ವೈದ್ಯ. ಜ್ಯೋತಿಷ್ಯ ಮತ್ತು ಸಂಗೀತವನ್ನು ತಿಳಿಯದವರೇ ಇಲ್ಲ, ಎಂದು. ಹಾಗೆಯೇ ಈ ಗುಣವೂ ಸಹ, ಸೌಂದರ್ಯ ಪ್ರಜ್ಞೆಯಿಲ್ಲದಿರುವ ಮನುಷ್ಯನೇ ಇಲ್ಲವೆನ್ನಬಹುದು.

ಸೌಂದರ್ಯೋಪಾಸನೆಯನ್ನು ಅಥವಾ ಸುಂದರ ವಸ್ತುಗಳನ್ನು ಕಂಡು ಅರ್ಥ ಮಾಡಿಕೊಂಡು ಮತ್ತು ಅಂಥವನ್ನು ಸಾಧ್ಯವಾದರೆ ಸೃಷ್ಟಿಸಿ ಆನಂದಿಸುವ ಒಂದು ಮನಸ್ಸಿನ ವ್ಯಾಪಾರವನ್ನು ಅವನ ಸುಖಭೋಗಗಳಲ್ಲಿ ಒಂದೆಂದೂ ಕೂಡ ಹೇಳಬಹುದು. ಭೋಗದ ಲಕ್ಷಣವನ್ನು ಪಂಡಿತರು '' ಸುಖ ದುಃಖಾನ್ಯತರ ಸಾಕ್ಷಾತ್ಕಾರೋ ಭೋಗಃ " ಎಂದು ಹೇಳಿದ್ದಾರೆ, ಅಂದರೆ : ಸುಖ ಅಥವಾ ದುಃಖವನ್ನು ಅನುಭವಿಸುವುದಕ್ಕೆ ಭೋಗವೆಂದು ಹೆಸರು, ಸುಂದರ ವಸ್ತುಗಳ ದರ್ಶನ, ಶ್ರವಣ, ಸೃಷ್ಟಿ ಇತ್ಯಾದಿಗಳಿಂದ ಮನಸ್ಸಿಗೆ ಆನಂದವಾಗುವುದರಿಂದ ಅದು ಸುಖಭೋಗವೆನಿಸುವುದು.

ಸೌಂದರ್ಯವೆಂದರೇನು ?

ಇನ್ನು ಸೌಂದರ್ಯವೆಂದರೆ ಏನೆಂದು ಕೇಳಬಹುದು. ಮನಸ್ಸಿಗೆ ಯಾವುದು ಹಿತವನ್ನು, ಆನಂದವನ್ನು ಮತ್ತು ಪ್ರಸನ್ನತೆಯನ್ನು ಉಂಟುಮಾಡಿ ಆರ್ದ್ರಗೊಳಿಸುವುದೋ ಅವೆಲ್ಲವೂ ಸುಂದರ ವಸ್ತುಗಳು. ಈ ಸುಂದರ ವಸ್ತುಗಳು ಚಿತ್ರಗಳಾಗಿರಬಹುದು, ಶಿಲ್ಪಕೃತಿಗಳಾಗಿರಬಹುದು, ಸಾಹಿತ್ಯವಾಗಿರಬಹುದು. ಸಂಗೀತವಾಗಿರಬಹುದು ಅಥವಾ ನೈಸರ್ಗಿಕವೆನಿಸುವ ಮರಗಳು, ಗಿಡಗಳು, ಲತೆಗಳು, ಬೆಟ್ಟಗಳು, ಪರ್ವತಗಳು, ನದಿಗಳು, ಸಮುದ್ರಗಳು. ಜಲಪಾತಗಳು, ಅರಣ್ಯಗಳು ಇತ್ಯಾದಿಗಳಾಗಿರಬಹುದು ಅಥವಾ ನಾನಾ ಜಾತಿಯ ಪಶು ಪಕ್ಷಿಗಳಿರಬಹುದು. ಇವೆಲ್ಲವೂ ಮನಃಪ್ರಸಾದವನ್ನುಂಟುಮಾಡುತ್ತವೆ. ಇವೆಲ್ಲವುಗಳ ಸೌಂದರ್ಯ ಮನಸ್ಸಿಗೆ ಗೋಚರವಾದೊಡನೆಯೇ ಒಂದು ಅವರ್ಣನೀಯವಾದ ಆನಂದವನ್ನು ಮಾನವ ಅನುಭವಿಸು

ತ್ತಾನೆ. ಇಂಥ ಸೌಂದರ್ಯ ಪ್ರಜ್ಞೆ ಅಥವಾ ಸೌಂದರ್ಯೋಪಾಸನೆಯಿಂದ ಉಂಟಾಗುವ ಆನಂದವನ್ನು ನಾವು ಮಾತುಗಳಲ್ಲಿ ವಿವರಿಸುವುದಕ್ಕೇ ಆಗುವುದಿಲ್ಲ. ಅದನ್ನು ಅನುಭವಿಸಬಹುದು ಮಾತ್ರ. ನಾವು ಎಷ್ಟು ಬಣ್ಣಿಸಿದರೂ ಅದು ಸಾಲದೆನಿಸುತ್ತದೆ. ಸೌಂದರ್ಯೋಪಾಸಕನಾದ ಕೀಟ್ಸ್ ಮಹಾಕವಿ "A thing of beauty is a joy for ever" ಎಂದು ಸಾರಿದ. ಎಂಥ ಅನಂತ ಸತ್ಯವಿದು. (ನಾವು ಇದನ್ನು is a joy for all ಎಂದೂ ಹೇಳಬಹುದು). ಒಂದು ಸಾರಿ ನೋಡಿದ ಸುಂದರ ವಸ್ತುವಿನ, ಅಥವಾ ಓದಿದ ಸುಂದರ ಕಾವ್ಯದ ಅಥವಾ ಕೇಳಿದ ಸುಂದರ ಸಂಗೀತದ ನೆನಪು ಬಂದಾಗಲೆಲ್ಲ ನಾವು ಮನಃಪ್ರಸಾದವನ್ನು ಹೊಂದುತ್ತೇವೆ. ಜೀವವಿರುವ ಪರ್ಯಂತ ನೆನೆದುಕೊಂಡು ಸುಖಿಸುತ್ತೇವೆ.

ಈ ಸೌಂದರ್ಯವನ್ನು ಭೌತಿಕ ಸೌಂದರ್ಯ, ನೈತಿಕ ಸೌಂದರ್ಯ ಮತ್ತು ಧಾರ್ಮಿಕ ಅಥವಾ ಆಧ್ಯಾತ್ಮಿಕ ಸೌಂದರ್ಯ ಎಂಬುದಾಗಿ ಸ್ಥೂಲವಾಗಿ ವಿಂಗಡಿಸಬಹುದು.

ಸೌಂದರ್ಯನೆಲ್ಲಿದೆ ?

ಸೌಂದರ್ಯವಿಲ್ಲದ ಜಾಗವೇ ಇಲ್ಲ. ಆದರೆ ಅದನ್ನು ಗುರುತಿಸುವವರು ಮಾತ್ರ ವಿರಳ, ಅದಕ್ಕೆ ಹೆಚ್ಚಿನ ಸಂಸ್ಕಾರ ಬೇಕಾಗುವುದು. Beauty is every where but not every one sees it ಎಂದು ನಾನು ಎಲ್ಲಿಯೋ ಹಿಂದೆ ಓದಿದ್ದೆ. ಅದು ಸತ್ಯವಾದ ಮಾತು. ಅನೇಕ ಸಾರಿ ಎದುರಿಗೇ ಇರುವ ಸುಂದರ ವಸ್ತುಗಳನ್ನು ಮನುಷ್ಯ ಗಮನಿಸುವುದಿಲ್ಲ. ಇದಕ್ಕೆ ಕಾರಣಗಳೆಂದರೆ ಅವನಲ್ಲಿ ಸೌಂದರ್ಯ ಪ್ರಜ್ಞೆ ಕಡಮೆಯಾಗಿರುವುದು ಅಥವಾ ಪಕ್ವವಾಗದಿರುವುದು ಅಥವಾ ಅವನಿಗೆ ಚಿತ್ತ ಶಾಂತಿಯಿಲ್ಲದೆ ಅನ್ಯಮನಸ್ಕನಾಗಿರುವುದು ಕಾರಣಗಳಾಗಿರಬಹುದು. ಸೌಂದರ್ಯ ಪ್ರಜ್ಞೆಯನ್ನು ಮನುಷ್ಯ ಸ್ವಪ್ರಯತ್ನದಿಂದ ವರ್ಧಿಸಿಕೊಳ್ಳದಿರುವುದು ಅರಸಿಕತೆಯೆನ್ನಿಸುವುದು. ಇನ್ನೂ ಅನೇಕರಿಗೆ ನಾನಾ ಕಾರಣಗಳಿಂದ ಅಂದರೆ ಜನ್ಮತಃ ಬರುವಂಥ ದಾರಿದ್ರ್ಯಾದಿ ಕ್ಲೇಶಗಳಿಂದ ಸೌಂದರ್ಯ ಪ್ರಜ್ಞೆ ವಿಕಾಸಗೊಳ್ಳುವುದಿಲ್ಲ. ಇಂಥ ಅರಸಿಕರನ್ನು ಅಥವಾ ಅಜ್ಞಾನಿಗಳನ್ನು ನಾವು ಬಹಳವಾಗಿಯೇ ನೋಡುತ್ತೇವೆ. ಆದರೆ ಸೌಂದರ್ಯ ಪ್ರಜ್ಞೆ ಮಾತ್ರ ಅತ್ಯಂತ ಅಲ್ಪ ಪ್ರಮಾಣದಲ್ಲಿಯಾದರೂ ಇರುವುದೇ ಹೊರತು ಯಾರಲ್ಲಿಯೂ ಪೂರ್ಣವಾಗಿ ಇಲ್ಲದಿರುವುದಿಲ್ಲ.

ಡಾಕ್ಟರ್ ಅಲೆಕ್ಸಿಸ್ ಕ್ಯಾರೆಲ್ ಸಹ Beauty is hidden every where ಎಂದು ಹೇಳುತ್ತಾನೆ. ಅನೇಕ ಕಡೆಗಳಲ್ಲಿ ಈ ಸೌಂದರ್ಯ ಗುಪ್ತವಾಗಿಯೂ ಇರುವುದು ನಿಜ. ಅಂಥ ಸೌಂದರ್ಯವನ್ನು ಮಾನವ ಪ್ರಯತ್ನಪೂರ್ವಕವಾಗಿ ನೋಡಿ ಆನಂದಿಸಬಹುದಾಗಿದೆ. ಆದರೆ ಸುವ್ಯಕ್ತವಾಗಿರುವ ಸೌಂದರ್ಯವನ್ನು ಅದು

ಎಷ್ಟೇ ಅದ್ಭುತವಾಗಿರಲಿ ಅಥವಾ ರಮ್ಯವಾಗಿರಲಿ ಗಮನಿಸದಂಥ ಅಥವಾ ಅರಿತು ಕೊಳ್ಳದಂಥ ಅರಸಿಕರಿಗೇನೊ ಕೊರತೆಯಿಲ್ಲ. ಇಂಥ ಸೌಂದರ್ಯವೆಂದರೆ ಸುಂದರವೂ, ನೀಲವೂ ಆದ ಆಕಾಶ, ಸೂರ್ಯಚಂದ್ರರು, ನಕ್ಷತ್ರಗಳು, ವಿವಿಧಾಕೃತಿಗಳನ್ನು ತಳೆಯುತ್ತಾ ಚಲಿಸುವ ಮೋಡಗಳು, ಸೂರ್ಯೋದಯ, ಚಂದ್ರೋದಯ, ಅರಣ್ಯಗಳು, ಬೆಟ್ಟಗಳು, ಸಮುದ್ರಗಳು, ನದಿಗಳು, ಜಲಪಾತಗಳು, ಮರಗಳು, ಗಿಡಗಳು, ಬಳ್ಳಿಗಳು, ಇವುಗಳಲ್ಲಿ ಬಿಡುವಂಥ ವಿವಿಧ ವರ್ಣಗಳ–ಆಕೃತಿಗಳ ಮನಮೋಹಕ ವಾದ ಹೂಗಳು ಯಾರ ಮನಸ್ಸನ್ನು ತಾನೆ ಸೂರೆಗೊಳ್ಳುವುದಿಲ್ಲ. ಈ ವಸ್ತುಗಳ ಸೌಂದರ್ಯವನ್ನು ಪಂಡಿತ–ಪಾಮರರೆಲ್ಲರೂ ಅನುಭವಿಸಬಹುದು. ರಸಿಕರಂತೂ ಈ ಸುಂದರ ವಸ್ತುಗಳನ್ನು ನೋಡುತ್ತಾ ತನ್ಮಯರಾಗಿಬಿಡುತ್ತಾರೆ. ಒಂದು ಸಾರಿಯೇ ಸಾಕು. ಒಂದು ಮನಮೋಹಕ ಸುಂದರ ವಸ್ತು ಅಥವಾ ದೃಶ್ಯವನ್ನು ನೋಡಿದವರು ಅಥವಾ ಕೇಳಿದವರು ಜೀವನ ಪರ್ಯಂತ ಅದನ್ನು ನೆನೆಸಿಕೊಂಡು ಸುಖಿಯಾಗಲೂ ಸಾಧ್ಯ, ಈ ಮಾತನ್ನೇ ಡಾ॥ ಅಲೆಕ್ಸಿಸ್ ಕ್ಯಾರೆಲ್ **Beauty is an inexhaustible source of happiness for those who discover its abode** ಎಂದು ಹೇಳಿದ್ದಾನೆ. ಸೌಂದರ್ಯದ ನೆಲೆಯನ್ನು ಕಂಡುಹಿಡಿದವನಿಗೆ ಅದೊಂದು ಎಂದಿಗೂ ಬತ್ತದ ಸುಖದ ಮೂಲವಾಗಿ ಪರಿಣಮಿಸುವುದು. ಈ ಮಾತನ್ನು ಯಾರು ತಾನೆ ಒಪ್ಪುವುದಿಲ್ಲ. ಈ ಕಾರಣಗಳಿಂದಲೇ ಸೌಂದರ್ಯ ಪ್ರಜ್ಞೆ ಅಥವಾ ಸೌಂದರ್ಯ ಪ್ರಶಂಸಾತ್ಮಕ ಜ್ಞಾನ ಅಥವಾ ಇಂಗ್ಲೀಷಿನಲ್ಲಿ ಹೇಳು ವಂತೆ **Aesthetic sense** ಎಂಬುದು ಸುಖದ ಮೂಲವೆನ್ನುವುದು. ಇಂಥ ಒಂದು ರಸಿಕತನವಿಲ್ಲದವರನ್ನೇ ಜನರು ಹಾಸ್ಯಮಾಡುವುದು. "ಸಂಗೀತ ಸಾಹಿತ್ಯ ಕಲಾ ನಭಿಜ್ಞಃ ಸಾಕ್ಷಾತ್ ಪಶುಃ ಪುಚ್ಛ ವಿಷಾಣ ಹೀನಃ" ಎನ್ನುತ್ತಾರೆ. ಅಂದರೆ, ಸಂಗೀತ ಸಾಹಿತ್ಯಾದಿ ಕಲೆಗಳನ್ನರಿಯದವನು ಕೊಂಬು ಮತ್ತು ಬಾಲವಿಲ್ಲದ ಬೋಳು ಹಸು ವಿನಂತೆ ಹಾಸ್ಯಾಸ್ಪದನಾಗುತ್ತಾನೆ. ಇದೇ ಅರ್ಥವನ್ನೇ ಕುರಿತು ಕವಿ ಕಾಳಿದಾಸನು ಕೂಡ "ಇತರ ಕರ್ಮಫಲಾನಿ ಯದೃಚ್ಛಯಾ ಲಿಖ ತಾನಿ ಸಹೇ ಹೇ ಮಾಧವ। ಅರಸಿಕೇಷು ಕವಿತ್ವನಿವೇದನಂ ಶಿರಸಿ ಮಾ ಲಿಖ ಮಾ ಲಿಖ ಮಾ ಲಿಖ" ॥ ಎಂದು ದೇವರನ್ನು ಪ್ರಾರ್ಥಿಸಿಕೊಂಡಿದ್ದಾನೆ.

ಸ್ವರೂಪ–ಅರ್ಥವ್ಯಾಪ್ತಿ

ಸೌಂದರ್ಯದ ಸ್ವರೂಪ ಮತ್ತು ಅರ್ಥವ್ಯಾಪ್ತಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆನ್ನಿಸುತ್ತದೆ. ಸೌಂದರ್ಯದ ಸ್ವರೂಪವನ್ನು "ಹೀಗೆಯೇ", "ಇಷ್ಟೇ". "ಇದು ಅಲ್ಲ", "ಇದು ಹೌದು", ಎಂದು ಹೇಳಲು ಸಾಧ್ಯವಿಲ್ಲ. ಅಂದರೆ ಸಂಸ್ಕೃತದಲ್ಲಿ ಹೇಳುವಂತೆ "ಇದಮಿತ್ಥಂ" ಎಂದು ನಿಷ್ಕರ್ಷೆಯಿಂದ ಹೇಳಲಾಗುವುದಿಲ್ಲ. ಸೌಂದರ್ಯದ ಅರ್ಥವ್ಯಾಪ್ತಿಯನ್ನು ಒಂದು ಮಿತಿಯಲ್ಲಿ ಕಾಣುವುದು ಬಹಳ ಕಷ್ಟ. ಅದು ಬಹಳ ವಿಶಾಲವಾಗಿ ವ್ಯಾಪಿಸಿರುವಂಥದು.

ಒಬ್ಬರ ಕಣ್ಣಿಗೆ ಸುಂದರವಾಗಿರುವುದು ಇನ್ನೊಬ್ಬರಿಗೆ ಕುರೂಪವಾಗಿರಬಹುದು. ಕೆಲವರು ಒಬ್ಬಳನ್ನು ಸುಂದರಿಯೆಂದರೆ ಇನ್ನು ಕೆಲವರಿಗೆ ಅದು ಸೌಂದರ್ಯವೇ ಅಲ್ಲ, ಇವಳೇ ನಿಜವಾದ ಸುಂದರಿ ಎಂದು ಹೇಳುವುದನ್ನು ನಾವು ಎಷ್ಟು ಸಾರಿ ಕೇಳಿಲ್ಲ? ಈ ಸೌಂದರ್ಯದ ಸ್ವರೂಪ ಮತ್ತು ಅರ್ಥವ್ಯಾಪ್ತಿ ಬಹುಶಃ ಒಂದು ಮಿತಿಯೊಳಗೇ ಇದ್ದಿದ್ದಲ್ಲಿ ಅಸಂಖ್ಯಾತ ಸ್ತ್ರೀಯರಿಗೆ ಮತ್ತು ಪುರುಷರಿಗೆ ಮದುವೆಗಳೇ ಆಗುತ್ತಿರಲಿಲ್ಲ ವಲ್ಲವೇ? ತೆಲುಗಿನಲ್ಲಿ ಒಂದು ಗಾದೆಯಿದೆ, '' ತಾನು ಮೆಚ್ಚಿಂದಿ ರಂಭ '' ಅಂದರೆ ತಾನು ಮೆಚ್ಚಿದವಳೇ ರಂಭೆ ಎಂದು. ಇದು ಅಕ್ಷರಶಃ ಸತ್ಯ. ಒಬ್ಬನ ಅಥವಾ ಒಬ್ಬಳ ಸೌಂದರ್ಯ ಮತ್ತೊಬ್ಬನಿಗೆ ಹಿಡಿಸುವುದಿಲ್ಲ. ಹೀಗೆಯೇ ಸೀರೆಗಳು, ಬಟ್ಟೆ ಗಳು, ಆಭರಣಗಳು ಅಲ್ಲದೆ ಕಾವ್ಯ, ಕಲೆ ಮತ್ತು ಸಂಗೀತಾದಿಗಳಲ್ಲಿಯೂ ಲೋಕದ ರುಚಿ ಕಾಳಿದಾಸನು ಹೇಳಿರುವಂತೆ ಭಿನ್ನ ರುಚಿಯೇ ಹೌದು. ಆದುದರಿಂದ ಸೌಂದರ್ಯದ ಸ್ವರೂಪ ಮತ್ತು ಅರ್ಥವ್ಯಾಪ್ತಿಯನ್ನು ವೈಯಕ್ತಿಕ ಅಭಿರುಚಿಗೇ ಬಿಡಬೇಕು. ಅದು ಅವರವರ ವಿದ್ಯೆ. ಜ್ಞಾನ. ರಸಿಕತೆ, ವಿವೇಚನೆ, ಸಂಸ್ಕಾರ, ಅನುಭವಗಳಿಂದ ಅವರವರಿಗೆ ಯಾವ ಪ್ರಮಾಣದಲ್ಲಿ ಗೋಚರವಾಗಬೇಕೋ ಆ ಪ್ರಮಾಣದಲ್ಲಿ ಆಗಿ ಆನಂದಗೊಳಿಸುತ್ತದೆ.

ಪರಿಣಾಮ-ಫಲ

ನಾನು ಮೊದಲೇ ಹೇಳಿದಂತೆ ಮಾನವರೆಲ್ಲರಲ್ಲಿಯೂ ಇರುವ ಈ ಸೌಂದರ್ಯ ಪ್ರಜ್ಞೆಯು ಕೆಲವರಲ್ಲಿ ಅದ್ಭುತ ಪ್ರಮಾಣದಲ್ಲಿ ಬೆಳೆದು ಲೋಕಕಲ್ಯಾಣವುಂಟಾಗುತ್ತದೆ. ಮೊಗ್ಗಿನಂತಿರುವ ಈ ಪ್ರಜ್ಞೆ ಅರಳಿ ಹೂವಾಗಿ, ಹೀಚಾಗಿ, ಕಾಯಾಗಿ, ಫಲವಾಗಿ ಲೋಕಕಲ್ಯಾಣವನ್ನು ಸಾಧಿಸಿರುವ ಉದಾಹರಣೆಗಳೆಂದರೆ, ಆದಿಕವಿ ವಾಲ್ಮೀಕಿ, ವ್ಯಾಸ, ಭಾಸ, ಕಾಳಿದಾಸ, ಭವಭೂತಿ, ರನ್ನ, ಪಂಪ, ರಾಘವಾಂಕ, ಕುಮಾರವ್ಯಾಸ, ಮೀರಾ, ಕಬೀರದಾಸ್, ವಿದ್ಯಾಪತಿ, ಚಂಡಿದಾಸ್, ತುಕಾರಾಮ್, ರವೀಂದ್ರನಾಥ ಠಾಕೂರ್, ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ, ಗುಂಡಪ್ಪ, ಪಾಶ್ಚಾತ್ಯರಾದ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್, ಕೀಟ್ಸ್, ಗಯಟೆ, ಡಾಂಟೆ, ಥಾಮಸ್ ಹಾರ್ಡಿ, ಸಾಮರ್ಸೆಟ್ ಮಹಾಂ, ಬರ್ನಾಡ್ ಷಾ, ಇವರು. ಸಂಗೀತ ಪ್ರಪಂಚದಲ್ಲಿ ತ್ಯಾಗರಾಜ, ಪುರಂದರದಾಸ, ನಂದಿ, ನಾರದ. ತಾನ್‌ಸೇನ್, ನಾಟ್ಯ ಕಲೆಯಲ್ಲಿ ಭರತ ಇವರಲ್ಲದೆ ಎಲ್ಲೋರ, ಅಜಂತ, ಲೇಪಾಕ್ಷಿ ಮುಂತಾದೆಡೆಗಳು ಮತ್ತು ಅಸಂಖ್ಯಾತ ಅರಮನೆಗಳಲ್ಲಿರುವ ಚಿತ್ರಕಲಾ ಕೃತಿಗಳನ್ನು ರಚಿಸಿದ ಹೆಸರೇ ತಿಳಿಯದ ಅಸಂಖ್ಯಾತ ಕಲಾವಿದರು, ಅವನೀಂದ್ರ ಠಾಕೂರ್, ನಂದಲಾಲ್ ಬೋಸ್, ವೆಂಕಟಪ್ಪ. ಮೈಕೇಲ್ ಏಂಜಲೋ, ರೆಂಬ್ರಾಂಟ್, ಲಿಯನಾರ್ಡೋ ಡ ವಿಂಚಿ, ನಾಟ್ಯ ಪ್ರಪಂಚ ದಲ್ಲಿ ಬಾಲಸರಸ್ವತಿ. ರುಕ್ಮಿಣಿ ಅರುಂಡೇಲ್, ಉದಯಶಂಕರ್, ರಾಮಗೋಪಾಲ್, ಯಾಮಿನಿ ಇತ್ಯಾದಿಗಳಲ್ಲದೆ ಹಳೇಬೀಡು, ಬೇಲೂರು, ಸೋಮನಾಥಪುರ, ಖಜು ರಾಹೋ, ಕೋಣಾರ್ಕ ಇತ್ಯಾದಿ ದೇವಾಲಯಗಳಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿದ

ಜಕಣಾಚಾರಿ, ಡಂಕಣಾಚಾರಿ ಮತ್ತು ಹೆಸರೇ ತಿಳಿಯದ ಇತರ ಅನೇಕ ಅಪೋಘ ಕಲಾವಿದರು. ಹೀಗೆ ಹೆಸರುಗಳನ್ನು ಹೇಳುತ್ತಾ ಹೋದರೆ ಅದಕ್ಕೆ ಕೊನೆಯೇ ಇರುವುದಿಲ್ಲ. ಇಂಥ ಮಹಾಮಹಿಮರು ರಚಿಸಿರುವ ಕೃತಿಗಳು.

ಈ ಸೌಂದರ್ಯ ಪ್ರಜ್ಞೆ ಅಥವಾ ಸೌಂದರ್ಯ ಪ್ರಶಂಸಾತ್ಮಕ ಜ್ಞಾನವೆಂಬ ಗುಣವು ಮಾನವನಲ್ಲಿ ಇಲ್ಲದೆ ಹೋಗಿದ್ದರೆ ನಮ್ಮ ಈಗಿನ ಸುಂದರ ಕಾವ್ಯಗಳು, ನಾಟಕಗಳು, ನಾಟ್ಯಸಂಗೀತಗಳು, ಚಿತ್ರ ಮತ್ತು ಶಿಲ್ಪ ಕಲಾಕೃತಿಗಳು ಹುಟ್ಟುವುದಕ್ಕೆ ಸಾಧ್ಯವಾಗುತ್ತಲೇ ಇರಲಿಲ್ಲ. ಮಾನವನ ಸೌಂದರ್ಯ ಕಲ್ಪನೆಯ ಫಲವೇ ಈ ಮಹಾಕೃತಿಗಳು. ನಮ್ಮ ಇಡೀ ನಾಗರಿಕತೆಗೆ ಮತ್ತು ಸಂಸ್ಕೃತಿಗೇ ಸೌಂದರ್ಯ ಪ್ರಜ್ಞೆಯು ಮೂಲವೆಂದು ಹೇಳುವುದಕ್ಕೆ ಯಾವ ಸಂದೇಹವೂ ಇಲ್ಲ.

ಮನುಷ್ಯನ ಬುದ್ಧಿ ಸದಾಕಾಲದಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ ಸೌಂದರ್ಯವನ್ನೇ ನೋಡಲು ಅಪೇಕ್ಷಿಸುತ್ತದೆ. ಕುರೂಪವನ್ನು ಯಾರು ಅಪೇಕ್ಷಿಸುತ್ತಾರೆಯೋ ನನಗೆ ತಿಳಿಯದು. ''ನಾದೇವೋ ದೇವಮರ್ಚಯೇತ್'' ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲಾಗಿದೆ. ದೇವರಲ್ಲದವನು ಅಥವಾ ದೇವಗುಣಗಳನ್ನು ಹೊಂದಿರದವನು ದೇವರನ್ನು ಪೂಜಿಸಲಾರ ಎಂದು ಅದರ ಅರ್ಥ. ಸುಂದರ ಕಾವ್ಯ, ಶಿಲ್ಪ, ಚಿತ್ರ, ನಾಟ್ಯ, ಸಂಗೀತ ಇತ್ಯಾದಿಗಳನ್ನು ಸೃಷ್ಟಿಸಿದವರಲ್ಲಿ ಮಾತ್ರವೇ ಈ ಸೌಂದರ್ಯ, ಪ್ರಜ್ಞೆಯು ಇರುವುದೆಂದರೆ ಅದು ಏನೂ ಉಪಯೋಗವಾಗುತ್ತಿರಲಿಲ್ಲ. ಸೌಂದರ್ಯ ಪ್ರಜ್ಞೆ ಇರುವವರೇ ಅಂಥ ಸುಂದರ ವಸ್ತುಗಳನ್ನು ಅರಿತುಕೊಳ್ಳಲು, ಪ್ರಶಂಸೆ ಮಾಡಲು ಮತ್ತು ಅನುಭವಿಸಲು ಸಮರ್ಥರು. (ಆದುದರಿಂದ ಎಲ್ಲರಲ್ಲಿಯೂ ಈ ಜ್ಞಾನವು ಇರುವುದು ನಿಜ, ಆದರೆ ಅದನ್ನು ವರ್ಧಿಸಿಕೊಂಡಲ್ಲಿ ಇನ್ನೂ ಹೆಚ್ಚಿನ ಆನಂದಕ್ಕೆ ಅವಕಾಶವಾಗುವುದು.) ಇಲ್ಲದಿದ್ದಲ್ಲಿ ''ನಗ್ನ ಕ್ಷಪಣಕೇ ದೇಶೇ ರಜಕಃ ಕಿಂ ಕರಿಷ್ಯತಿ'' ಎನ್ನುವಂತೆ ಅಂದರೆ ಕೇವಲ ನಗ್ನ ಕ್ಷಪಣಕರು ಅಥವಾ ದಿಗಂಬರರು ಇರುವಂಥ ಊರಿನಲ್ಲಿ ಅಗಸನಿಗೇನು ಕೆಲಸವಿರುವುದು, ಎಂಬಂತೆ ಪರಿಸ್ಥಿತಿ ಉಂಟಾಗಬಹುದು. ಮಕ್ಕಳು ಅಂದರೆ, ಕೆಲವು ತಿಂಗಳುಗಳ ಮಕ್ಕಳಿಗೂ ಸಹ ಈ ಜ್ಞಾನವಿರುವುದು ನಿಮ್ಮೆಲ್ಲರಿಗೂ ತಿಳಿದೇ ಇದೆ. ಸುಂದರವಾದ ಬಣ್ಣಬಣ್ಣಗಳ ಆಟದ ಸಾಮಾನುಗಳನ್ನು ಕಂಡರೆ ಮಗುವಿಗೆ ಅತ್ಯಂತ ಪ್ರೀತಿ. ಬಣ್ಣಬಣ್ಣಗಳ ಚಿತ್ರಗಳನ್ನು ಸಹ ಮಕ್ಕಳು ಬಹಳವಾಗಿ ಅಪೇಕ್ಷಿಸುತ್ತಾರೆ. ನಿದ್ರೆಮಾಡದೆ ಅಳುವ ಮಗು ರಾಗವಾಗಿ ಹಾಡಿದ ಜೋಗುಳವನ್ನು ಕೇಳಿ ಅಳುವನ್ನು ನಿಲ್ಲಿಸಿ ಆನಂದವಾಗಿ ನಿದ್ರಿಸುತ್ತದೆ. ಕಡೆಗೆ ಹುಚ್ಚರು ಕೂಡ ಸುಂದರ ವಸ್ತುಗಳನ್ನು ಅಪೇಕ್ಷಿಸುತ್ತಾರೆ.

ಕಾವ್ಯ ಸೌಂದರ್ಯ

ಆದಿಕವಿ ವಾಲ್ಮೀಕಿಯಲ್ಲಿ ಈ ಸೌಂದರ್ಯ ಪ್ರಜ್ಞೆಯು ಅರಳಿ ಸುಂದರ ಪುಷ್ಪವಾಗಿ ಫಲಿಸದೆ ಹೋಗಿದ್ದರೆ ರಾಮಾಯಣದಂಥ ಸುಂದರವೂ ಮತ್ತು ಅದ್ವಿತೀಯವೂ

ಆದ ಕಾವ್ಯವು ನಮಗೆಲ್ಲಿ ಸಿಕ್ಕುತ್ತಿತ್ತು ? ಸಕಲ ಸದ್ಗುಣಗಳ ರಾಶಿಯಾದ ಪುರುಷೋತ್ತ ಮನಾದಂಥ ಕಥಾನಾಯಕನನ್ನು ನಾವೆಲ್ಲಿ ನೋಡುತ್ತಿದ್ದೆವು ? ಸಾಧ್ವೀ ಶಿರೋ ಮಣಿಯೂ, ಸಹನಶೀಲೆಯೂ ಆದ ಸೀತೆಯಂಥ ಆದರ್ಶ ಸ್ತ್ರೀಯನ್ನು ಯಾರು ಚಿತ್ರಿ ಸಲು ಸಾಧ್ಯವಾಗುತ್ತಿತ್ತು ? ಲಕ್ಷ್ಮಣನಂಥ ತಮ್ಮನನ್ನು ಎಲ್ಲಿ ಕಾಣಬಹುದಾಗಿತ್ತು ? ರಾಮಾಯಣ ಯುಗಯುಗಾಂತರಗಳಿಂದ ಜನಸ್ತೋಮವನ್ನು ರಂಜಿಸುತ್ತಾ ಇಂದಿಗೂ ಪರಮೋನ್ನತ ಸ್ಥಾನದಲ್ಲಿ ವಿರಾಜಿಸುತ್ತಿದೆ. ಪಂಚಮ ವೇದವೆಂದು ಪ್ರಖ್ಯಾತವಾದ ಭಾರತದಂಥ ಸುಂದರ ಸಂಪೂರ್ಣ ಕಾವ್ಯವು ಬೇರೊಂದು ಯಾವುದಿದೆ ? ಮಹಾಭಾರತ ಪುರಾಣವಲ್ಲ, ಇತಿಹಾಸ. ಮಹಾಭಾರತದ ಮಹಿಮೆಯನ್ನು ವರ್ಣಿಸುವುದು ಯಾರಿಗೂ ಸಾಧ್ಯವಿಲ್ಲ, ಅದನ್ನು ಓದಿಯೇ ಅನುಭವಿಸಬೇಕು. " ಧರ್ಮೇಚ ಅರ್ಥೇಚ ಕಾಮೇಚ ಮೋಕ್ಷೇಚ ಭರತರ್ಷಭ । ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತ್ವತ್ ಕ್ವಚಿತ್ " ಎಂದು ಹೇಳಿರುವುದು ಅನಂತ ಸತ್ಯ. ಅಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ಚತುರ್ವಿಧ ಪುರುಷಾರ್ಥಗಳನ್ನು ಕುರಿತು ಮಹಾಭಾರತದಲ್ಲಿ ಏನನ್ನು ಹೇಳಲಾಗಿದೆಯೋ ಅದನ್ನೇ ಇತರ ಕಡೆಗಳಲ್ಲಿಯೂ ಹೇಳಿದ್ದಾರೆ. ಇಲ್ಲಿ ಏನನ್ನು ಹೇಳಿಲ್ಲವೋ ಅದು ಮತ್ತೆಲ್ಲಿಯೂ ಇಲ್ಲ ಎಂದು ಈ ಶ್ಲೋಕದ ಅರ್ಥ. ಭಾರತೀಯರ ಇಡೀ ಜೀವನವೇ ಶತಮಾನಗಳಿಂದ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಿಂದ ಪ್ರಭಾವಿತವಾಗಿದೆ. ನಮ್ಮ ಸಂಸ್ಕೃತಿಗೇ ಇವು ಮೂಲಾಧಾರ. ಕವಿಗಳನ್ನು, ಸಾಹಿತಿ ಗಳನ್ನು ಶಿಲ್ಪಿಗಳನ್ನು ಚಿತ್ರಗಾರರನ್ನು, ನಟರನ್ನು, ನಾಟ್ಯಗಾರರನ್ನು ಈ ಕಾವ್ಯಗಳು ನಿರಂತರವಾಗಿ ಸ್ಫೂರ್ತಿಗೊಳಿಸುವ ಎಂದಿಗೂ ಬತ್ತದಂಥ ನೆಲೆಗಳಾಗಿವೆ.

ಕಾಳಿದಾಸನ ಶಾಕುಂತಲಾ ನಾಟಕ ಮತ್ತು ಮೇಘ ಸಂದೇಶದಂಥ ಸುಂದರ ಕಾವ್ಯ ಯಾರನ್ನು ತಾನೆ ಮುಗ್ಧಗೊಳಿಸಿಲ್ಲ ? ಶಾಕುಂತಲಾ ನಾಟಕದ ಒಂದೊಂದು ಮಾತು, ಒಂದೊಂದು ಶ್ಲೋಕ ಮನಸ್ಸನ್ನು ಸೂರೆಗೊಳ್ಳುತ್ತದೆ. "ಅನಾಘ್ರಾತಂ ಪುಷ್ಪ ಕಿಸಲಯಮಲೂನಂ........" ಎಂಬ ಶ್ಲೋಕದಲ್ಲಿ ಶಕುಂತಲೆಯನ್ನು ವರ್ಣಿಸಿರುವುದು ಎಷ್ಟು ಮೋಹಕವಾಗಿದೆ ? ಇದಕ್ಕೆ ಸಾಟಿಯಿದೆಯೇ ? ದುಷ್ಯಂತನಿಂದ ತನಗೆ ಪರಮ ಅನ್ಯಾಯವಾಗಿದ್ದರೂ ನಾಟಕದ ಕೊನೆಯಲ್ಲಿ ಅವನನ್ನು ಶಕುಂತಲೆ ನೋಡಿದಾಗ " ಎಷ್ಟು ಬಡವಾಗಿ ಹೋಗಿದ್ದಾನೆ" ಎಂಬ ಮಾತು ಹೃದಯವನ್ನು ಕಲಕಿಬಿಡುತ್ತದೆ. ಶಕುಂತಲೆಯಂಥ ಅದ್ಭುತ ಪಾತ್ರ ಸೃಷ್ಟಿಯು ಮಹಾಕವಿ ಗಯಟೆಯನ್ನು ಪರವಶ ನನ್ನಾಗಿ ಮಾಡಿಬಿಟ್ಟಿದೆ. ಅವಳನ್ನು ನೆನೆದುಕೊಂಡು ಗಯಟೆ ಆನಂದಸಾಗರದಲ್ಲಿ ತೇಲಾಡಿಬಿಟ್ಟಿದ್ದಾನೆ.

ಮೇಘ ಸಂದೇಶ ಕಾವ್ಯ ಎಷ್ಟು ಮೋಹಕವಾಗಿದೆ. ಹಾಗೆಯೇ ಕಾಳಿದಾಸನ ಕುಮಾರ ಸಂಭವ ಕಾವ್ಯವನ್ನು ಓದಿ ಮುಗ್ಧರಾಗದವರು ಯಾರಿದ್ದಾರೆ.

ಭಾಸ ಮಹಾಕವಿಯ ಸ್ವಪ್ನವಾಸವದತ್ತಾ, ಪ್ರತಿಮಾ ನಾಟಕ, ಏಕಾಂಕ ನಾಟಕಗಳು ಎಷ್ಟು ಮನೋಹರವಾಗಿವೆ. ಭವಭೂತಿಯ ಉತ್ತರ ರಾಮಚರಿತೆಯಲ್ಲಿ ಪ್ರವಹಿಸಿರುವ ಕರುಣರಸಕ್ಕೆ ಹೋಲಿಕೆಯೆಲ್ಲಿದ ?

ನಮ್ಮ ಭರತನಾಟ್ಯ, ಕಥಕ್ಕಳಿ, ಕಥಕ್, ಮಣಿಪುರಿ ಇತ್ಯಾದಿ ನಾಟ್ಯ ಪದ್ಧತಿಗಳು ಮತ್ತು ಸಂಗೀತ ವಿಶ್ವವಿಖ್ಯಾತಗಳಾಗಿ ನಮ್ಮ ಸಂಸ್ಕೃತಿಯ ಔನ್ನತ್ಯವನ್ನು ಸಾರುತ್ತಿವೆ.

ಇದೇ ರೀತಿ ಷೇಕ್ಸ್‌ಪಿಯರ್ ಬರೆದ ನಾಟಕಗಳು, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್, ಕೀಟ್ಸ್ ಮುಂತಾದವರ ಅಪೂರ್ವ ಕವಿತಾ ಸೌಂದರ್ಯವು ನಮ್ಮನ್ನು ಎಷ್ಟು ಮುಗ್ಧಗೊಳಿಸಿವೆ.

ಹಾಗೆಯೇ ಶಿಲ್ಪಕಲಾ ಸೌಂದರ್ಯದ ತೌರೂರೆನಿಸಿದ ಬೇಲೂರು, ಹಳೇಬೀಡು, ಖಜುರಾಹೋ, ಶ್ರೀರಂಗ, ತಂಜಾವೂರು, ಮಧುರೆ, ರಾಮೇಶ್ವರ, ಎಲ್ಲೋರ. ಅಜಂತ, ಕೋಣಾರ್ಕ ಇತ್ಯಾದಿ ಸ್ಥಳಗಳ ಶಿಲ್ಪ ಕಲಾಸೌಂದರ್ಯವನ್ನು ಸವಿಯಲು ವಿಶ್ವದ ನಾನಾ ಮೂಲೆಗಳಿಂದ ರಸಿಕರು ನಿರಂತರವಾಗಿ ಬರುತ್ತಾ ಸೌಂದರ್ಯವನ್ನು ಸವಿದು ತೃಪ್ತರಾಗುತ್ತಿದ್ದಾರೆ. ಇದು ಇಡೀ ಜಗತ್ತನ್ನೇ ವಿಸ್ಮಯಗೊಳಿಸಿದೆ. ನೆನೆಸಿಕೊಂಡಾಗ ಮೈ ಪುಳಕಾಂಕಿತವಾಗುತ್ತದೆ.

ಇದು ಹೆಚ್ಚು ಅಗತ್ಯ

ಹೀಗೆ ಉದಾಹರಣೆಗಳನ್ನು ಕೊಡುತ್ತಾ ಹೋದಲ್ಲಿ ಅದಕ್ಕೆ ಕೊನೆಯೇ ಇರುವುದಿಲ್ಲ. ಮಾನವನಿಗೆ ಬ್ರಹ್ಮಾನಂದವನ್ನು ಉಂಟುಮಾಡತಕ್ಕ ಈ ಕಾವ್ಯ ಸೌಂದರ್ಯ, ಕಲಾಸೌಂದರ್ಯಗಳಿಗೆ ಮೂಲಕಾರಣ ಅ ವ ನ ಸೌಂದರ್ಯ ಪ್ರಜ್ಞೆ ಅಥವಾ ಪ್ರಶಂಸಾತ್ಮಕ ಜ್ಞಾನವಲ್ಲದೆ ಮತ್ತೇನು ? ಸೌಂದರ್ಯವನ್ನು ಕಾಣದೆ ಮಾನವ ಒಂದು ನಿಮಿಷವೂ ಇರಲಾರ. ಕಲ್ಲು, ಮಣ್ಣು, ಮರ ಅಥವಾ ತನಗೆ ಸಿಕ್ಕುವ ಎಲ್ಲ ಪದಾರ್ಥಗಳಲ್ಲಿಯೂ ಅವನು ಸೌಂದರ್ಯವನ್ನು ಕಾಣಲು ಅಥವಾ ಮೂಡಿಸಲು ಪ್ರಯತ್ನಿಸುತ್ತಾನೆ. ಪ್ರಯತ್ನಿಸಿ ಸಫಲನಾಗಿದ್ದಾನೆ. ಆಳವಾದ ಸಮುದ್ರಗಳಲ್ಲಿ ಜೀವದ ಹಂಗನ್ನು ತೊರೆದು ಇಳಿದು ಮುತ್ತುಗಳನ್ನು ತರುತ್ತಾನೆ. ಭೂಗರ್ಭದಲ್ಲಿ ಬಹಳ ಆಳಕ್ಕೆ ಇಳಿದು ಚಿನ್ನ–ಬೆಳ್ಳಿಗಳನ್ನೂ, ವಜ್ರ ವೈಢೂರ್ಯಗಳನ್ನೂ ತೆಗೆಯುತ್ತಾನೆ. ಭಯಂಕರವೆನಿಸಿದ ಸಿಂಹ-ಹುಲಿ-ಚಿರತೆಗಳೊಡನೆ ಹೋರಾಡಿ ಅವುಗಳ ಚರ್ಮಗಳನ್ನು ತರುತ್ತಾನೆ. ಹೀಗೆ ತಂದ ಮುತ್ತು, ಚಿನ್ನ, ಬೆಳ್ಳಿ, ವಜ್ರ ವೈಢೂರ್ಯ ಮತ್ತು ಚರ್ಮಗಳಿಂದ ತನ್ನ ಸುಂದರ ಮಡದಿಯರನ್ನು ಅಲಂಕರಿಸಿ ಆನಂದಿಸುತ್ತಾನೆ. ತಮ್ಮ ಮನೆ ಮಾರುಗಳನ್ನು ಅಲಂಕರಿಸುತ್ತಾನೆ. ಯಾವ ದೃಷ್ಟಿಯಿಂದ ನೋಡಿದರೂ ಮಾನವನ ಜೀವನದಲ್ಲಿ ಈ ಸೌಂದರ್ಯ ಪ್ರಜ್ಞೆ ಒಂದು ಅವಿಭಾಜ್ಯಗುಣವಾಗಿ ನಿಂತು

ಹೋಗಿದೆ. ಅವನಿಗೆ ಆಹಾರ ನಿದ್ರೆಗಳಿಗಿಂತ ಇದು ಹೆಚ್ಚು ಅಗತ್ಯವಾಗಿದೆ ಮತ್ತು ಬೆಲೆಬಾಳುವುದಾಗಿದೆ. ಇದಕ್ಕೊಂದು ಉದಾಹರಣೆಯನ್ನು ಕೊಡಬಹುದು. ಸಾಮಾನ್ಯವಾಗಿ ನಮಗೆ ತಿಳಿದಿರುವಂತೆ ನಟ, ನಾಟ್ಯಗಾರ, ಸಾಹಿತಿ ಮತ್ತು ಕಲಾವಿದರನೇಕರ ಜೀವನ ಆರ್ಥಿಕವಾಗಿ ಅಷ್ಟೇನೋ ಅನುಕೂಲಕರವಾಗಿರುವುದಿಲ್ಲ. ಜೀವನದಲ್ಲಿ ನಾವು ಅಂದುಕೊಂಡಿರುವಂಥ ಸೌಖ್ಯವನ್ನೇ ಕಾಣದಿರುವವರು–ಕಾಣದೆ ಸತ್ತು ಹೋಗಿರುವವರೂ ಉಂಟು. ಆದರೆ ಅವರಿಗೆ ಆಹಾರ, ಬಟ್ಟೆ, ವಸತಿಯೇ ಮುಂತಾದವುಗಳ ಅಭಾವದಿಂದ ಅವರ ಕೃತಿ ರಚನೆ ಅಥವಾ ಕಲೋಪಾಸನೆ ನಿಂತುಹೋಗುವುದಿಲ್ಲ, ಅವರ ಜೀವನದ ಕಷ್ಟಗಳ ಪರಿಣಾಮವಾಗಿ ಅವರ ಕೃತಿಗಳು ಇನ್ನೂ ಹೆಚ್ಚು ಸಮರ್ಪಕವಾಗಿಯೇ ಆಗುವುದೂ ಉಂಟು. ಅವರ ಕಲೆಯಲ್ಲಿಯೇ ಅವರು ತನ್ಮಯರಾಗುತ್ತಾರೆ. ತೃಪ್ತಿಹೊಂದುತ್ತಾರೆ. ತೃಪ್ತಿಕರ ಕೃತಿ ರಚನೆಯಿಂದ ಜೀವನದ ಇತರ ಅಗತ್ಯ ವಸ್ತುಗಳ ಅಭಾವವನ್ನು ಮರೆಯುತ್ತಾರೆ. ಇದನ್ನು ನಾವೆಲ್ಲರೂ ನೋಡಿದ್ದೇವೆ. ಧ್ಯೇಯಸಾಧನೆಯ ಉದ್ದೇಶದಿಂದ ಕೂಡಿದ ನಿಜ ಕಲಾವಿದರಿಗೆ ಆಹಾರ ನಿದ್ರೆಗಳಿಗಿಂತ ಅವರ ಧ್ಯೇಯಸಾಧನೆಯೇ ಅತ್ಯಂತ ಮುಖ್ಯವಾಗಿರುತ್ತದೆ. ಬದುಕಿರುವುದಕ್ಕೆ ಮಾತ್ರ ಆಹಾರ ಮತ್ತು ಮಾನವನ್ನು ಮುಚ್ಚುವುದಕ್ಕೆ ಮಾತ್ರ ಬಟ್ಟೆಯನ್ನು ಅವರು ಅಪೇಕ್ಷಿಸುತ್ತಾರೆ. ಇತ್ತೀಚೆಗೆ ನಾನು ಪ್ರಮುಖ ನಟರೊಬ್ಬರನ್ನು ಸಂದರ್ಶಿಸುವ ಅವಕಾಶ ದೊರಕಿತ್ತು. ಅವರು ತಮ್ಮ ಸಾಧನೆಗಳನ್ನು ತಿಳಿಸುವಾಗ ಭಾವಪರವಶರಾಗುತ್ತಿದ್ದರು. ಅವರು ತಮ್ಮ ಸಾಧನೆಯನ್ನು ಕುರಿತು ಅತ್ಯಂತ ಹೆಮ್ಮೆಯಿಂದ ಇದ್ದರು. ಅವರನ್ನು ನಾನು ಅವರ ಕಷ್ಟಜೀವನವನ್ನು ಕುರಿತು ಪ್ರಸ್ತಾಪಿಸಿದಾಗ ''ಅಯ್ಯೋ ಬಿಡಿ, ಜೀವನದಲ್ಲಿ ಕಷ್ಟ ಯಾರಿಗೆತಾನೆ ತಪ್ಪಿದೆ'' ಎಂದು ಹೃತ್ಪೂರ್ವಕವಾಗಿ ನುಡಿದರು.

ಸೌಂದರ್ಯೋಪಾಸನೆಯ ನೀತಿ ನಿಯಮ

ಸೌಂದರ್ಯವನ್ನು ಸ್ಥೂಲವಾಗಿ ಭೌತಿಕ ಸೌಂದರ್ಯ, ನೈತಿಕ ಸೌಂದರ್ಯ ಮತ್ತು ಆಧ್ಯಾತ್ಮಿಕ ಸೌಂದರ್ಯಗಳೆಂದು ವಿಂಗಡಿಸಬಹುದು. ಆಕಾಶ, ಬೆಟ್ಟ, ಗುಡ್ಡ, ನದಿ, ಸಮುದ್ರ, ಅರಣ್ಯಗಳೇ ಮೊದಲಾದ ಪ್ರಕೃತಿಯ ಸುಂದರ ನಿರ್ಮಾಣಗಳು ಮತ್ತು ಮಾನವ ನಿರ್ಮಿತ ಶಿಲ್ಪ, ಚಿತ್ರ, ಕಾವ್ಯಗಳು, ನಾಟಕಗಳು, ನಾಟ್ಯಗಳು ಜೊತೆಗೆ ಮಾನವರಲ್ಲಿ ಸ್ತ್ರೀ ಮತ್ತು ಪುರುಷರ ಸೌಂದರ್ಯ ಇತ್ಯಾದಿಗಳನ್ನು ಸವಿಯುವುದರಲ್ಲಿಯೂ ಒಂದು ನೀತಿ ಒಂದು ನಿಯಮದ ಎಲ್ಲೆ ಕಟ್ಟು ಇದೆ. ಅದನ್ನು ಮೀರಿದವರಿಗೆ ಸರ್ವನಾಶವು ಖಂಡಿತ. ಸೌಂದರ್ಯೋಪಾಸನೆಯೂ ಒಂದು ಕಠಿಣ ತಪಸ್ಸು ಇದ್ದ ಹಾಗೆ. ಸದಸದ್ವಿವೇಕದಿಂದ ಕೂಡಿದ ಪವಿತ್ರವಾದ ಭಾವನಾವಿಶೇಷ. ಕಾಳಿದಾಸ ಭಾಸ, ಷೇಕ್ಸ್‌ಪಿಯರ್. ಗಯಟೆ ಮುಂತಾದ ಕವಿಗಳು, ಮಹಾನ್ ಶಿಲ್ಪಿಗಳು, ಮಹಾನ್ ಕಲಾವಿದರು, ನಟರು ಮತ್ತು ನಾಟ್ಯಕಾರರಿಂದ ನಮಗೆ ಹೇಗೆ ಸುಂದರ ಕಾವ್ಯಗಳು, ಶಿಲ್ಪಕಲಾ ಕೃತಿಗಳು, ಚಿತ್ರಗಳು, ಸಂಗೀತ ಇತ್ಯಾದಿಗಳು ದೊರೆತು

ನಾವು ಹೇಗೆ ಸಂತೋಷಪಡುತ್ತಿದ್ದೇವೆಯೋ ಹಾಗೆಯೇ ಭೌತಿಕ ಸೌಂದರ್ಯದ ದುರುಪಯೋಗದಿಂದ ಸರ್ವನಾಶವನ್ನು ಕಂಡ ಉದಾಹರಣೆಗಳೆಂದರೆ, ರಾವಣ ಸೀತೆಯನ್ನು ಮೋಹಿಸಿ, ಕೀಚಕನು ದ್ರೌಪದಿಯನ್ನು ಮೋಹಿಸಿ ನಾಶರಾದರು. ಇವನ್ನು ಪುರಾಣದ ಕಟ್ಟುಕಥೆಗಳೆಂದರೆ, ಇತಿಹಾಸದಲ್ಲಿ ಚಿತ್ತೂರಿನ ರಾ ಣಿ ಪದ್ಮಿನಿಯ ಸೌಂದರ್ಯಕ್ಕೆ ಮೋಹಿತನಾದ ಅಲ್ಲಾವುದ್ದೀನನ ದುರ್ಬುದ್ಧಿಗೆ ಎಷ್ಟು ಜನರು ಬಲಿಯಾಗಬೇಕಾಯಿತು. ಕೊಹಿನೂರು ಮುಂತಾದ ವಜ್ರಗಳ ಮೋಹ, ಸಿಂಹಾಸನಗಳ ಮೋಹ. ರಾಜ್ಯಗಳ ಮೋಹ, ಸ್ತ್ರೀ ಮೋಹ ಇತ್ಯಾದಿಗಳು ಎಂಥ ಘೋರ ಯುದ್ಧಗಳಿಗೆ ಕಾರಣಗಳಾದವು. ಇವೆಲ್ಲ ಸುಂದರ ವಸ್ತುಗಳ ಸಲ್ಲದ ಬಯಕೆ, ಅವನ್ನು ಪಡೆಯಲು ಅನುಸರಿಸಿದ ಅನೀತಿ ಮಾರ್ಗಗಳೇ ಸರ್ವನಾಶಕ್ಕೆ ಕಾರಣವಾಯಿತು.

ಆದರೆ ಸ್ತ್ರೀಯೊಬ್ಬಳ ಅನುಪಮ ಸೌಂದರ್ಯವನ್ನು ನೋಡಿ ಮುಗ್ಧನಾದ ಇಟಲಿಯ ಷೇಕ್ಸ್‌ಪಿಯರನೆಂದು ಖ್ಯಾತನಾದ ಡಾಂಟೆ ಕವಿಯು ಮುಂದೆ ಅತ್ಯಂತ ಸುಂದರ ಸಾಹಿತ್ಯವನ್ನು ಸೃಷ್ಟಿಸಲು ಆ ಸೌಂದರ್ಯವೇ ಕಾರಣವಾಯಿತು. ಬೀದಿಯಲ್ಲೊಂದು ದಿನ ಆಗಿನ ಕಾಲದಲ್ಲಿ ಅತ್ಯಂತ ಸುಂದರಿಯೆನಿಸಿದ ಬೀಟ್ರಿಸ್ ಎಂಬ ಯುವತಿಯು ತನ್ನ ಸಖಿಯರೀರ್ವರ ಜೊತೆಯಲ್ಲಿ ಬರುತ್ತಿದ್ದುದನ್ನು ನೋಡಿದ ಡಾಂಟೆ ಕವಿಯು ಅವಳ ಸೌಂದರ್ಯದಿಂದ ಪರವಶನಾಗುತ್ತಾನೆ. ಅನಂತರ ಅವಳು ಅವನ ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿ ನೆಲೆಸಿಬಿಟ್ಟಳು. ಅವಳನ್ನೇನೂ ಅವನು ಮದುವೆಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಬಹುಶಃ ಅವಳಿಗೆ ಡಾಂಟೆ ಕವಿಯು ತನ್ನನ್ನು ನೋಡಿ ಮುಗ್ಧನಾದ ವಿಷಯವೂ ಸಹ ಗೊತ್ತಿಲ್ಲವೆಂದು ಕಾಣುತ್ತೆ. ಅವಳ ಮದುವೆಯೂ ಬೇರೊಬ್ಬನೊಡನೆ ಆಗಿಹೋಯಿತು. ಆದರೆ ಅವಳ ಅಪೂರ್ವ ಸೌಂದರ್ಯ ಡಾಂಟೆಯು ಮುಂದೆ ಅಮೋಘ ಕಾವ್ಯಗಳನ್ನು ಸೃಷ್ಟಿಸಿ ಜಗದ್ವಿಖ್ಯಾತನಾಗಲು ಪ್ರೇರಕವಾಯಿತೆಂದು ಹೇಳಲಾಗಿದೆ.

ನೈತಿಕ ಸೌಂದರ್ಯ

ಇನ್ನು ನೈತಿಕ ಸೌಂದರ್ಯದ ವಿಷಯವಾಗಿ ಒಂದೆರಡು ಮಾತುಗಳನ್ನಾದರೂ ಹೇಳಬೇಕೆನ್ನಿಸುತ್ತದೆ. ನೈತಿಕ ಸೌಂದರ್ಯ ಅಥವಾ Moral Beauty ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂಥಾದ್ದು ಅಲ್ಲ ಮತ್ತು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂಥಾದ್ದೂ ಅಲ್ಲ. ಮನುಷ್ಯನಲ್ಲಿ ದೈಹಿಕ ಸೌಂದರ್ಯವಿಲ್ಲದಿದ್ದರೂ ಅವನಲ್ಲಿ ಅಥವಾ ಅವಳಲ್ಲಿ ಇರುವಂಥ ಶೀಲ ಸದ್ಗುಣಗಳ ಪರಿಣಾಮವಾಗಿ ಒಂದು ಅವರ್ಣನೀಯವಾದ ತೇಜಸ್ಸು ಉಂಟಾಗುತ್ತದೆ. ಈ ತೇಜಸ್ಸು ಅಥವಾ ಈ ನೈತಿಕ ಸೌಂದರ್ಯ ಎಂಥವರನ್ನಾಗಲಿ ಆಕರ್ಷಿಸುವುದರಲ್ಲಿ ಸಮರ್ಥವಾಗುತ್ತದೆ. ಈ ನೈತಿಕ ಸೌಂದರ್ಯ ಸ್ವಲ್ಪ ಮಟ್ಟಿನ ಶೀಲ-ಸದ್ಗುಣಗಳಿಂದ ಸಂಸ್ಕಾರಗೊಂಡ ಹೃದಯವುಳ್ಳಂಥ

ಜನರಿಗೆ ಮಾತ್ರವೇ ಅರ್ಥವಾಗುವುದಾದರೂ ಅತ್ಯಂತ ದುರ್ಬುದ್ಧಿಯುಳ್ಳ ಜನರೂ ಸಹ ಈ ನೈತಿಕ ಸೌಂದರ್ಯದಿಂದ ಆಕರ್ಷಿತರಾಗಿ ಪರಿವರ್ತನಗೊಂಡದ್ದುಂಟು. ಒಂದುವೇಳೆ ಅರ್ಥವಾಗದಿದ್ದರೂ ದುಷ್ಟರೆನಿಸಿದವರಿಗೆ ಈ ನೈತಿಕ ಸೌಂದರ್ಯ ಭಯವನ್ನುಂಟುಮಾಡಿದ ಪ್ರಸಂಗಗಳೂ ಅನೇಕವಿವೆ. ಪುರಾಣಗಳಿಗೆ ಹೋಗದೆ ನಿಮ್ಮೆಲ್ಲರಿಗೂ ತಿಳಿದಂಥ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ:

ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ವಿಚಾರದಲ್ಲಿ ಸಂಧಾನ ನಡೆಸಲು ಆಗಿನ ಬ್ರಿಟನ್ನಿನ ಪ್ರಧಾನಿ ಚರ್ಚಿಲ್ಲರು ಸರ್ ಸ್ಟಾಫರ್ಡ್ ಕ್ರಿಪ್ಸರನ್ನು ಭಾರತಕ್ಕೆ ಕಳುಹಿಸಿಕೊಟ್ಟರು. ಯಾರು ಸಂಧಾನಕ್ಕೆ ಬಂದರೂ ಅವರು ಗಾಂಧಿಯವರೊಡನೆಯೇ ತಾನೆ ಮಾತನಾಡಬೇಕು. ಅವರಿಗೆ ಚರ್ಚಿಲ್ಲರು ಕೊಟ್ಟ ಸೂಚನೆಗಳಲ್ಲಿ ಅತ್ಯಂತ ಮುಖ್ಯವಾದ ಸೂಚನೆಯೆಂದರೆ, "ನೀವು ಗಾಂಧಿಯವರ ಮುಖವನ್ನು ನೋಡುತ್ತಾ ಮಾತುಕತೆಗಳನ್ನಾಡಬೇಡಿ, ಹಾಗೇನಾದರೂ ನೀವು ಮಾಡಿದಲ್ಲಿ ನೀವು ಅವರ ವಾದಕ್ಕೆ ಸೋಲುವಂಥ ಪ್ರಸಂಗ ಬರಬಹುದು" ಎಂದು ಎಚ್ಚರಿಸಿ ಕಳುಹಿಸಿದ್ದರಂತೆ. ಮಹಾತ್ಮಾ ಗಾಂಧಿಯವರ ನೈತಿಕ ಸೌಂದರ್ಯದ ತೇಜಸ್ಸು, ಮತ್ತು ಶಕ್ತಿ ಅಷ್ಟು ಪ್ರಭಾವಶಾಲಿಯಾಗಿತ್ತು. ಅವರ ಮುಂದೆ ಎಂಥವರಿಗೂ ಸುಳ್ಳನ್ನು ಹೇಳಿ ಸಮರ್ಥಿಸಿಕೊಂಡ ಬರಲು ಸಾಧ್ಯವಾಗುತ್ತಿರಲಿಲ್ಲ. ಎಂಥವರನ್ನಾದರೂ ಗಾಂಧಿಯವರು ತಮ್ಮ ಸಾತ್ವಿಕ ಶಕ್ತಿಯ ಮೂಲಕ ಒಲಿಸಿಕೊಂಡುಬಿಡುತ್ತಿದ್ದರು.

ಕೇವಲ ಕೆಲವೇ ವರ್ಷಗಳ ಕೆಳಗೆ ಮಧ್ಯಪ್ರದೇಶದಲ್ಲಿ ಹಾವಳಿ ಮಾಡುತ್ತಿದ್ದ ಭಯಂಕರ ಡಕಾಯಿತರನೇಕರು ಆಚಾರ್ಯ ವಿನೋಬ ಭಾವೆಯವರ ಬಳಿಗೆ ತಾವಾಗಿಯೇ ಬಂದು ಶರಣಾಗತರಾದ ಸಂಗತಿ ಇಡೀ ವಿಶ್ವವನ್ನೇ ಅಚ್ಚರಿಗೊಳಿಸಿದ ಪ್ರಸಂಗವನ್ನು ಯಾರು ತಾನೆ ಮರೆಯಲು ಸಾಧ್ಯ. ಹೀಗೆಯೇ ಬುದ್ಧ, ಉಪಗುಪ್ತ ಸ್ವಾಮಿ ವಿವೇಕಾನಂದ, ಯೇಸುಕ್ರಿಸ್ತ ಮುಂತಾದವರ ಜೀವನಗಳಲ್ಲಿ ಅನೇಕ ಪ್ರಸಂಗಗಳು ನಮಗೆ ಕಂಡುಬರುತ್ತದೆ. ದೈಹಿಕ ಸೌಂದರ್ಯದ ಜೊತೆಗೆ ನೈತಿಕ ಸೌಂದರ್ಯವೂ ಸೇರಿದಲ್ಲಿ ಚಿನ್ನದ ಪುಷ್ಪಕ್ಕೆ ಪರಿಮಳವು ಸೇರಿದಂತಾಗಿ ಅದು ಶೋಭಿಸುವುದರಲ್ಲಿ ಸಂದೇಹವೇನು ? ಅದಕ್ಕೇ ನಮ್ಮ ಸುಭಾಷಿತಕಾರರೂ ಕೂಡ "ಶೀಲಂ ಪರಂ ಭೂಷಣಮ್" ಎಂದು ಸಾರಿದರು.

ಆಧ್ಯಾತ್ಮಿಕ ಸೌಂದರ್ಯ

ನೈತಿಕ ಸೌಂದರ್ಯದಂತೆಯೇ ಆಧ್ಯಾತ್ಮಿಕ ಸೌಂದರ್ಯವನ್ನೂ ಸಹ ನಾವು ಅದು ಹೇಗೆ ಇರಬಹುದೆಂದು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯ. ಸೌಂದರ್ಯೋಪಾಸನೆ ವಾಸನಾರಹಿತವಾದುದು. ಸೌಂದರ್ಯವು ಈಶ್ವರನ ಐಶ್ವರ್ಯವೆಂದು ಹೇಳುತ್ತಾರೆ. ಅದಕ್ಕೇ "ರಸೋ ವೈ ಸಃ" ಎಂದು ಹೇಳಿರುವುದು. ಶಂಕರ,

ರಾಮಾನುಜ, ಮಧ್ವ. ಬಸವೇಶ್ವರ ಮುಂತಾದವರನ್ನೂ ಮತ್ತು ಇತ್ತೀಚಿನ ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಮಹಾತ್ಮಾಗಾಂಧಿ. ಅರವಿಂದ ಮಹರ್ಷಿಗಳು, ರಮಣ ಮಹರ್ಷಿಗಳು ಮುಂತಾದವರು ಆಧ್ಯಾತ್ಮಿಕ ಸೌಂದರ್ಯದ ಆಕರ್ಷಣೆಗೆ ಸುಪ್ರಸಿದ್ಧರಾದವರು. ಈ ಮಹಾಮಹಿಮರು ತಾವಿದ್ದೆಡೆಗೇ ಜಗತ್ತಿನ ನಾನಾ ಮೂಲೆಗಳಿಂದ ಜನರನ್ನು ಆಕರ್ಷಿಸಿದರು. ಇಂಥ ಮಹಾತ್ಮರು ಈಗಲೂ ಅಲ್ಲಲ್ಲಿ ಇದಾರೆ. ಆಧ್ಯಾತ್ಮಿಕ ಸೌಂದರ್ಯವು ಸತ್ಯ, ನ್ಯಾಯ ಮತ್ತು ಆಸ್ತಿಕ ವಿಚಾರಗಳಿಂದ ಮಾನವನಲ್ಲಿ ವಿಶೇಷ ಸಂಸ್ಕಾರವನ್ನುಂಟುಮಾಡಿ ಅವನ ಉನ್ನತಿಯನ್ನು ಸಾಧಿಸುವುದು, "ನೀತಿ ನಿಯಮಗಳಿಂದ ಬರತಕ್ಕಂಥ ಸೌಂದರ್ಯ ಪ್ರಕೃತಿ ಸೌಂದರ್ಯಕ್ಕಿಂತ ಅತಿಶಯವಾದುದು. ನೀತಿರಹಿತ ಮಾನವನ ಜೀವನ ನಿಸ್ಸಾರವಾದುದು" ಎಂದು ಅಲೆಕ್ಸಿಸ್ ಕ್ಯಾರೆಲ್ ಹೇಳಿದ್ದಾನೆ.

ಕೊನೆಯದಾಗಿ ಎರಡು ಮಾತುಗಳನ್ನು ಹೇಳಿ ಇದನ್ನು ಮುಗಿಸುತ್ತೇನೆ. ಭಾರತೀಯರ ಸಂಸ್ಕೃತಿಯಲ್ಲಿ ಅಥವಾ ಅವರ ನಿತ್ಯ ಜೀವನದಲ್ಲಿ ಪರಂಪರಾಗತವಾಗಿ ಬಂದಿರುವ ಪ್ರತಿಯೊಂದು ನೇಮ ನಿಷ್ಠೆಯೂ ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುವ ಸಾಧನಗಳು. ಕವಿತೆ ಮತ್ತು ಕಲೆಗಳು ಅವನ ಭಾವಜೀವನವನ್ನು ಸಂಸ್ಕರಿಸಿ ಚಿತ್ತಶುದ್ಧಿಯನ್ನುಂಟುಮಾಡುತ್ತದೆ. ಚಿತ್ತಶುದ್ಧಿಯಿಂದ ಮನಶ್ಶಾಂತಿಯು ಲಭಿಸುತ್ತದೆ. ಜೀವನದಲ್ಲಿ ಮನಶ್ಶಾಂತಿಯೊಂದು ಲಭಿಸಿದ ಮೇಲೆ ಸರ್ವಸೌಖ್ಯಗಳೂ ಲಭಿಸಿದಂತೆಯೇ ಅಲ್ಲವೇ ? ಮಾನವನ ಸುಖಜೀವನದ ಅಸ್ತಿಭಾರವೇ ಸೌಂದರ್ಯ ಪ್ರಜ್ಞೆ. ಅದರಿಂದ ಉಂಟಾಗುವ ಆನಂದಕ್ಕೆ ಮಿಗಿಲಾದುದು ಯಾವುದೂ ಇಲ್ಲ. ಉಪನಿಷತ್ತುಗಳು ಕೂಡ "ಆನಂದಾದ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ ಜಾತಾನಿ ಜೀವನ್ತಿ" ಇತ್ಯಾದಿಯಾಗಿ ಹೇಳಿದರು. ಸೌಂದರ್ಯೋಪಾಸನೆಯು ಸಾಧಾರಣ ಜೀವನದ ಸಂಕಷ್ಟಗಳನ್ನು ಪರಿಹರಿಸಿ ಇಹದಲ್ಲಿ ಸೌಖ್ಯವನ್ನುಂಟುಮಾಡುವುದು ಮಾತ್ರವಲ್ಲದೆ ಮಾನವನನ್ನು ಅಪೂರ್ಣದಿಂದ ಪೂರ್ಣದೆಡೆಗೆ ಒಯ್ಯುವ ಅನುಪಮಮಾರ್ಗವೂ ಹೌದು. ಇಂಥ ಒಂದು ಸಾಧನೆಗೆ ಮಾನವನಲ್ಲಿರುವ ಸೌಂದರ್ಯಪ್ರಜ್ಞೆಯು ಯೋಗ್ಯ ವಿದ್ಯೆ, ಜ್ಞಾನ- ಮತ್ತು ಸಾಧನೆಗಳಿಂದ ಸಂಸ್ಕಾರಗೊಂಡು ಪಕ್ವವಾಗಬೇಕು,

ಇಂಥ ಅವರ್ಣನೀಯವೂ, ಅದ್ಭುತವೂ ಆದ ಶಕ್ತಿಯೊಂದು ಅಂದರೆ ಸೌಂದರ್ಯ ಪ್ರಜ್ಞೆಯು ನಮ್ಮಲ್ಲಿ ಸ್ವಾಭಾವಿಕವಾಗಿಯೇ ಇರುವುದರಿಂದ ನಾವೆಷ್ಟು ಧನ್ಯರು, ನಾವೆಷ್ಟು ಸೌಭಾಗ್ಯಶಾಲಿಗಳು.

ಚಿತ್ರಕಲಾ ಶಿಕ್ಷಣ . . . .

ರುಮಾಲೆ ಚೆನ್ನಬಸವಯ್ಯ

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದಲ್ಲಿ ಕೆಲವು ಸುಧಾರಣೆಗಳು ಆದವು. ಇವುಗಳಲ್ಲಿ ಚಿತ್ರಕಲೆಯನ್ನು ಕ್ರಮಬದ್ಧ ರೀತಿಯಿಂದ ಕಲಿಸುವ ಮಹಾವಿದ್ಯಾಲಯಗಳು ಕಲ್ಕತ್ತಾ. ಬೊಂಬಾಯಿ-ಮದರಾಸು ಮತ್ತು ಮೈಸೂರು ಮೊದಲಾದೆಡೆ ಸ್ಥಾಪಿತವಾದವು. ಈ ಪ್ರಮುಖ ಚಿತ್ರಕಲಾ ಶಿಕ್ಷಣ ಮಹಾ ವಿದ್ಯಾಲಯಗಳಲ್ಲಿ ಕೆಲವು ಬ್ರಿಟನ್ನಿನ ತಜ್ಞ ಕಲಾವಿದರ ಮಾರ್ಗದರ್ಶನದಲ್ಲಿ ಸುವ್ಯವಸ್ಥೆಗೊಂಡವು.

ಸ್ವಾತಂತ್ರ್ಯದ ಅನಂತರವೂ ಕೆಲಕಾಲ ಈ ಕಲಾ ಶಿಕ್ಷಣ ವಿದ್ಯಾಲಯಗಳು ಹಿಂದಣ ವ್ಯವಸ್ಥಿತ ಸಂಪ್ರದಾಯದ ಮೇಲೆ ಮುಂದುವರೆದವು.

1950ರ ಅನಂತರ ನವ್ಯ ಚಿತ್ರಕಲಾ ಪದ್ಧತಿಯ ಪ್ರಭಾವದಿಂದ ಹಿಂದಣ ವ್ಯವಸ್ಥಿತ ಶಿಕ್ಷಣ ಕ್ರಮ ಸ್ಥಗಿತಗೊಂಡಿತು. ಮತ್ತು ಹೊಸ ಸಂಪ್ರದಾಯದ ಪ್ರಭಾವವೇ ಹೆಚ್ಚಾಯಿತು.

ಚಿತ್ರಕಲೆಯ ವಿವಿಧ ಪದ್ಧತಿಗಳಲ್ಲಿ, ಮಾಡರ್ನ್ ಆರ್ಟ್, ಅಥವಾ ಕಾಂಟೆಂಪೊರರಿ ಆರ್ಟ್ ಒಂದು ವಿಧವೆಂದು ಒಪ್ಪಿಕೊಂಡರೂ ಇದು ಇತರ ಕಲಾ ಪದ್ಧತಿಗಳನ್ನು ಅಪರೋಕ್ಷವಾಗಿ ಮೆಟ್ಟಿ ನಿಂತಿರುವುದು ದೇಶದ ದುರ್ದೈವ.

ಯುರೋಪಿನ ರಾಷ್ಟ್ರಗಳಿಗೆ, ರಷ್ಯಾ ಮೊದಲಾದ ಮಹಾ ರಾಷ್ಟ್ರಗಳಿಗೆ ಹೋಲಿಸಿ ದರೆ ಭಾರತದಲ್ಲಿ ಈ ದಿಶೆಯಲ್ಲಿ ಆಗಿರುವ ಜನಜಾಗೃತಿ ತುಂಬಾ ಕಡಿಮೆಯಾದುದು. ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳು ಈ ಬಗ್ಗೆ ಜಾಗೃತವಾಗಬೇಕಾಗಿದೆ. ವಿಜ್ಞಾನ ಯುಗದಲ್ಲಿ ಯಾವುದೇ ರಾಜ್ಯವು ಪ್ರತ್ಯೇಕತಾ ಭಾವನೆಯಿಂದ ಇರಲು ಸಾಧ್ಯವಿಲ್ಲ. ಹೊರ ರಾಜ್ಯಗಳಲ್ಲಿ ಇರುವ ಆರ್ಟ್ ಗ್ಯಾಲರಿಗಳು, ಅಲ್ಲಿ ಕಲೆಯ ಬಗ್ಗೆ ಇರುವ ಅಭಿಮಾನದ ವಾತಾವರಣ ನಮ್ಮಲ್ಲಿಯೂ ಇರದಿದ್ದಲ್ಲಿ ನಮ್ಮ ರಾಜ್ಯದ ಗೌರವಕ್ಕೇ ಚ್ಯುತಿ ಉಂಟಾಗುವುದು.

ಕರ್ನಾಟಕದಲ್ಲಿ ವಿದ್ಯಾಭ್ಯಾಸಕ್ಕಾಗಿ ರಾಜ್ಯ ಸರಕಾರ ಅಪಾರ ಹಣ ವಿನಿಯೋಗಿಸುತ್ತಿದೆ. ಆದರೆ ಕಲಾ ಶಿಕ್ಷಣಕ್ಕೆ ಯಾವ ಪ್ರೋತ್ಸಾಹವಿದೆ ?

ವೈದ್ಯನಾಗಿ ಒಬ್ಬ ವ್ಯಕ್ತಿ ರೂಪುಗೊಳ್ಳಲು ಎರಡು ಲಕ್ಷ ರೂಪಾಯಿಗಳಾದರೂ ವೆಚ್ಚವಾಗುವುದು. ಒಂದು ವರ್ಷಕ್ಕೆ 1,200 ಮಂದಿ M.B.B.S. ನಲ್ಲಿ

ಉತ್ತೀರ್ಣರಾಗುವರೆಂದು ಅಂದಾಜಿದೆ. ಹೀಗಿರಲು ಚಿತ್ರ ಕಲೆಗಾಗಿ ಎಷ್ಟು ಹಣ ಸರಕಾರ ವೆಚ್ಚ ಮಾಡುತ್ತಿದೆ? ನಮ್ಮ ರಾಜ್ಯಕ್ಕೆ ಮನರಂಜನೆ ತೆರಿಗೆ ಸುಮಾರು ಆರು ಕೋಟಿ ಬರುತ್ತಿದೆ. ಇದರಲ್ಲಿ ಎಷ್ಟು ಭಾಗ ಕಲೆಗಳ ಶಿಕ್ಷಣಕ್ಕೆ, ಉತ್ತಮ ಮನರಂಜನಾ ಕಾರ್ಯಗಳಿಗೆ ಮೀಸಲಾಗುತ್ತಿದೆ?

ದಕ್ಷಿಣ ಭಾರತದ ಎಲ್ಲಾ ಪ್ರಾಂತ್ಯಗಳ ರಾಜಧಾನಿಗಳಲ್ಲಿ ಕಾಲೇಜ್ ಆಫ್ ಕ್ರಾಫ್ಟ್ ಅಂಡ್ ಆರ್ಟ್ಸ್ ವಿದ್ಯಾಪೀಠಗಳಿವೆ. ಆದರೆ ಬೆಂಗಳೂರಲ್ಲಿ ಮಾತ್ರ ಇಲ್ಲ. ಇದಂ ಕರ್ಣಾಟಕಕ್ಕೆ ಹೇಗೆ ಭೂಷಣ?

ಸರಕಾರವೇ ಈ ರೀತಿ ಸಂಸ್ಥೆ ಸ್ಥಾಪಿಸುವಂತಾದಲ್ಲಿ ಕೆಲವು ತಪ್ಪುಗಳು ಆಗಿ ಅವನ್ನು ಸರಿಪಡಿಸಲು ಅಸಾಧ್ಯ. ಉದಾಹರಣೆಗೆ ಉತ್ತಮ ಶಿಕ್ಷಕರನ್ನು ಆರಿಸುವ ಪ್ರಶ್ನೆ. ಮಾಡರ್ನ್ ಆರ್ಟ್ ಬಗ್ಗೆ ಅನುರಾಗ ಹೊಂದಿರುವ ಶಿಕ್ಷಕರು ಬೇರೆ ಬೇರೆ ಪಂಥಗಳ ಬಗ್ಗೆ ಸಹಾನುಭೂತಿ ಇಲ್ಲದೆ ಆ ಪಂಥಗಳ ಶಿಕ್ಷಣವನ್ನು ಮೊಟಕು ಮಾಡುತ್ತಿರುವುದು ಅನುಭವದ ಸಂಗತಿ.

ಈಗ ಅವಶ್ಯ ಸ್ಥಾಪಿತವಾಗಬೇಕಾದ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಎಲ್ಲ ರೀತಿಯ ಶಿಕ್ಷಣ ಕ್ರಮಗಳೂ ಬೆಳೆಯಲು ಅವಕಾಶವಿರಬೇಕು. ಮತ್ತು ಈ ಸಂಸ್ಥೆಯ ಪ್ರಮುಖ ಚಾಲಕರು, ಶಿಕ್ಷಕರು ಒಂದು ಶಿಕ್ಷಣ ಪದ್ಧತಿಗೇ ಸೇರಿದವರಾಗದಂತೆ ಎಚ್ಚರ ವಹಿಸಬೇಕು. ಶಿಕ್ಷಕರನ್ನು ಆರಿಸುವಾಗ ಹೆಚ್ಚು ಅನುಭವಸ್ಥ ಶಿಕ್ಷಕರ ಸೇವೆ ಹೊಂದಲು ಯತ್ನಿಸಬೇಕು. ಯಾರಾದರೂ ಸರಿಯಾದ ಸೇವೆ ಸಲ್ಲಿಸಲು ಅಸಮರ್ಥ ರೆಂದು ಕಂಡು ಬಂದಾಗ ಅವರನ್ನು ತೆಗೆಯಲೂ ಅವಕಾಶವಿರಬೇಕು.

ನಮ್ಮ ಸುದೈವದಿಂದ ಕಲಾ ಶಿಕ್ಷಣದ ಬಗ್ಗೆ ಅನುರಾಗ ಹೊಂದಿರುವ ಅನೇಕ ಹಿರಿಯ ಕಲಾವಿದರು ಕರ್ಣಾಟಕದಲ್ಲಿದ್ದಾರೆ. ಇವರ ಸಲಹೆಯಂತೆ ಘನ ಸರಕಾರವು ಒಡನೇ ಚಿತ್ರಕಲಾ ಮಹಾ ವಿದ್ಯಾಲಯ ಅಸ್ತಿತ್ವಕ್ಕೆ ಬರಲು ಎಲ್ಲ ನೆರವನ್ನೂ ಧನಸಹಾಯವನ್ನು ನೀಡಿ ತಾನು ಉಸ್ತುವಾರಿಕೆ ನಡಸುವ ಕ್ರಮವೇ ಶ್ರೇಷ್ಠವಾದು ದೆಂದು ನನ್ನ ಭಾವನೆ.

ಇತಿ–ಮಿತಿ–ಸಂಪಾದಕನ ಗತಿ ?

ಎನ್. ಎಸ್. ರಾಮಪ್ರಸಾದ

'ಪತ್ರಿಕಾ ಸ್ವಾತಂತ್ರ್ಯ – ಸಂಪಾದಕನ ಸ್ವಾತಂತ್ರ್ಯ' ಈ ಮಾತುಗಳಿಗೆ ಏನರ್ಥ? ಕೆಲವು ತಿಂಗಳುಗಳ ಮೊದಲು ಡೆಕನ್ ಹೆರಾಲ್ಡ್ ಸಂಪಾದಕ ವಿ. ಕೆ. ನರಸಿಂಹನ್ ತುಂಬಾ ಮನೋಜ್ಞನಾಗಿ ಉತ್ತರವಿತ್ತಿದ್ದರು:– ಪತ್ರಕರ್ತ ಅಥವಾ ಪತ್ರಿಕಾ ಸಂಪಾದಕನಿಗೆ ವಿಶೇಷವಾದ ಮತ್ತು ಪ್ರತ್ಯೇಕವಾದ ಸ್ವಾತಂತ್ರ್ಯವೆಂಬುದೇನೂ ಇಲ್ಲ. ಈ ರಾಷ್ಟ್ರದ ಪ್ರಜೆಗೆ ಸಂವಿಧಾನದತ್ತವಾದ ಸ್ವಾತಂತ್ರ್ಯಗಳು ಎಷ್ಟಿವೆಯೋ ಅಷ್ಟು ಸಂಪಾದಕನಿಗೂ ಇದೆ. ಸ್ವಲ್ಪ ಹೆಚ್ಚು ಅಲ್ಲದೆ ತುಸು ಕಡಿಮೆಯೂ ಆಗದೆ ಈ ರಾಷ್ಟ್ರದ ಪ್ರಭುವೆನಿಸಿರುವ ಪ್ರಜೆಗೆ ಇರುವ ಸ್ವಾತಂತ್ರ್ಯವನ್ನೇ ಪಡೆದ ಸಂಪಾದಕನಿಗೆ ಆ ಸ್ವಾತಂತ್ರ್ಯದ ಚಲಾವಣೆಗೆ ಇರುವ ಅವಕಾಶ ಅಧಿಕ. ಜನತೆ ಪಡೆದುಕೊಂಡಿರುವ ಸ್ವಾತಂತ್ರ್ಯವನ್ನೇ ಪತ್ರಿಕಾ ಸಂಪಾದಕ ಚಲಾಯಿಸುತ್ತಾನೆ. ಹೀಗೆಂದರೆ ಪತ್ರಿಕಾ ಸ್ವಾತಂತ್ರ್ಯವೂ (ಸಂಪಾದಕನ ಸ್ವಾತಂತ್ರ್ಯ) ಜನತೆಯ ಅಧಿಕಾರವು ಎಂದಾಗುತ್ತದೆ.

ಸಂಪಾದಕ ಮೂರು ಶಕ್ತಿಗಳ ನಡುವಿನ ಬಿಂದು. ಒಂದು ಶಕ್ತಿ ಸ್ವಯಂ ತಾನೆ. ಜೊತೆಗೆ ಅವನ ಮಾರ್ಗದರ್ಶನದಲ್ಲಿ ದುಡಿಯುವ ವರದಿಗಾರ, ಸುದ್ದಿ ಸಂಪಾದಕ, ಉಪ ಸಂಪಾದಕರ—ಬಳಗ. ಎರಡನೆಯ ಶಕ್ತಿ ಪತ್ರಿಕೆಯ ಆಡಳಿತೆಯ ಹತೋಟಿ ಹೊಂದಿರುವ ಮಾಲೀಕರು. ಇವೆರಡೂ ಶಕ್ತಿಗಳೊಡನೆ ಅವನು ಸಾಮರಸ್ಯ ಹೊಂದಿದ್ದರೆ, ಮೂರನೆಯ ಅತ್ಯಂತ ಬಲಿಷ್ಠವಾದ ಶಕ್ತಿಯೊಡನೆ ಆತನ ವ್ಯವಹಾರ ಸುಗಮ. ಮೂರನೆಯ ಶಕ್ತಿಯಲ್ಲಿ ಪತ್ರಿಕೆಯ ಆರ್ಥಿಕ ಜೀವಾಳವೆನಿಸಿದ ವಿಜ್ಞಾಪನಗಳನ್ನು ನಿಯಂತ್ರಿಸುವ ಜಾಹಿರಾತು ಉದ್ದಿಮೆಗಳು, ಸರ್ಕಾರವೂ ಸೇರಿರುತ್ತದೆ. ಮೂರನೆಯ ಶಕ್ತಿಯ ನಿರ್ಣಾಯಕ ಅಂಶವೆನಿಸುವವರೇ ಓದುಗರು, ಸಾರ್ವಜನಿಕರು.

ಪತ್ರಿಕಾ ಸಂಪಾದಕ ಸರ್ವತಂತ್ರ ಸ್ವತಂತ್ರನಲ್ಲ. ಒಂದು ಪತ್ರಿಕಾಲಯದಲ್ಲಿ ಅವನೂ ಒಬ್ಬ ದುಡಿಮೆಗಾರ. ಎಲ್ಲಕ್ಕೂ ಹೊಣೆಗಾರ. ಉಳಿದೆಲ್ಲ ನೌಕರಿಗಳಲ್ಲಿ ಇರುವ ಹಾಗೆಯೇ ಸಂಪಾದಕನೂ ತನ್ನ (ಪತ್ರಿಕೆಯ) ಆಡಳಿತವರ್ಗ ಅಥವಾ ಮಾಲಿಕರಿಗೆ ನಿಷ್ಠನಾಗಿರಬೇಕು. ಒಂದು ಸಂಸ್ಥೆಯಲ್ಲಿ ನೌಕರಿಯನ್ನು ಅಂಗೀಕರಿಸಿದಾಗಲೇ ಆದರೊಂದಿಗೇ ಅಂಗೀಕರಿಸಿದ ದಾಕ್ಷಿಣ್ಯ ಇದು. ನೌಕರಿಯನ್ನು ನೀಡುವ ಸಂಸ್ಥೆ

ಯಾವ ಸ್ವರೂಪವೇ ಆಗಿರಲಿ, ಅದು ಖಾಸಗೀ ಉದ್ದಿಮೆ ಆಗಬಹುದು, ಸರ್ಕಾರ ಇಲ್ಲವೇ ಭಾಗಶಃ ಸರ್ಕಾರಿ ವ್ಯವಸ್ಥೆಯಾಗಿರಬಹುದು, ಎಡ-ಬಲ ಪಂಥಗಳು ಪೈಕಿ ಒಂದಕ್ಕೆ ಅಂಟಿಕೊಂಡ ರಾಜಕೀಯ ಪಕ್ಷದ ಒಡತನದ ವ್ಯವಸ್ಥೆಯಾಗಿರಬಹುದು—ಎಲ್ಲರೂ ತಮ್ಮ ನೌಕರರಿಂದ ನಿರೀಕ್ಷಿಸುವುದು 'ನಿಷ್ಠೆ' ಎಂಬ ಭಾವನೆಯನ್ನು, ಈ ಮಾತು ಪತ್ರಿಕಾರಂಗಕ್ಕೂ ಅನ್ವಯವಾಗುತ್ತದೆ. ತನ್ನ ಮಾಲಿಕ ಅಥವಾ ಆಡಳಿತಕ್ಕೆ ನಿಷ್ಠನಾಗಿರದ ಪತ್ರಿಕಾ ಸಂಪಾದಕನೆಂಬುದು ಇಲ್ಲ.

ಮಾಲಿಕ-ಸಂಪಾದಕರ ನಡುವೆ ಈ ನಿಷ್ಠೆಯ ಪ್ರಶ್ನೆ ಏಕೆ ಎಂಬ ಪ್ರಶ್ನೆಯಷ್ಟು ಉತ್ತರ ಸುಲಭವಲ್ಲ. ಈ ಎರಡೂ ಶಕ್ತಿಗಳ ನಡುವೆ ವಿರಸವಾಡುವುದು ಹೇಗೆ ಸಾಧ್ಯವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ಒಂದೊಂದು ಘರ್ಷಣೆಗೂ ಆಸ್ಪದ ನೀಡುವ ವಿಶಿಷ್ಟ ಘಟನೆಗಳ ಉಲ್ಲೇಖ ಅನಿವಾರ್ಯವಾಗುತ್ತದೆ, ಆ ವಿವರಗಳಿಗೆ ಇಳಿಯದೆ ಈ ಒಂದು ಪ್ರಶ್ನೆಗೆ ಉತ್ತರ ಕೊಟ್ಟುಕೊಂಡರೆ ಸಾಕಾದೀತು—ಸಂಪಾದಕನಿಂದ ಮಾಲಿಕರು ಏನನ್ನು ನಿರೀಕ್ಷಿಸುತ್ತಾರೆ !

ಸಂಪಾದಕನ ದೆಸೆಯಿಂದ ಪತ್ರಿಕೆಯ ಆರ್ಥಿಕ ಸುಭದ್ರತೆಗೆ ಧಕ್ಕೆಯಾಗಬಾರದು ; ಪತ್ರಿಕೆಯ ಜನಪ್ರಿಯತೆಯಾಗಲಿ, ಜನಮನ್ನಣೆಯಾಗಲೀ ತಗ್ಗಬಾರದು ; ರಾಜ್ಯ ಇಲ್ಲವೆ ರಾಷ್ಟ್ರದ ರಾಜಕಾರಣಕ್ಕೆ ಸಂಬಂಧಿಸಿದಂತೆ ಸಂಪಾದಕನ ನೇಮಕದ ಕಾಲದಲ್ಲಿ ಒಪ್ಪಿಕೊಂಡಿರುವ ಅಂಶಗಳಿಗೆ ವ್ಯತಿರಿಕ್ತ ವ್ಯವಹಾರ ನಡೆಯಬಾರದು.

ಮೂರು ಉಪಖಂಡಗಳನ್ನು ಉಳ್ಳ ಒಂದೇ ಸಾಲಿನ ಮೇಲಿನ ಉತ್ತರಕ್ಕೆ ವ್ಯಾಖ್ಯಾನ ಬರೆದರೆ ಅದೊಂದು ಉದ್ಗ್ರಂಥವಾಗುವ ಅಪಾಯವಿದೆ. ಸಂಪಾದಕನ ಸ್ವಾತಂತ್ರ್ಯಕ್ಕೆ ಮಿತಿಯೊಡ್ಡುವ ಪ್ರಕಾರವಿರುವುದು ಇಲ್ಲೇ.

ಈ ರಾಷ್ಟ್ರದಲ್ಲಿ ಕಳದೆರಡು ದಶಕಗಳ ಅವಧಿಯಲ್ಲಿ ಸಂಪಾದಕರು ಕೆಲಸ ಕಳೆದುಕೊಂಡ ಘಟನೆಗಳನ್ನು ಪರಿಶೀಲಿಸಿದಾಗ ವ್ಯಕ್ತವಾಗುವ ಅಂಶ—ಯಾವೊಬ್ಬ ಸಂಪಾದಕನನ್ನೂ ಪತ್ರಿಕೆಯ ಪ್ರಸಾರ ಅಥವಾ ಜನಪ್ರಿಯತೆಯ ಇಳಿತದ ಕಾರಣಕ್ಕಾಗಿ ಮನೆಗೆ ಕಳುಹಿಸಿದ್ದಿಲ್ಲ. ಆದರೆ ನಡುಪ್ರಾಯದಲ್ಲಿ, ಇಳಿಪ್ರಾಯದಲ್ಲಿ ವೃತ್ತಿ ಭ್ರಷ್ಟರಾದವರ ಸಂಖ್ಯೆ ಸ್ವಲ್ಪವಲ್ಲ. ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿ, ಆರ್ಥಿಕವಾಗಿ ಊರ್ಜಿತವಾಗಬಲ್ಲ ಮಟ್ಟಕ್ಕೆ ಏರಿಸಿ, ಹೊಣೆಗಾರಿಕೆಯಿಂದ ನಿರ್ವಹಿಸಿದ ತಲೆಯಾಳನ್ನು ಹೊರದಬ್ಬಿದ ಪ್ರಸಂಗಗಳು ಬೇರೆ ಉದ್ಯಮಗಳಲ್ಲಿ ಇಲ್ಲ. ಆದರೆ ತುಂಬ ಯಶಸ್ವಿಗಳೆನಿಸಿದ ಸಂಪಾದಕರು ಮಾತ್ರ ಈ ಕ್ರೂರ ಆಘಾತಕ್ಕೆ ಆಹುತಿಯಾಗುತ್ತಲೇ ಇರುತ್ತಾರೆ. ಪತ್ರಿಕೆಯ ಆರ್ಥಿಕ ಯಶಸ್ಸಾಗಲೀ, ಜನಪ್ರಿಯತೆಯ ಅಂಶವಾಗಲೀ ಸಂಪಾದಕನ ಪದಚ್ಯುತಿಗೆ ಕಾರಣರಲ್ಲವೆಂದಾದರೆ, ಕಾರಣವೇನೆಂಬುದಕ್ಕೆ ಉತ್ತರಬೇಕಾಗುತ್ತದೆ. ಹೀಗೆ ವೃತ್ತಿ ಭದ್ರತೆಯ ದೃಷ್ಟಿಯಿಂದ ಪತ್ರಕರ್ತರು, ವಿಶೇಷವಾಗಿ ಸಂಪಾದಕರು,

ಉಳಿದೆಲ್ಲರಿಗಿಂತ ಕಡಿಮೆ ಹಕ್ಕನ್ನು ಹೊಂದಿರುತ್ತಾರೆಂಬುದು ಸ್ಪಷ್ಟ, ನೇಮಿತ ಉದ್ದೇಶಕ್ಕೆ ಅನುಗುಣವಾಗಿ ತನ್ನ ಕಾರ್ಯಭಾರವನ್ನು ನಿರ್ವಹಿಸುತ್ತ ಹೋಗುವ ಯಾವುದೇ ದುಡಿಮೆಗಾರನನ್ನೂ ಆತನ ಹುದ್ದೆಯೇ ರದ್ದಾದ ಪ್ರಸಂಗ ವಿನಾ ಹೊರದೂಡಬಾರದೆಂಬ ಸಾಮಾನ್ಯ ಸೂತ್ರಕ್ಕೆ ಸಂಪಾದಕನೊಬ್ಬ ಅಪವಾದ.

ಪತ್ರಿಕಾ ಸಂಪಾದಕನ ಅಕಾಲಿಕ ಪದಚ್ಯುತಿಗೆ ಪತ್ರಿಕೆಯ ಆರ್ಥಿಕಾನುಕೂಲತೆಯಾಗಲೀ ಜನಪ್ರಿಯತೆಯಾಗಲೀ ಕಾರಣವಲ್ಲವೆಂದಮೇಲೆ, ಆತನು ನೇಮಕಗೊಂಡ ಕಾಲದಲ್ಲಿ ಉಭಯ ಸಮ್ಮತಿಯಿಂದ (ಮಾಲಿಕ-ಸಂಪಾದಕ) ನಿರ್ಣಯಿಸಿಕೊಂಡ ರಾಜನೀತಿಯನ್ನು ಪಾಲಿಸಲಿಲ್ಲವೆ ಎಂಬ ಪ್ರಶ್ನೆ ಮುಂದೆ ನಿಲ್ಲುವುದು ಸಹಜ.

ಸಮಸ್ಯೆ ಜಟಿಲವಾಗುವುದು ಇಲ್ಲೇ—ಪತ್ರಿಕೆಯೊಂದರ ನೀತಿ (ಆರ್ಥಿಕ, ಸಾಮಾಜಿಕ, ರಾಜಕೀಯ. ಧಾರ್ಮಿಕ)ಯನ್ನು ಅಸಂದಿಗ್ಧವಾಗಿ ಬರೆದಿಟ್ಟಿರುವ ಒಂದಾದರೂ ಪ್ರಸಂಗವಿಲ್ಲ. ಇದೇ ಕಾರಣದಿಂದ ಗೊಂದಲ-ಘರ್ಷಣೆಗಳಿಗೆ ಆಸ್ಪದ. ರಾಜನೀತಿಗೆ ಸಂಬಂಧಿಸಿ ಮಾಲಿಕ-ಸಂಪಾದಕರ ನಡುವೆ ಮತಭೇದ ಉಂಟಾದಾಗಲೆಲ್ಲಾ, ಸಂಪಾದಕನೇ ಮಾಲಿಕನ ನಿಲುವು ಇಲ್ಲವೇ ವ್ಯಾಖ್ಯಾನಕ್ಕೆ ತಲೆಬಾಗಬೇಕೆಂಬುದು ನ್ಯಾಯ ಸಮ್ಮತವೆನಿಸದು, ತನ್ನ ನಿಲುವನ್ನೇ ಮಾರ್ಪಾಟು ಮಾಡಿಕೊಂಡಾಗ ಅಪಾಯಕ್ಕೆ ಈಡಾಗುವುದು ಮಾಲಿಕನ ಘನತೆ-ಗೌರವಗಳಲ್ಲ.

ರಾಜನೀತಿಯನ್ನು ಉಭಯ ಸಮ್ಮತಿಯಿಂದ ಅಂಗೀಕರಿಸಿದ ಮೇಲೆ, ಮಾಲಿಕ, ತನ್ನ ರಾಜಕೀಯ ಧೋರಣೆ ಅಥವಾ ನಿಷ್ಠೆಯನ್ನು ಬದಲಿಸಿಕೊಂಡರೆ ಆಗಲೂ ಮಾಲಿಕನ ಬದಲಾದ ಧೋರಣೆಯನ್ನೇ ಸಂಪಾದಕ ಅನುಸರಿಸಬೇಕೆಂದಾಗುತ್ತದೆ. ಇದರಿಂದ ಘನತೆಗೆ ಪೆಟ್ಟು ತಗುಲುವುದೇನಿದ್ದರೂ ಅದು ಸಂಪಾದಕನಿಗೆ. ಪತ್ರಿಕೆಯ ದೃಷ್ಟಿಧ್ಯೇಯಗಳಲ್ಲಿ ಗಮನಾರ್ಹ ಮಾರ್ಪಾಟು ಕಂಡಾಗ ಅದಕ್ಕೆ ಕಾರಣ ತಿಳಿಯಬೇಕೆಂಬ ತವಕ ಓದುಗನಿಗೆ ಇಲ್ಲದಿರುವುದಿಲ್ಲ. ಆದರೆ ಅವನಿಗೆ ಹೇಳುವ ಪರಿಪಾಠವೇ ನಮ್ಮಲ್ಲಿ ಬೆಳೆದು ಬಂದಿಲ್ಲ. ನಾವು ಬರೆದುದನ್ನು ಆತ ಒಪ್ಪುತ್ತಾನೆ, ಒಪ್ಪಿದ್ದಾನೆ, ಅಥವಾ ಒಪ್ಪಬೇಕೆಂಬ ಧಾರ್ಷ್ಟ್ಯ (taken for granted) ಪ್ರವೃತ್ತಿಯ ಮೆರೆತವೇ ನಡೆದು ಬಂದಿದೆ. ಸಂಪಾದಕ–ಮಾಲೀಕರ ಉಭಯ ಸಮ್ಮತಿಯಿಂದ ನಿರ್ಧಾರವಾದ ರಾಜನೀತಿಯೇನು ಎಂಬುದೂ ಓದುಗರಿಗೆ ಸ್ಪಷ್ಟವಿರುವುದಿಲ್ಲ; ಇದು ಮಾರ್ಪಾಟಿಗೆ ನೆಟ್ಟಗಾದಾಗ ತಿಳಿಸುವ ಅನುಕೂಲವೂ ಸಂಪಾದಕನಿಗೆ ಇರುವುದಿಲ್ಲ.

ಸಂಪಾದಕ–ಮಾಲಿಕರ ನಡುವೆ ತೀರ್ಮಾನವಾಗಿದ್ದು ಆಚರಣೆಯಲ್ಲಿದ್ದ ನೀತಿಯ ಬಗ್ಗೆ ವ್ಯಾಖ್ಯಾನ–ಅನುಷ್ಠಾನಗಳಲ್ಲಿ ವಿವಾದವೇರ್ಪಟ್ಟಾಗ ವಿವಾದವನ್ನು ಉಭಯ ಪಕ್ಷಕ್ಕೂ ಸಂಬಂಧಿಸಿರದ ಮೂರನೆಯವರ ವಿವೇಚನೆಗೆ ಒಳಪಡಿಸುವುದು ನ್ಯಾಯ ಸಮ್ಮತ. ಇಂಥದೊಂದು ಪ್ರಯತ್ನ ಕೆಲವು ಕಾಲದವರೆಗೆ 'ಸ್ಟೇಟ್ಸಮನ್' ಮಾತ್ರ

ಮಾಡಿದೆ. (ಸಂಪಾದಕ ಪ್ರಾಣ್‌ಚೊಪ್ರ ಮತ್ತು ಆಡಳಿತವರ್ಗದ ವಿವಾದವನ್ನು ನ್ಯಾಯ ಮಂಡಲಿಯ ನಿರ್ಧಾರಕ್ಕೆ ಬಿಟ್ಟಿತ್ತು. ತೀರ್ಮಾನ ಸಂಪಾದಕರ ಪರವಾಗಿಯೇ ಸಿಕ್ಕಿತ್ತು. ಭಾರತದ ವರಿಷ್ಟ ನ್ಯಾಯಾಲಯದ ನಿವೃತ್ತ ಶ್ರೇಷ್ಠ ನ್ಯಾಯಮೂರ್ತಿ, ಪಶ್ಚಿಮ ಬಂಗಾಳದ ನಿವೃತ್ತ ಅ|| ಜನರಲ್, ಅಮೆರಿಕದಲ್ಲಿ ಭಾರತದ ರಾಯಭಾರಿ ಯಾಗಿದ್ದು ನಿವೃತ್ತಿ ಹೊಂದಿದ್ದ ವ್ಯಕ್ತಿ, ಭಾರತದ ನಿವೃತ್ತ ಅಟಾರ್ನಿ ಜನರಲ್, ಒಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿದ್ದ ನ್ಯಾಸ ಮಂಡಲಿ ಸಂಪಾದಕರ ಪರ ತೀರ್ಪು ನೀಡಿದರೂ ಸಂಪಾದಕರಿಗೆ ವೃತ್ತಿ ಭದ್ರತೆಯ ಖಾತರಿ ಸಿಗಲಿಲ್ಲ.)

ಸಂಪಾದಕರ ಸ್ಥಾನದ ಅಭದ್ರತೆಯ ಪರಿಣಾಮ ಅವರ ಕೈಕೆಳಗಿನ ಪತ್ರಕರ್ತ ರೊಡನೆ ಹೊಂದಿರಬೇಕಾದ ಸಂಬಂಧವನ್ನು ಕೆಡಿಸುತ್ತದೆ. ತನ್ನ ಆಧೀನದಲ್ಲಿರುವ ಪತ್ರಕರ್ತರ ನೇಮಕದಂಡನೆಯ ಅಧಿಕಾರಗಳೆರಡೂ ಇಲ್ಲದ ಸನ್ನಿವೇಶದಲ್ಲಿ ಸಿಕ್ಕಿದ ಸಂಪಾದಕ, ದೈನಂದಿನ ಕಾರ್ಯನಿರ್ವಹಣೆಗೆ ತನ್ನಲ್ಲಿ ಇರಬಹುದಾದ ನೈತಿಕ ಬಲ ವನ್ನಷ್ಟೇ ಆಶ್ರಯಿಸಬೇಕಾಗುತ್ತದೆ. ಪರ್ತಕರ್ತರು ಸಿದ್ಧಪಡಿಸಿದ ವರದಿ ಅಥವಾ ಲೇಖನಗಳನ್ನು ತಿದ್ದುವ, ಕತ್ತರಿಸುವ ಇಲ್ಲವೇ ತಿರಸ್ಕರಿಸುವ ಸಂಪಾದಕರ ಅಧಿಕಾರ ಚಲಾವಣೆಗೆ ಸಾಮಾನ್ಯವಾದ ಅಸಮ್ಮತಿ ಇದ್ದೇ ಇರುತ್ತದೆ. ಪತ್ರಿಕೆಯ ಸರ್ವಸ್ವವೇ ಸಂಪಾದಕನಲ್ಲ. ಸಹಸಂಪಾದಕರು, ಸಹಾಯಕ, ಉಪಸಂಪಾದಕ, ವರದಿಗಾರ– ಹೀಗೆ ಒಂದು ಪಡೆಯೇ ದುಡಿಮೆ ಮಾಡುತ್ತದೆ. ಈ ಜನರಿಗೆ ಸ್ಥಾನಮಾನ–ಹೊಣೆಗಳೂ ಇರುವಾಗ ಪತ್ರಿಕೆಯಲ್ಲಿ ಅಡಕಗೊಳ್ಳಬೇಕಾದ ಸರಕಿನ ಗುಣಾವಗುಣಗಳ ಮಥನದ ಅಧಿಕಾರವೂ ಅಗತ್ಯವಾಗುತ್ತದೆ.

ನೈತಿಕ ಅಂಶದ ಜೊತೆಗೆ ಕಾನೂನಿನ ಅಂಶವೂ ಸಂಪಾದಕನ ಸ್ವಾತಂತ್ರ್ಯಕ್ಕೆ ಸಮರ್ಥನೆ ನೀಡುತ್ತದೆ. ಪುಟ್ಟವಾದ ಒಂದು ವಿಜ್ಞಾಪನೆಯನ್ನೂ ಒಳಗೊಂಡು ಅತ್ಯಂತ ಮಹತ್ವದ್ದೆನಿಸುವ ಸುದ್ದಿಯವರೆಗೆ ಪತ್ರಿಕೆಯಲ್ಲಿ ಪ್ರಕಟಗೊಂಡ ಎಲ್ಲ ಸಂಗತಿ ಗಳ ಹೊಣೆಯೂ ಸಂಪಾದಕನದು. ಹೊಣೆಗಾರ ಮಾತ್ರ ಸಂಪಾದಕ; ಅಧಿಕಾರ ಚಲಾವಣೆ ಬೇರೆ ಯಾರದ್ದೋ ಆಗುವುದು ಸರಿಯಾದ ವಿಚಾರವಲ್ಲ. ಹಾಗೆಯೇ ಸಂಪಾದಕ, ಬೇರೊಬ್ಬರ ಅಪೇಕ್ಷೆ–ಅಭಿಪ್ರಾಯಗಳಿಗೆ ಮಣಿಯುವಂತೆ ಆಗುವುದೂ ಸರಿಯಲ್ಲ.

ಸಂಪಾದಕನ ಮೇಲೆ ಬೇರೊಬ್ಬರ ಪ್ರತ್ಯಕ್ಷ ಇಲ್ಲವೇ ಪರೋಕ್ಷ ಹತೋಟಿ ಇರುವ ಹೊಸ ಪ್ರವೃತ್ತಿಯ ಬೆಳಕಿನಲ್ಲಿ, ವೃತ್ತ ಪತ್ರಿಕೆಯ ಸಂಪಾದಕನ ವೈಯಕ್ತಿಕ ಹೊಣೆ ಗಾರಿಕೆಯನ್ನು ಮಿತಿಗೊಳಿಸಿರುವಾಗ, ಸಂಪಾದಕನನ್ನೂ ವೈಯಕ್ತಿಕ ಹೊಣೆಗಾರಿಕೆ ಯಿಂದ ಮುಕ್ತಗೊಳಿಸುವ ಕಾನೂನಿನ ಮಾರ್ಪಾಟಾದರೂ ಅಗತ್ಯವೆನಿಸುತ್ತದೆ. ಹೀಗೆ ಮಾಡಿದಾಗ ಸಂಪಾದಕನಿಗೆ ಪತ್ರಿಕೆಯ ವಹಿವಾಟಿನ ಮೇಲೆ ಒಟ್ಟಿನ ಉಸ್ತುವಾರಿ ಹೊಣೆಗಾರಿಕೆ ಮಾತ್ರ ಉಳಿದುಕೊಂಡು ನಾನಾ ವಿಭಾಗಗಳ ಮುಖ್ಯಸ್ಥರ ಹೊಣೆಗಾರಿ

ಕೆಯೂ ಸ್ಪಷ್ಟವಾಗಬೇಕಾಗುತ್ತದೆ. ಇಂಥದೊಂದು ವ್ಯವಸ್ಥೆಯಾದರೆ, ಲೇಖನ–ವರದಿ ಇಲ್ಲವೇ ವಿಜ್ಞಾಪನೆಗಳ ಅಂಗೀಕಾರ–ತಿರಸ್ಕಾರಗಳ ವಿಚಾರದಲ್ಲಿ ವಿಭಾಗೀಯ ಪ್ರಮುಖರು ಹೆಚ್ಚಿನ ಉತ್ತರದಾಯಿತ್ವವನ್ನು ಚಲಾಯಿಸಲು ಸಾಧ್ಯವಾಗುತ್ತದೆ. ನೈತಿಕ ಮತ್ತು ಕಾನೂನಿನ ಹೊಣೆಗಾರಿಕೆಯ ಅರಿವೂ ಉಂಟಾಗುತ್ತದೆ. ಹೀಗೆ ಪತ್ರಿಕೆಯ ಪ್ರಕಟನೆಯಲ್ಲಿ ಪತ್ರಕರ್ತರೆಲ್ಲರ ಸಾಮೂಹಿಕ ಉತ್ತರದಾಯಿತ್ವ ವ್ಯಕ್ತಗೊಳ್ಳುತ್ತದೆ. ಪತ್ರಿಕೆಯಲ್ಲಿ ವಸ್ತುವೈವಿಧ್ಯವೂ ಹೆಚ್ಚಿ, ವ್ಯಕ್ತಿಯ ಸ್ವಾತಂತ್ರ್ಯದ ವ್ಯಾಪ್ತಿಯೂ ಹಿಗ್ಗುತ್ತದೆ. ಪತ್ರಿಕೆ ಪ್ರಕಟಿಸಿದ ಎಲ್ಲ ವಸ್ತು–ವಿಷಯಗಳೂ ಒಬ್ಬನೇ ವ್ಯಕ್ತಿಯ ಸಮ್ಮತಿಯನ್ನು ಅವಲಂಬಿಸಿಕೊಂಡಿರಬೇಕಾದ ಸನ್ನಿವೇಶ ತಪ್ಪುತ್ತದೆ. ಪತ್ರಿಕಾ ಸಂಪಾದಕನ ಬಗ್ಗೆ ಜನಸಾಧಾರಣರ ಕಲ್ಪನೆಯೇನಿದೆ? "ಸಂಗ್ರಹಿಸಿದ ಎಲ್ಲ ವರದಿಗಳನ್ನು ನಿರ್ಭಿಡೆಯಿಂದ ಪ್ರಕಟಿಸುವುದಷ್ಟೇ ಅಲ್ಲದೆ ಅವುಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ದಯೆ–ದಾಕ್ಷಿಣ್ಯಗಳಿಗೆ ಒಳಗಾಗದೆ, ಯಾರೊಬ್ಬರ ಪ್ರಭಾವಕ್ಕೂ ಮಣಿಯದೆ, ಅಂಜದೆ ಪ್ರಕಟಿಸುವ ಪಕ್ಷಾತೀತ ವ್ಯಕ್ತಿ". ನೇಮಕವಾಗುವುದಂತೂ ಸಂಪಾದಕ ಇದೊಂದೇ ಧ್ಯೇಯಾದರ್ಶಕ್ಕಾಗಿ. ಪತ್ರಿಕೆಯ ಸಂಪಾದಕನ ಹೆಸರನ್ನು ಪ್ರಕಟಿಸಿದ ಕೂಡಲೇ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಎಲ್ಲ ವರದಿ-ವ್ಯಾಖ್ಯಾನಗಳು ಸಂಪಾದಕನಿಗೆ ಸೇರಿದ್ದು ಮಾಲೀಕನ ಕೈವಾಡವಿಲ್ಲವೆಂದೇ ಅರ್ಥವಾಗುತ್ತದೆ. ಸುದ್ದಿ ಅಥವಾ ವ್ಯಾಖ್ಯಾನಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಪ್ರಕಟನೆಗೆ ತಮ್ಮ ಆಕ್ಷೇಪಣೆಯುಂಟೆಂಬುದನ್ನಂತೂ ಮಾಲಿಕ ತಿಳಿಸುವುದಿಲ್ಲ, ಹೀಗಿರುವುದರಿಂದಲೇ ಸಂಪಾದಕನಿಗೆ ಕಾರ್ಯನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆಯೆಂದೇ ಜನರು ನಂಬಿದ್ದಾರೆ. ಜನತೆಯೇ ನಿರೀಕ್ಷೆಗೆ ತಕ್ಕಹಾಗೆ ಸಂಪಾದಕನ ಕಾರ್ಯನಿರ್ವಹಣೆ ಆಗದಿದ್ದಾಗ. ಜನಮನದಲ್ಲಿ ತದ್ವಿರುದ್ಧ ಅಭಿಪ್ರಾಯ ಮೂಡುತ್ತದೆ. ಸಂಪಾದಕನ ನಿಷ್ಠೆ ಅಥವಾ ಉದ್ದೇಶವನ್ನು ಕುರಿತು ಈ ಬಗೆಯ ಅಭಿಪ್ರಾಯ ಮೂಡಿದಾಗಲೂ ಕೆಲವು ವಿಷಯಗಳನ್ನು ಮಾತ್ರ ಬೆಂಬಲಿಸಲು, ಇನ್ನು ಕೆಲವನ್ನು ವಿರೋಧಿಸಲು ಮಾಲೀಕರೊಡನೆ ಆಗಿರುವ ಒಪ್ಪಂದದಂತೆ ಬದ್ಧನಾಗಿರುವ ವಿಚಾರವನ್ನು ಓದುಗರಿಗೆ ವಿವರಿಸಲು ಸಂಪಾದಕನಿಗೆ ಸಾಧ್ಯವಾಗುವುದಿಲ್ಲ. ಇದರಿಂದ ಸಾರ್ವಜನಿಕರ ಮತ್ತು ಸಂಪಾದಕನ ಸಂಬಂಧದಲ್ಲಿ, ಸಂಪಾದಕ ಅನಾನುಕೂಲ ಸನ್ನಿವೇಶದಲ್ಲಿ ನಿಲ್ಲಬೇಕಾಗುತ್ತದೆ. ಆದ್ದರಿಂದಲೇ ಸಾರ್ವಜನಿಕ ಹಿತ-ದೃಷ್ಟಿಯಿಂದ – ಸಂಪಾದಕನಿಗೆ ನೀಡಿರುವ ಮಾರ್ಗದರ್ಶನದ ವಿಚಾರವನ್ನು ಮಾಲೀಕರು ಪ್ರಕಟಿಸಿಬಿಟ್ಟರೆ, ಯಾವ ನಿಲುವನ್ನು ಪತ್ರಿಕೆ ಸಮರ್ಥಿಸುತ್ತದೆ, ಇಲ್ಲವೇ ವಿರೋಧಿಸುತ್ತದೆ ಎಂಬುದು ಸ್ಪಷ್ಟವಾಗಿ ಓದುವ ಪತ್ರಿಕೆಯನ್ನು ಆಯ್ದುಕೊಳ್ಳುವ ಸಾತಂತ್ರ್ಯವೂ ಅವರಿಗೆ ಲಭ್ಯವಾಗುತ್ತದೆ. ಓದುಗರಾಗಲೀ ಸರ್ಕಾರವಾಗಲೀ ತನ್ನನ್ನು ತಪ್ಪುತಿಳಿದುಕೊಳ್ಳಲು ಸಾಧ್ಯವಿಲ್ಲವೆಂಬುದು ಸಂಪಾದಕನಿಗೆ ಸ್ಪಷ್ಟವಾಗುವುದರಿಂದ ಅವನ ಅಳುಕೂ ಇಲ್ಲವಾಗುತ್ತದೆ.

ಸಾರ್ವಜನಿಕ ಹಿತವನ್ನು ಕಾಯಬೇಕಾದ ಮಂತ್ರಿಯಂತೆಯೇ ಪತ್ರಿಕಾ ಸಂಪಾದಕನೂ ಸಾರ್ವಜನಿಕ ಕಾರ್ಯಕರ್ತನೇ ಆಗಿರುವುದರಿಂದ ಮಂತ್ರಿಯ ನೇಮಕದ ಪರತ್ತು

ಗಳು ಬಹಿರಂಗಗೊಳ್ಳುವಂತೆಯೇ ಸಂಪಾದಕನ ನೇಮಕದ ಹಿಂದಿರುವ ವಿಧಿ–ನಿಶೇಧ ಗಳೂ ಪ್ರಕಟವಾಗಬೇಕು. ನಮ್ಮಲ್ಲಿ ಪತ್ರಿಕೆಗಳ ಒಡತನ ಖಾಸಗಿ ವಲಯದಲ್ಲಿ ಇರುವುದರಿಂದ ಮೇಲೆ ಕಾಣಿಸಿದ ನೇರ ವ್ಯವಹಾರದ ಮೂಲಕ, ಸರ್ಕಾರ ಹಾಗೂ ರಾಜಕೀಯ ಪಕ್ಷಗಳ ಜೊತೆ ತನ್ನ ಸಂಬಂಧವನ್ನು ನೆಟ್ಟಗಿಟ್ಟುಕೊಳ್ಳಲು ಸಂಪಾದಕನಿಗೂ ಸಾಧ್ಯವಾಗುತ್ತದೆ.

ಕೆಲವು ನಿರ್ದಿಷ್ಟ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಇಲ್ಲವೇ ಟೀಕಿಸಲು ಸಂಪಾದಕನ ಮೇಲೆ, ಪತ್ರಕರ್ತರ ಮೇಲೆ ರಾಜಕೀಯ ಒತ್ತಡ ಈ ದಿನಗಳಲ್ಲಿ ನಿತ್ಯ ಸಾಮಾನ್ಯ. ಸಂಪಾದಕ, ಒಂದು ನಿರ್ದಿಷ್ಟ ಮಿತಿಯನ್ನು ದಾಟಲಾರನೆಂಬುದು ಬಹಿರಂಗವಾಗಿಬಿಟ್ಟಿದ್ದರೆ ಅಷ್ಟರ ಮಟ್ಟಿಗೆ ಅವನ ಮೇಲಿನ ಒತ್ತಡವೂ ಮಿತಿ ಗೊಳ್ಳುತ್ತದೆ.

ಸರ್ಕಾರವೂ ನಿಯತ ಕಾಲಿಕಗಳ ಮೂಲಕ ತನ್ನ ಸಾಧನೆ ಧೋರಣೆಗಳನ್ನು ಪ್ರಕಟಿಸಿಕೊಳ್ಳುವ ಪರಿಪಾಠ ಬೆಳೆಯುತ್ತಲೇ ಇದೆ. ಒಂದು ರಾಜ್ಯ ಸರ್ಕಾರ ತನ್ನದೇ ಆದ ಒಂದು ದಿನ ಪತ್ರಿಕೆಯನ್ನೂ ಪ್ರಕಟಿಸುತ್ತದೆ. ಅಲ್ಲಿ ಕೂಡ ಸಂಪಾದಕನ ಸ್ವಾತಂತ್ರ್ಯದ ಮೇಲೆ ಆಘಾತ ನಡೆದಾಗ ಅತ್ಯಂತ ಪ್ರತಿಷ್ಠಿತರೆನಿಸಿದ್ದ ಸಂಪಾದಕರು ಪ್ರತಿಭಟನಾ ಪೂರ್ವಕರಾಗಿ ಹುದ್ದೆಯನ್ನು ತೆರವು ಮಾಡಿದ್ದುಂಟು. ಅಂದರೆ ಸರ್ಕಾರ ಗಳೂ ತಮ್ಮ ಪತ್ರಿಕೆಗಳಿಗೆ ಸಂಪಾದಕರನ್ನು ನೇಮಿಸಿಕೊಳ್ಳುವಾಗ, ತಮ್ಮ ಅಪೇಕ್ಷೆ ಹಾಗೂ ಸಂಪಾದಕರ ಇತಿಮಿತಿಗಳನ್ನು ಸುಸ್ಪಷ್ಟಗೊಳಿಸಬೇಕಾದ ಅಗತ್ಯವಿದೆ. ಹೀಗಾದಾಗ ಎಷ್ಟರಮಟ್ಟಿಗೆ ಜನತೆಯ ಹಣವನ್ನು ಬಳಸಿ ಸರ್ಕಾರ ದಿನಪತ್ರಿಕೆ ಅಥವಾ ನಿಯತಕಾಲಿಕವನ್ನು ನಡೆಸುವ ಹೊಣೆ ನಿರ್ವಹಿಸಬಹುದು ; ಇದರಲ್ಲಿ ಎಷ್ಟರಮಟ್ಟಿನ ಜನಹಿತದ ಭಾವನೆಯಿದೆ ; ವಾರ್ತಾವಾಹಿನಿಯ ಪ್ರವಹನಕ್ಕೆ ಎಷ್ಟು ಸ್ವಾತಂತ್ರ್ಯವಿದೆ. ಮತ್ತು ವೆಚ್ಚ ಎಷ್ಟು ಸಮರ್ಥನೀಯವೆಂಬುದನ್ನು ತೀರ್ಮಾನಿಸಿಕೊಳ್ಳಲು ತೆರಿಗೆ ದಾರರಿಗೆ ಸಾಧ್ಯವಾಗುತ್ತದೆ.

ವಿಜ್ಞಾಪನದಾರ ಸಂಪಾದಕರ ಸಂಬಂಧವಂತೂ ಇತ್ತೀಚಿನ ದಿನಗಳಲ್ಲಿ ಅವನತಿ ಮುಖವಾಗಿಯೇ ಸಾಗಿದೆ. ಸಂಪಾದಕನ ಘನತೆ, ಸತತ ಸವೆತವನ್ನು ಅನುಭವಿಸುತ್ತಿದೆ. ಸಣ್ಣಪುಟ್ಟ ಪತ್ರಿಕೆಗಳ ಮಾತು ಹಾಗಿರಲಿ, ವ್ಯಾಪಕ ಪ್ರಸಾರವುಳ್ಳ, ಹಣಕಾಸಿನ ದೃಷ್ಟಿಯಿಂದ ಸುಭದ್ರವಾಗಿರುವ ಪತ್ರಿಕೆಗಳಲ್ಲೂ ಅನೇಕ ವಾಣಿಜ್ಯ ಸಂಸ್ಥೆ–ಉದ್ದಿಮೆ ಸದನಗಳ ವೃತ್ತಿ ವಹಿವಾಟಿನ ವಾರ್ತೆಗಳು ಪತ್ರಿಕೆಯ ಸುದ್ದಿ ಅಂಕಣದಲ್ಲೇ ಬೆಳಕು ಕಾಣುತ್ತದೆ. ಹೊಸದಾದ ದಂತಧಾವನಚೂರ್ಣ ಇಲ್ಲವೇ ಮೈ ಸಾಬೂನಿನ ಮಾರು ಕಟ್ಟೆ ಪ್ರವೇಶದ ಸಮಾರಂಭಗಳೂ ಸುದ್ದಿಯಾಗಿ ಬೆಳಕರಿಸುತ್ತದೆ. ಇನ್ನೂ ವಿಶೇಷ ವಾದ ಅಂಶವೆಂದರೆ ಕೆಲವು ಪ್ರಕಟಣೆಗಳಿಗಾಗಿ ಪತ್ರಿಕೆಗೆ ಸಂಬಂಧಿಸಿವವರಿಂದ

ಜಾಹೀರಾತೆಂದು ಹಣ ಪಡೆದಿದ್ದು, ಅದು ಜಾಹೀರಾತೆಂಬ ಸೂಚನೆಯನ್ನು ಓದುಗರಿಗೆ ನೀಡದೆ ಪ್ರಕಟಿಸುವುದು ಹೆಚ್ಚಾಗುತ್ತಿದೆ.

ವಾಣಿಜ್ಯ ಸಂಸ್ಥೆಯು ಇಲ್ಲವೇ ಉದ್ದಿಮೆ ಘಟಕಗಳ ವೃತ್ತಿ ಪ್ರಯೋಜನಕಾರಿ ಸಮಾರಂಭಗಳ ವರದಿಯನ್ನು ಪ್ರಕಟಿಸುವಂತೆ, ಪತ್ರಿಕೆಯ ವಿಜ್ಞಾಪನೆಗಳ ವಿಭಾಗದ ಮುಖ್ಯಸ್ಥರೇ ಸಂಪಾದಕರ ಮೇಲೆ ಅಸಹನೀಯ ಒತ್ತಡ ತರುವುದೂ ಸಾಮಾನ್ಯ ಸಂಗತಿ. ಇದರಿಂದ ಸಾರ್ವಜನಿಕ ಹಿತದೃಷ್ಟಿ ಮಂಕಾಗುತ್ತದೆ. ಇದನ್ನು ತಡೆಗಟ್ಟ ಬಲ್ಲ ವ್ಯವಸ್ಥೆ ಪತ್ರಿಕಾ ಮಂಡಲಿ. ಪತ್ರಿಕಾ ಧರ್ಮಕ್ಕೆ ಹೊಂದಿಕೊಳ್ಳುವ ಅಹಿತಕರ ವಾರ್ತೆಗಳ ಪ್ರಕಾಶನಕ್ಕೆ ಸಹಕರಿಸುವ ಪತ್ರಿಕೆಗಳ ಮತ್ತು ವಾಣಿಜ್ಯ ಉದ್ದಿಮೆ ಸಂಸ್ಥೆಯ ಜೊತೆ ಯಾವುದೇ ವಿಶೇಷ ರೀತಿಯ ಸಂಬಂಧ ಪಡೆದಿರದ ಮತ್ತು ನಿರ್ದಿಷ್ಟ ಮೌಲ್ಯ ಮತ್ತು ಸತ್ಯ ಪ್ರತಿ ಸಾಧನೆಗೆ ತಮ್ಮನ್ನು ತೆಸ್ಸುಕೊಂಡ ಪತ್ರಿಕೆಗಳ ನಡುವೆ ಜಾಹೀರಾತುದಾರರು ಯಾವುದೇ ತಾರತಮ್ಯವೆಸಗದಂತೆ ನೀತಿ ಸೂತ್ರವನ್ನು ಪತ್ರಿಕಾ ಮಂಡಲಿ ರೂಪಿಸಿ ಜಾರಿಗೆ ತರಬೇಕು.

ತಮ್ಮ ಅಗಳಿಕೆಯನ್ನು ಸಮಾರಂಭಗಳ ಮೂಲಕ ಇಲ್ಲವೇ ವಾರ್ತಾಗೋಷ್ಠಿಗಳ ಮೂಲಕ ಜಾಹೀರು ಮಾಡಿಕೊಳ್ಳುವ ಉದ್ದಿಮೆಯ-ವಾಣಿಜ್ಯ ಸಂಸ್ಥೆಗಳು, ತಮ್ಮ ಸಂಸ್ಥೆಗೆ ಸಂಬಂಧಿಸಿದ ಎಲ್ಲ ಸುದ್ದಿಯನ್ನೂ ಬಹಿರಂಗಗೊಳಿಸುವುದನ್ನು ಸಹಿಸುವುದಿಲ್ಲ. ಸಂಸ್ಥೆಯ ಮೇಲಿನ ಆದಾಯ ತೆರಿಗೆ ದೋಷಾರೋಪ, ಕಾರ್ಮಿಕರ ಮುಷ್ಕರ ಅಥವಾ ಚಟುವಟಿಕೆಗಳನ್ನು ಅಡಗಿಸಿಡಬೇಕೆಂಬ ಅಪೇಕ್ಷೆ ವ್ಯಕ್ತಗೊಳಿಸುತ್ತವೆ. (ಹೆಸರಾಂತ ಭೋಜನ-ವಸತಿಗೃಹ ಒಂದರಲ್ಲಿ ಆಹಾರದ ದೋಷದಿಂದ ಸುಮಾರು 60 ಮಂದಿ ಸಂಕಟಕ್ಕೀಡಾಗಿ ಆಸ್ಪತ್ರೆ ಸೇರಿದ ಸುದ್ದಿಯೂ ಬೆಳಕು ಕಾಣದೇ ಹೋಯಿತು.) ಹೀಗೆ ಜಾಹಿರಾತುದಾರ ಪ್ರವೃತ್ತಿ ಮೂಲಕವಾದ ನಿಯಂತ್ರಣ ಹೊಂದಿರುವಷ್ಟೇ ನಿವೃತ್ತಿ ಮೂಲಕ ನಿಯಂತ್ರಣವನ್ನು ಸಂಪಾದಕನ ಮೇಲೆ ಚಲಾಯಿಸುವುದುಂಟು. ಚಲನ ಚಿತ್ರರಂಗವಂತೂ ಈ ದಿಸೆಯಲ್ಲಿ ಒಂದು ದಾಖಲೆಯನ್ನೇ ಸೃಷ್ಟಿಸಿದೆ.

ಮೇಲೆ ಹೇಳಿದ ಎಲ್ಲ ಬಗೆಯ ವಿರಸ-ಘರ್ಷಣೆಯ ದಾರಿಗೆ ಹೊರತಾಗಿ ಮಾಲಿಕರ ಸದ್ಭಾವನೆಯನ್ನು ಗಳಿಸಿಕೊಂಡಿರುವ ಸಂಪಾದಕರು ಬೇರೊಂದು ಪಾತ್ರ ವನ್ನೂ ನಿರ್ವಹಿಸುತ್ತಾರೆ, ಸಂಪಾದಕರೇ ತಪ್ಪೆಸಗಿದಾಗ ಅವನನ್ನು ಸರಿದಾರಿಗೆ ಎಳೆಯುವ ಇಲ್ಲವೇ ಒಲಿಸಿಕೊಳ್ಳುವ ಸಾಧನಗಳಿಂದ ವಂಚಿತರಾದ ದುರ್ಬಲರ ಮೇಲೆ ಅವರು ಸರ್ವಾಧಿಕಾರಿಗಳಂತೆ ಎರಗುತ್ತಾರೆ. ಇಂಥ ಆಪತ್ತನ್ನು ತಡೆಗಟ್ಟಲು ಪತ್ರಿಕಾ ಮಂಡಲಿ ಇದೆ, ನಿಜ. ಆದರೆ ಪತ್ರಿಕೆಗೆ ಜಾಹೀರಾತನ್ನು ತಡೆಗಟ್ಟಿದ ಸರ್ಕಾರಗಳಿಗೆ ಛೀಮಾರಿ ಹಾಕುವುದನ್ನು ಬಿಟ್ಟರೆ, ವಾರ್ತಾ ಪ್ರಕಟನ ಸ್ವಾತಂತ್ರ್ಯ ಮತ್ತು ಪತ್ರ ವೃತ್ತಿ ಧರ್ಮವನ್ನು ಎತ್ತಿ ಹಿಡಿಯುವ ದಿಸೆಯಲ್ಲಿ ಆಗಿರುವ ಅದರ ಸಾಧನೆ ಶೂನ್ಯಕ್ಕೆ

ಸಮನಾಗಿದೆ. ಮುಂಬೈ ನಗರದಲ್ಲಿ ನಡೆದ ಒಂದು ಪ್ರಸಂಗ—ಘನತೆ ತೆತ್ತ ಪತ್ರಿಕೆಗೆ ಒಬ್ಬ ಸಂಗೀತ ವಿಮರ್ಶಕ ಸರ್ಕಾರಿ ಸೇವಾ ನಿಯಮವನ್ನು ಉಲ್ಲಂಘಿಸಿ ನಿತ್ಯದ ಕಸಬೆನ್ನುವಂತೆ ದಿನ ಪತ್ರಿಕೆಯ ಕೆಲಸ ಮಾಡುತ್ತಿರುವ ವ್ಯಕ್ತಿಗೆ ಸಂಪಾದಕರ ಸಹಕಾರ· ಸಂಗೀತಗೋಷ್ಠಿ ಪತ್ರಿಕೆಯವರ ಸಲುವಾಗಿ ಅಲ್ಲವೆಂಬುದನ್ನು ಪೂರ್ವಭಾವಿಯಾಗಿ ಸ್ಪಷ್ಟಪಡಿಸಿದ್ದರೂ ಈ ಸರ್ಕಾರಿ ನೌಕರ ವಿಮರ್ಶಕ, ಸಂಗೀತಗೋಷ್ಠಿಯನ್ನು ವಿಮರ್ಶಿಸದೆ ಬಿಡಲಿಲ್ಲ. ತುಂಬಾ ಬಣ್ಣಕಟ್ಟಿದ, ಪೂರ್ವಗ್ರಹಭಾವದಿಂದ ಕೂಡಿದ ಬರಹದಲ್ಲಿ ಕಲಾವಿದನ ನೈಪುಣ್ಯದ ಉಲ್ಲೇಖನವೇ ಇರಲಿಲ್ಲ. ವಿಮರ್ಶಕನ ಈ ಬಗೆಯ ವೃತ್ತಿಧರ್ಮದ ಉಲ್ಲಂಘನೆಯನ್ನು ಪ್ರಕಟಿಸಿದ ಬರಹ ಪತ್ರಿಕೆಯ ಕೈ ತಲುಪಿದಾಗ, ವಿಮರ್ಶಕನಿಗೆ ಪ್ರತಿಕೂಲಕರವಲ್ಲದ ಭಾಗಗಳನ್ನು ಮಾತ್ರ ಪ್ರಕಟಿಸಲಾಯಿತು. ಇದನ್ನೂ ಪ್ರತಿಭಟಿಸಿದ ಬರಹವನ್ನು ಕಳುಹಿಸಿದಾಗ ಅದನ್ನು ಸಂಪಾದಕರು ಪ್ರಕಟಿಸಲೇ ಇಲ್ಲ; ವೈಯುಕ್ತಿಕವಾಗಿ ವಿವರಣೆಯನ್ನೂ ನೀಡಲಿಲ್ಲ. ಅಂದರೆ ಒಬ್ಬ ಗಾಯಕ-ಕಲಾವಿದನ ಸುಸ್ಪಷ್ಟ ಅಭಿಲಾಷೆಯನ್ನು ಕಡೆಗಣಿಸಿ ಹೇಗೆ ಒಬ್ಬ ಪತ್ರಕರ್ತ ಅತಿಕ್ರಮಿಸಿ ನಡೆಯಬಲ್ಲನೆಂಬುದಕ್ಕೆ ಇದು ಉದಾಹರಣೆ, ಇಲ್ಲಿ ಒಂದು ಪ್ರಶ್ನೆಗೆ ಉತ್ತರ ದೊರಕುವುದಿಲ್ಲ— ಅನೇಕ ಸಂದರ್ಭಗಳಲ್ಲಿ ರಾಜಕಾರಣಿಗಳು ದಾಖಲೆಗೆ ಸೇರದಂತೆ (of the record) ಮಾಡುವ ವಿಮರ್ಶೆಯನ್ನು ಪ್ರಕಟಿಸಲಾಗುತ್ತಿದೆಯೇ ? ರಾಜಕಾರಣಿಗೆ ತೋರಿಸುವಷ್ಟು ಸೌಜನ್ಯ ಕಲಾವಿದನಿಗೂ ತೋರಿಸಬೇಕಾದ ಧರ್ಮಕ್ಕೆ ಚ್ಯುತಿ ಬಂದಂತೆ ಆಗಲಿಲ್ಲವೇ ? ಪ್ರಭಾವಶಾಲಿಗಳಲ್ಲದವರ ಸ್ವಾತಂತ್ರ್ಯದ ಅಪಹರಣಕ್ಕೆ ಸ್ವಾತಂತ್ರ್ಯದ ಪ್ರಬಲ ಪ್ರತಿವಾದಕನಾದ ಸಂಪಾದಕನೂ ನೆರವಾಗುವುದೇತಕ್ಕೆ ? ಸಂಪಾದಕನ ಸ್ವಾತಂತ್ರ್ಯದ ಮೂಲ ಉದ್ದೇಶಕ್ಕೆ ಅಘಾತ ಇದಲ್ಲವೇ ?

ಪ್ರಕಟವಾಗುವ ಎಲ್ಲ ವಿಜ್ಞಾಪನೆ-ಜಾಹೀರಾತುಗಳೂ ಜಾಹೀರಾತುದಾರನ ಅವಶ್ಯಕತೆಗೆ ತಕ್ಕದಾಗಿದೆಯೆ, ಪತ್ರಿಕೆಯ ಇಲ್ಲವೇ ಓದುಗರ ಅಗತ್ಯವನ್ನು ಅದು ಪೂರೈಸುತ್ತದೆಯೆ ಎಂಬುದನ್ನು ಪತ್ರಿಕಾ ಮಂಡಲಿ ನೋಡುತ್ತಾ ಕೂರಬೇಕೆಂದರೆ ವ್ಯಾವಹಾರಿಕವಾಗಲಾರದು. ವೃತ್ತ ಪತ್ರಿಕಾ ಕಾಗದದ ಕೊರತೆ ತೀವ್ರವಾಗಿ ಕಾಡುತ್ತಿರುವಾಗ, ಸುದ್ದಿಯ ಪ್ರಕಟನೆಗೇ ಸ್ಥಳಾವಕಾಶದ ಕೊರತೆ ಕಾಡುತ್ತಿರುವಾಗ, ಕೆಲವೊಂದು ಸಂಸ್ಥೆಗಳು ಜಾಹೀರಾತಿನ ನೆಪದಲ್ಲಿ ಹೆಚ್ಚು ಸ್ಥಳಾವಕಾಶವನ್ನು ಪಡೆಯುತ್ತಿರುವ ಪ್ರವೃತ್ತಿಯನ್ನಾದರೂ ಪತ್ರಿಕಾ ಮಂಡಲಿ ಪ್ರಶ್ನಿಸಬೇಕು—ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕು.

ತಮ್ಮ ಜಾಹಿರಾತಿನ ಹೆಚ್ಚಿನ ಮೊತ್ತದ ದೊಡ್ಡ ಪಾಲನ್ನು ಮುಖ್ಯವಾದ ಸ್ಥಳಗಳಲ್ಲಿ ಪ್ರಕಟವಾಗುವ ಪತ್ರಿಕೆಗಳ ಮೂಲಕವೇ ವೆಚ್ಚಮಾಡುವ ಮೂಲಕ ಗಳಿಸಿಕೊಂಡಿರುವ ಕೆಲವು ಪತ್ರಿಕೆಗಳ ಅಸಾಧಾರಣ ಪ್ರಾಮುಖ್ಯ ಪ್ರಶ್ನಾರ್ಹವಾದ ವಿಷಯು

ವಾಗುತ್ತದೆ. ರಾಜ್ಯ ಸರ್ಕಾರಗಳ ಜಾಹೀರಾತು ನೀತಿಯನ್ನು ವಿಮರ್ಶಿಸುವುದು ಪತ್ರಿಕಾಮಂಡಳಿಯ ವ್ಯಾಪ್ತಿಗೆ ಒಳಪಟ್ಟಮೇಲೆ ಈ ವ್ಯಾಪ್ತಿಯಿಂದ ಕೇಂದ್ರ ಸರ್ಕಾರ ಮತ್ತು ಭಾರಿ ಉದ್ಯಮ ಸದನಗಳು ಹೊರತಾಗಿರಲು ಸಾಧ್ಯವಿಲ್ಲ. ಪುಷ್ಟ ಪತ್ರಿಕೆಗಳು ತಮ್ಮ ಅಂಕಣದ ಗಣನೀಯವಾದ ಪಾಲನ್ನು ಅರ್ಥರಹಿತ ಅಥವಾ ಅಮುಖ್ಯ ಜಾಹೀರಾತಿಗೆ ವಿನಿಯೋಗಿಸುವುದನ್ನು ಪತ್ರಿಕಾಮಂಡಲಿಯ ವ್ಯಾಪ್ತಿಯಿಂದ ಹೊರ ಗಿಡುವುದು ತರ್ಕಬದ್ಧವೆನಿಸುವುದಿಲ್ಲ.

ನಮ್ಮ ದೇಶದ ಅನೇಕ ಸುಸ್ಥಾಪಿತ ಸಂಪಾದಕರಿಗೆ ಸರ್ಕಾರದ ಅಧಿಕಾರಿಗಳಿಗೆ ಇರುವ ಹಾಗೇ ಸಾಮಾನ್ಯ ನಾಗರೀಕರ ಸ್ವಾತಂತ್ರ್ಯದ ಮೇಲೆ ಚೆಲ್ಲಾಟ ನಡೆಸುವ ಅಧಿಕಾರ–ಅವಕಾಶಗಳಿವೆ. ಪೋಲೀಸರು, ಬ್ಯಾಂಕಿನ ಅಧಿಕಾರಿ, ಕೊನೆಗೆ ಒಬ್ಬ ಬಸ್ ಕಂಡಕ್ಟರ್ ಜನಸಾಧಾರಣರ ದೃಷ್ಟಿಯಿಂದ ಎಷ್ಟು ಅಭೇದ್ಯನೋ, ಪತ್ರಿಕಾ ಸಂಪಾದ ಕನೂ ಅಷ್ಟೇ ಅಭೇದ್ಯನಾಗಿರುವುದನ್ನು ಕಾಣುತ್ತೇವೆ. ತನ್ನ ವೃತ್ತಿ-ಸ್ಥಾನದ ಅದ್ರತೆಯನ್ನೂ ಲೆಕ್ಕಿಸದೆ, ನೊಂದವರ, ಅಪಮಾನಕ್ಕೆ ಈಡಾದವರ ನೋವಿಗೆ ನಾಲಿಗೆಯಾಗುವ ಅಪರೂಪದ ಪ್ರಸಂಗಗಳೂ ಉಂಟು. ಆದರೆ ಇದು ಸಂಪಾದಕನ ಸ್ವಾಭಾವಿಕ ವರ್ತನೆಯಾಗಬೇಕಾದರೆ, ವಾರ್ತಾವಾಹಿನಿಯ ಅವಿರತ ಪ್ರವಾಹಕ್ಕೆ ಆಸ್ಪದವಾಗಬೇಕಾದರೆ, ಸಂಪಾದಕನನ್ನು ಅವನ ಇತಿಮಿತಿಗಳಿಂದ ಮುಕ್ತಗೊಳಿಸಲೇ ಬೇಕು.

[ಸ್ವಶ್ರಮ, ಪ್ರತಿಭೆ-ಪ್ರಾಮಾಣಿಕತೆಗಳಿಂದ ಜೀವನದಲ್ಲಿ ಗೆಲವು ಸಾಧಿಸಿದ ದಿವಂಗತ ಸಿ. ನರಸಿಂಹಮೂರ್ತಿಗಳ ನೆನಪಿಗೆ ಲೇಖನ ಅರ್ಪಿತ. ದಕ್ಷ ಅಧಿಕಾರಿಯೆಂದು ಖ್ಯಾತರಾಗಿದ್ದ ನರಸಿಂಹಮೂರ್ತಿಯವರು ಪ್ರಾರಂಭದ ದಿನಗಳಲ್ಲಿ ಪತ್ರಕರ್ತರೂ ಆಗಿದ್ದರೆಂಬುದು ಅಭಿಮಾನದ ಸಂಗತಿ.]

ಮೆಲಕು ಹಾಕೋಣ.....

ಪರ್ವತವಾಣಿ

ಬ್ರಹ್ಮ (ಬ್ರಹ್ಮರಾಕ್ಷಸನೆನ್ನಿ, ನನ್ನ ಅಡ್ಡಿಯಿಲ್ಲ) ಕೆಲವು ಪ್ರಾಣಿಗಳಿಗೆ ಮೆಲಕು ಹಾಕುವ ಕ್ರಿಯೆ ಕೃಪೆ ಮಾಡಿದ್ದಾನೆ. ಇವು ತಿನ್ನುತ್ತವೆ, ಆರಾಮವಾಗಿ ಒಂದು ಕಡೆ ನೆಲಕ್ಕೆ ಉರಳುತ್ತವೆ, ಸಾವಕಾಶವಾಗಿ ತಿಂದದ್ದನ್ನು ಮೆಲಕು ಹಾಕುತ್ತಾ ತೂಕಡಿಸುತ್ತವೆ ಆಹಾಹಾ, ನಾನು ತಿಂದ ಹುಲ್ಲು ಎಷ್ಟು ಹಸಿಯಿತ್ತು! ಆ ಬೂಸ ರುಚಿಯೆಂದರೆ ರುಚಿ! ಹತ್ತಿಕಾಳು, ಒರಳಲ್ಲಿ ಇನ್ನಷ್ಟು ತಿರವಿದ್ದರೆ ಚನ್ನಾಗಿತ್ತು'–ಹೀಗೆ ವಿಚಾರ ಮಾಡುತ್ತವೆಯೆಂದು ನಂಬಲು ಯಾವ ವೈಜ್ಞಾನಿಕ ಆಧಾರವೂ ಇಲ್ಲ. ನಾಲಿಗೆ ಹೊರಳಿಸುವುದನ್ನೂ ಬಾಯಿ ಆಡಿಸುವುದನ್ನೂ, ಜೊಲ್ಲು ಸುರಿಸುವುದನ್ನೂ ನಾವು ಕಣ್ಣಿನಿಂದ ನೋಡುತ್ತೇವಾದರೂ, ಆ ಸಮಯದಲ್ಲಿ ಇವು ತಮ್ಮ ತಲೆಗಳನ್ನು ಉಪಯೋಗಿಸಿ 'ಚಿಂತನ' ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆಯೆಂದು ವಾದಿಸುವುದು ಹುಚ್ಚುತನ. ಈ ಚರ್ಯೆಗಳಿಂದ ತಿಂದ ಗ್ರಾಸ ಜೀರ್ಣವಾಗುತ್ತಿದೆಯೆಂದು ಒಪ್ಪಿಕೊಳ್ಳಬಹುದೇ ವಿನಾ, ಸದರಿ ಪ್ರಾಣಿಗಳಿಗೆ ಬೇರೆ ಯಾವ ಲಾಭವೂ ಇಲ್ಲವೆಂದು ಎಲ್ಲ ಪಕ್ಷಗಳ ಆಣೆಯೂ ಇಟ್ಟುಕೊಳ್ಳಬಹುದು.

'ಮಾನವಜನ್ಮ ದೊಡ್ಡ' ದೆಂದು ದಾಸರು ಹಾಡಿದ್ದಾರೆ. ದೊಡ್ಡದೆಂದರೆ ಎತ್ತರದಲ್ಲೇ? ಒಂಟೆಯ ಎತ್ತರ ಯಾರಿದ್ದಾರೆ? ಗಾತ್ರದಲ್ಲೇ? ಹಿಪ್ಪೋ ಮುಂದೆ ನಾವೇ? ಮತ್ತೆ? ಹಾವು ವಾಸಕ್ಕೆ 'ಹುತ್ತ' ಹುಡುಕಿದರೆ. ನಾವು ಮಲ್ಲೇಶ್ವರದಲ್ಲಿ ಮೂರು ಮಹಡಿಮನೆ ಕಟ್ಟಿಕೊಳ್ಳುತ್ತೇವೆಂದೇ? ಸಿಂಹ ವನರಾಜನೇ ಆದರೂ ಒಂದು ಸ್ಲೀವ್‌ಲೆಸ್ ಬನಿಯನ್ನಿಗೆ ಗತಿಯಿದೆಯೇ? ಆನೆಗೆ ನಾಲ್ಕು ಕಾಲುಗಳಿರಬಹುದು ಚಡ್ಡಿ ಹಾಕಿದ್ದು ಯಾರಾದರೂ ನೋಡಿದ್ದಾರೆಯೇ? ಅದೇ ನಾವು ಬನಿಯನ್ನು ಮೇಲೆ ಷರಟು, ಮೇಲೆ ಕೋಟು ಅದರ ಮೇಲೆ ಓವರ್ ಕೋಟು; ಪೆಟ್ಟಿ ಕೋಟು–ಸೀರೆ ಬ್ಲೌಸ್, ಮಿನಿ ಮ್ಯಾಕ್ಸಿ– ಎಷ್ಟು ಬಗೆ! ನರಿ ಸಿಗರೇಟು ಸೇದುತ್ತದೆಯೇ? ನಾಯಿ ಬಿರಿಯಾನಿ ತಿನ್ನುತ್ತದೆಯೇ? ಜಿಂಕೆ ಜಿನ್ ಕುಡಿಯುತ್ತದೆಯೇ? ನಾವು ತಿನ್ನದಿರುವುದಾವುದು, ಕುಡಿಯದಿರುವುದಾವುದು, ಸೇದದ ಬೀಡಿ, ಚುಟ್ಟ, ಅಗಿಯದ ಎಲೆ ಅಡಿಕೆ, ಎಲ್ಲಿದೆ ಜಗತ್ತಿನಲ್ಲಿ? ಇನ್ನು ಮನರಂಜನೆ. ದನ, ಕರು, ಎಮ್ಮೆ ಕೋಣ ಸಿನಿಮಾ ಟೆಂಟ್‌ಗಳ ಹೊರಗೆ ಹೋಗಿಬರುವವರಿಗೆ ಅಡ್ಡಲಾಗಿ ಬಿದ್ದುಗೊಂಡಿರುತ್ತವೆಯೇ ಹೊರತು.

ಒಂದೇ ಒಂದು ' ಷೋ ' ಕೂಡ ನೋಡುವುದಿಲ್ಲವಲ್ಲ! ನಮ್ಮ ವಿದ್ಯಾರ್ಥಿ (ನಿ) ಯರು ? ಕಾಲೇಜಿಗೆ ಹೊತ್ತಾಯಿತ್ತೆಂದು ಗಬಗಬ ಅಡಚಿಕೊಂಡು ತಿಂದು ಓಡಿ, ಕೆಂಪೇಗೌಡ ರಸ್ತೆಯ ಒಂದಲ್ಲ ಒಂದು ಚಿತ್ರಮಂದಿರದ ಕತ್ತಲು ಸೇರುವುದಿಲ್ಲವೇ ? ....ದಾಸರಿಗೆ ಈ ಯಾವ ' ದೊಡ್ಡತನ ' ದ ಪರಿಚಯವೂ ಇರಲ್ಲಿಲ್ಲ. ಅವರ ಅರ್ಥ ಬೇರೆ. ರುಂಡ ಮುಂಡ, ಕೈಕಾಲುಗಳಲ್ಲಿ ಮೂರನೆ ಒಂದು ಭಾಗವಾದ ಮುಂಡ ಮುಖ್ಯ ಭಾಗವೇ. ಹೃದಯ ಶ್ವಾಸಕೋಶಗಳಿವೆ. ರಕ್ತ ಪರಿಚಲನೆ, ಉಸಿರಾಟ ನಿಂತರೆ ಅವುಂಗಳ ಹಾಡಿ ದಂತೆಯೇ, ಸತ್ತಲೆಕ್ಕವೇ! ಕೈಕಾಲುಗಳು ? ಬೇಕು. ಯಾರ ಅಚಾತುರ್ಯದಿಂದಲೋ ಇವು ಇಲ್ಲದೆ ಹೋದರೂ ನಡೆಯುತ್ತದೆ, ಬದುಕು, ಆದರೆ ರುಂಡವಿಲ್ಲದೆ ಮನುಷ್ಯನೆಲ್ಲಿ ಸಾಧ್ಯ ?. ಕೆಲವರ ಮಂಡೆಯಲ್ಲಿ ಕಳಿಮುದ್ದೆ ದಂಡಿಯಾಗಿ ತುಂಬಿಕೊಂಡಿದ್ದರೂ, ಸಾಮಾನ್ಯವಾಗಿ ಒಬ್ಬ ಮನುಷ್ಯ ಯೋಗ್ಯನೋ, ಅಯೋಗ್ಯನೋ, ಜಾಣನೋ, ಕೋಣನೋ, ಆಳೋ, ಅರಸನೋ ಏನೋ ಆಗಲೆಂದು ನಿರ್ಣಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇರುವುದು ಒಂದು ಹಿಡಿಯಷ್ಟು, ಕೆಲಸ ಕಿಡಿಯಲ್ಲ, ಕಾಳ್ಗಿಚ್ಚು ! ಆಟಂಬಾಂಬಿನಷ್ಟು !

ಇತರ ಜೀವರಾಶಿಗಳು ತಿಂದು, ಕುಡಿದು, ಮಲಗಿ, ಮಲ್ಟಿಪ್ಲೈ ಮಾಡಿ ತಮ್ಮ ಕತೆ ಮುಗಿಸುತ್ತವೆ, ಮನುಷ್ಯನೂ ಇವೆಲ್ಲ ಮಾಡುತ್ತಾನೆ. ಜೊತೆಗೆ ಯೋಚಿಸುತ್ತಾನೆ. ಇತರ ಪ್ರಾಣಿಗಳಿಂದ ' ಬೇರೆ ' ಯಾಗುತ್ತಾನೆ. ' ದೊಡ್ಡ ' ವನಾಗುತ್ತಾನೆ.

ಯೋಚನೆ ಮಾಡುತ್ತಾನೆ, ಕೆಲಸ ಮಾಡುತ್ತಾನೆ. ಮೆಲುಕು ಹಾಕಬಹುದು, ಹಾಕುವುದಿಲ್ಲ, ಹಾಕುತ್ತಿಲ್ಲ.

ನಮ್ಮ ರಂಗಭೂಮಿಯ ನಿದರ್ಶನವನ್ನೇ ತೆಗೆದುಕೊಳ್ಳೋಣ. ಒಂದು ಕಡೆ ಒಬ್ಬರು ನಮ್ಮ ರಂಗಭೂಮಿಯೇ ಇಲ್ಲವೆಂದು ಹೇಳಿದರೆ, ಇದರ ವಿರುದ್ಧವಾಗಿ ರಂಗಭೂಮಿ ಹಿಂದೆ ಇರಲೇ ಇಲ್ಲ, ಇರುವುದು ಇವತ್ತೇ ಅದು ನಮ್ಮದೇ ಎಂದು ಕೆಲವರು ಹೇಳಿಕೊಳ್ಳುತ್ತಾ ಹೇಳಿಸಿಕೊಳ್ಳುತ್ತಾ ಇದ್ದಾರೆ. ಯಾರು ಸರಿ, ಯಾರು ತಪ್ಪು ? ಮೆಲಕು ಹಾಕಿದರೆ ತಾನೇ ಇತ್ಯರ್ಥವಾಗುತ್ತದೆ.

ಹಳ್ಳಿಗಳ ಕಡೆ ಯಕ್ಷಗಾನ ಬಯಲಾಟಗಳ ಪ್ರದರ್ಶನ ಯಶಸ್ವಿಯಾಗಿ ನಡೆಯು ತ್ತಿದ್ದವು. ನಗರಗಳಲ್ಲಿ ವೃತ್ತಿ ಕಂಪನಿಗಳು ಹುಟ್ಟಿಕೊಂಡು ಅದೇ ದೇವರ ಕತೆಗಳನ್ನು ವಸ್ತುವಾಗಿ ಇಟ್ಟುಕೊಂಡು ಮಾರ್ಗ ಬೇರೆ ಮಾಡಿಕೊಂಡು ಅಪಾರ ಯಶಸ್ಸು ಸಂಪಾ ದಿಸಿದವು. ಕರ್ನಾಟಕದ ಹೊರಗೂ ಹೋಗಿ ಹೆಸರು–ಹಣ ಗಳಿಸಿದವು. ವೀರಣ್ಣ ವರದಾಚಾರ್ಯರಂಥವರು ಬೇರೆ ಬೇರೆ ಭಾಷೆಯ ಪ್ರೇಕ್ಷಕರಿಂದ ' ಸೈ ' ಅನ್ನಿಸಿಕೊಂಡು ಕರ್ನಾಟಕಕ್ಕೆ ಕೀರ್ತಿ ತಂದರು.

ಕೈಲಾಸಂ ಮತ್ತು ಅವರ ಕಾಲದವರು 'ಬೆಳೆಯಿಸಿದರು'. ನಾಟಕಗಳ ರಚನೆ ಯಾದವು. ಪ್ರದರ್ಶನಗಳಾದವು. ನಾಟಕ ಸಾಹಿತ್ಯ, ಕಲೆ ಬೆಳೆಯಿತೆಂದು ಎಲ್ಲರೂ ಮೆಚ್ಚಿಕೊಂಡರು.

ಬೇರೆ ಹೊಸದು ಮಾಡಬೇಕೆಂಬ ಬಯಕೆ. ಅಸಂಗತ ನಾಟಕಗಳು ಹುಟ್ಟಿ ಕೊಂಡವು. ಕೆಲವು ಕಾಲ ಸಿಕ್ಕಾಪಟ್ಟೆ ಮೀಸೆ ತಿರುಗಿಸಿ, ಕೂದಲೆಲ್ಲಾ ಕಿತ್ತುಹೋದ ಮೇಲೆ ಕಣ್ಮರೆಯಾದವು. ಇದ್ದಕಿದ್ದ ಹಾಗೆ ಭೂತ ಪ್ರೇತಗಳ ಕತೆ, ಮೂಢನಂಬಿಕೆಗಳ ಕತೆ, ಜಾನಪದದ ಹೆಸರಿನಲ್ಲಿ ಬಗೆಬಗೆಯ ಮಸಾಲೆ – ಇವು ಬಂದವು. ಸಂದಿಯಲ್ಲಿ ಪ್ರಚಾರ–ಅಪಪ್ರಚಾರ ನಾಟಕಗಳ ಸಮಾರಾಧನೆ.

ಯಕ್ಷಗಾನ ನಾಟಕಗಳಲ್ಲಿ ಸುಧಾರಣೆ! ಹಳೆಯಂವು 'ಒರಟು'. ಈಗ 'ನಯ' ಬೇಕು. ಪಿಟೀಲು ಮೃದಂಗಗಳ ಆಕ್ರಮಣ! ಕೆಲವೇ ವರ್ಷಗಳಲ್ಲಿ ಆ ವೇಷಭೂಷಣ ಗಳೂ 'ಸುಧಾರಿಕೆ'ಗೊಂಡು 'ಸಹಜ'ವಾಗಬಹುದು!

ನಗರಗಳ ಕಡೆ ಸಮಸಾಮಾಯಿಕ ವಸ್ತು, ಸಮಸಾಮಾಯಿಕ ಭಾಷೆ, ಡೆಲ್ಲಿಯ ತಂತ್ರ, ಬಂಗಾಳದ ಮಂತ್ರ – ಏನೇನೋ–

ಮಲಗಿಲ್ಲ. ಎದ್ದಿದ್ದೇವೆ. ಆದರೆ ನಿಜವಾಗಿ ನಾಟಕವೆಂದರೇನು, ಅದರ ಉದ್ದೇಶವೇನು, ಹಿಂದಿನವರು ಎಷ್ಟು ತಿಳಿದು ಏನು ಸಾಧಿಸಿದರು, ನಾವು ಇಂದು ಮಾಡುತ್ತಿರುವುದು ಏನು–ಸಿಪ್ಪೆ ಮುಖ್ಯವೇ, ಹಣ್ಣು ಮುಖ್ಯವೇ, ಚಿಪ್ಪು ಮುಖ್ಯವೇ, ಮುತ್ತು ಮುಖ್ಯವೇ – ಮೆಲುಕು ಹಾಕೋಣ.

ಆಡಳಿತದಲ್ಲಿ ಕನ್ನಡ . . . .

ಸಿ. ನರಸಿಂಹಮೂರ್ತಿ

' ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು. ಕನ್ನಡಂ ಕತ್ತೂರಿಯಲ್ತೆ ! ' ಎಂದಳು ಮುದ್ದಣನ ಮನೋರಮೆ,

ಗಂಧದ ಕಾರ್ಖಾನೆಯಲ್ಲಿ ಕೆಲಸಮಾಡುವವರ ನಾಸಿಕಕ್ಕೆ ಶ್ರೀಗಂಧದ ಸೌರಭ ತಟ್ಟುವುದಿಲ್ಲವಂತೆ. ಹಾಗೆಯೇ ಕನ್ನಡಿಗರಿಗೆ ಕನ್ನಡ ಕತ್ತುರಿಯ ಪರಿಮಳ ಅನುಭವಕ್ಕೆ ತಾನಾಗಿಯೇ ಬರದಿರಬಹುದು. ಕನ್ನಡದ ಚೇತನವನ್ನೂ ಅದರ ಸಾಹಿತ್ಯ ಸಂಪತ್ತನ್ನೂ ಆದರ ವ್ಯವಹಾರ ಸಾಮರ್ಥ್ಯವನ್ನೂ ನನ್ನಂತಹ ಸಾವಿರಾರು ವಿದ್ಯಾರ್ಥಿಗಳಿಗೆ ಪೂಜ್ಯ ಗುರುಗಳಾದ ಶ್ರೀ ವೆಂಕಣ್ಣಯ್ಯನವರು ಪರಿಚಯಮಾಡಿ ಕೊಟ್ಟರು. ಕನ್ನಡದ ಬಗ್ಗೆ ಬೂದಿ ಮುಚ್ಚಿದ ವಿಶ್ವಾಸದ ಕಿಡಿಯನ್ನು ಪ್ರಜ್ವಲಿಸಿದರು. ಕೇವಲ ಒಂದು ವರುಷಕಾಲ ಮಾತ್ರ ನಾನು ಅವರ ವಿದ್ಯಾರ್ಥಿಯಾಗಿದ್ದೆನಾದರೂ ಆ ಅಲ್ಪಕಾಲದಲ್ಲಿಯೇ ಅವರು ನನ್ನಲ್ಲಿ ಕನ್ನಡ ಭಾಷೆಯ ಬಗ್ಗೆ ಕುತೂಹಲ, ಉತ್ಸಾಹ, ಅಭಿಮಾನಗಳು ಅಂಕುರಿಸಿ ಬೆಳೆಯುವಂತೆ ಮಾಡಿದರು. ಪರೀಕ್ಷೆಗಳಿಗಾಗಿ ಮಾತ್ರ ವಿದ್ಯಾರ್ಥಿಗಳನ್ನು ತಯಾರುಮಾಡುವ ಉಪಾಧ್ಯಾಯ ಯಂತ್ರವಾಗಿರಲಿಲ್ಲ ಅವರು. ವಿದ್ಯಾರ್ಥಿಗಳ ಬುದ್ಧಿ ಮತ್ತು ಹೃದಯಗಳ ವಿಕಾಸ ಅವರ ಮುಖ್ಯ ಧ್ಯೇಯವಾಗಿತ್ತು. ವಿದ್ಯಾಭ್ಯಾಸದ ಬಗ್ಗೆ ಬರೆಯುತ್ತಾ ಒಂದು ಕಡೆ ರವೀಂದ್ರರು " The main object of teaching is not to explain meanings, but to knock at the door of the mind " ಎಂದಿದ್ದಾರೆ. ತರಗತಿಯಲ್ಲಿ ಪಠ್ಯಪುಸ್ತಕವನ್ನು ಮಾತ್ರ ಓದಿ, ಅದರ ಶಬ್ದಾರ್ಥವನ್ನು – ಪ್ರತಿಪದಾರ್ಥವನ್ನು – ಹೇಳುವಷ್ಟರಿಂದ ತೃಪ್ತರಾಗುತ್ತಿದ್ದವರಲ್ಲ ಅವರು. ತಾವು ಓದುವ ಪಾಠದಿಂದ ವಿದ್ಯಾರ್ಥಿಗಳ ಜೀವನ ವಿಕಾಸಗೊಳ್ಳಬೇಕೆಂಬ ಧ್ಯೇಯವನ್ನು ಹೊಂದಿದ್ದ ಆದರ್ಶ ಗುರು ಶ್ರೀ ವೆಂಕಣ್ಣಯ್ಯನವರು. ಕನ್ನಡ ಕನ್ನಡಿಗರ ಜನಜೀವನದ ಒಂದು ಅಂಗವಾಗಬೇಕೆನ್ನುವುದು ಅವರ ಆಶಯ. ಅವರ ಈ ಆಶಯ ಈಡೇರುವಂತೆ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡುವ, ಅದನ್ನು ಪ್ರಸಾರಮಾಡುವ ಅವಕಾಶ ಅಷ್ಟಾಗಿ ನನಗೆ ದೊರೆಯದಿದ್ದರೂ, ಸರ್ಕಾರದ ಆಡಳಿತದಲ್ಲಿ ಕನ್ನಡವನ್ನು ಬಳಸುವ

ಬಳಕೆಗೆ ತರುವ ಅವಕಾಶ ಸಾಕಪ್ಟು ಸಿಕ್ಕಿದೆ. ನಮ್ಮ ರಾಜ್ಯದ ಆಡಳಿತದಲ್ಲಿ ಕನ್ನಡದ ಪಾತ್ರ ಮತ್ತು ಸ್ಥಾನಗಳನ್ನು ಕುರಿತು ಇಲ್ಲಿ ಸ್ಥೂಲವಾಗಿ ಪ್ರಸ್ತಾಪಿಸುತ್ತಿದ್ದೇನೆ.

ನಮ್ಮ ದೇಶದ ಆಡಳಿತದಲ್ಲಿ ಇಂಗ್ಲಿಷ್ ಭಾಷೆಯ ಬಳಕೆ ಪ್ರಾರಂಭವಾಗಿ ಒಂದು ನೂರು ವರ್ಷಗಳಿಗಿಂತಲೂ ಸ್ವಲ್ಪ ಹೆಚ್ಚು ಕಾಲವಾಗಿದೆ. ಕನ್ನಡ ರಾಜ್ಯವೆಂಬುದು ಭಾರತದ ಪ್ರಾಚೀನ ರಾಜ್ಯಗಳಲ್ಲಿ ಒಂದು. ಸಾವಿರಾರು ವರ್ಷಗಳ ಆಡಳಿತ ಪರಂಪರೆಯಿರುವ ಈ ರಾಜ್ಯದಲ್ಲಿ ಹಿಂದಿನಿಂದಲೂ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಕನ್ನಡ ನಾಡಿನಲ್ಲಿ ದೊರೆತಿರುವ ಅನೇಕ ಶಾಸನಗಳು ಅಂದಿನ ಆಡಳಿತದ ರೀತಿ ನೀತಿಗಳನ್ನು ತಕ್ಕಮಟ್ಟಿಗೆ ನಿರೂಪಿಸುತ್ತವೆ. ಟಿಪ್ಪುಸುಲ್ತಾನನ ಕಾಲದಲ್ಲಿ ಪರ್ಷಿಯನ್ ಆಸ್ಥಾನ ಭಾಷೆಯಾಗಿತ್ತಾದರೂ, ಅಡಳಿತದಲ್ಲಿ ಕನ್ನಡ ಬಳಕೆಯಲ್ಲಿತ್ತು. ಇಂಗ್ಲಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಆಡಳಿತ ಭಾಷೆಯಾಯಿತಾದರೂ ಅರಮನೆಯ ನಿರೂಪಗಳೂ ಸ್ಥಳೀಯ ಅಧಿಕಾರಿಗಳಿಗೆ ನೀಡುವ ಆಜ್ಞೆಗಳೂ ವರದಿಗಳೂ ಕನ್ನಡದಲ್ಲಿಯೇ ಇರುತ್ತಿದ್ದವು. ಈಗಲೂ ಜಿಲ್ಲಾಮಟ್ಟದವರೆಗೆ ಆಡಳಿತ ಬಹುಮಟ್ಟಿಗೆ ಕನ್ನಡದಲ್ಲಿಯೇ ನಡೆಯುತ್ತದೆ. ಇಂಗ್ಲಿಷ್ ಭಾಷೆಯ ಆಕ್ರಮಣವಾದ ಮೇಲೆ ಕನ್ನಡದ ಬಳಕೆ ಅಲ್ಲಲ್ಲಿ ತಪ್ಪಿಹೋಯಿತೇ ಹೊರತು ಆಡಳಿತದಲ್ಲಿ ಕನ್ನಡದ ಬಳಕೆ ಸಂಪೂರ್ಣವಾಗಿ ನಿಂತ್ರು ಹೋಗಲಿಲ್ಲ. ಆದರೂ ಆಡಳಿತದ ಪ್ರಮುಖ ಕ್ಷೇತ್ರಗಳಲ್ಲೆಲ್ಲ ಕಾರ್ಯಕಲಾಪಗಳು ಇಂಗ್ಲಿಷಿನಲ್ಲೇ ನಡೆಯುತ್ತಿವೆ.

ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲಿಷು ರಾಜಭಾಷೆಯಾಗಿ ಭಾರತದಲ್ಲಿ ಬೇರುಬಿಡುತ್ತಾ ಹೊರಟಂತೆ ಪ್ರಾಂತೀಯ ಭಾಷೆಗಳು ಆಡಳಿತ ಭಾಷೆಗಳಾಗಲು ಅಸಮರ್ಥವಾದವೆಂಬ ಭಾವನೆ ಕೆಲವು ವಲಯಗಳಲ್ಲಿ ಮೂಡಿತು. ಒಂದಾನೊಂದು ಕಾಲಕ್ಕೆ ಇಂಗ್ಲೆಂಡಿನಲ್ಲಿಯೇ ಇಂಗ್ಲಿಷಿಗೆ ಪ್ರಧಾನ ಸ್ಥಾನವಿರಲಿಲ್ಲ. ಮಧ್ಯಯುಗದ ಯೂರೋಪಿನಲ್ಲಿ ಲ್ಯಾಟಿನ್ ಭಾಷೆಯೇ ಅತ್ಯುತ್ತಮ ಭಾಷೆಯೆಂಬ ಭಾವನೆಯಿತ್ತು; ದೇಶೀಯ ಭಾಷೆಗಳು ಅಮುಖ್ಯವೆನಿಸಿದ್ದವು. ಆಗ ಇಂಗ್ಲೆಂಡಿನಲ್ಲಿ ಫ್ರೆಂಚ್ ಭಾಷೆ ಆಡಳಿತ ಭಾಷೆಯಾಗಿಯೂ, ಲ್ಯಾಟಿನ್ ಸಾಹಿತ್ಯ ಸಂಸ್ಕೃತಿಗಳ ಭಾಷೆಯಾಗಿಯೂ ಇದ್ದವು. ಇಂಗ್ಲಿಷ್ ಮೂಲೆಗುಂಪಾಗಿತ್ತು. ಆದರೇನು? ಕಾಲಕ್ರಮದಲ್ಲಿ ಇಂಗ್ಲಿಷ್ ಸತ್ವಯುತವಾಗಿ ಬೆಳೆದು, ಇಂದು ಅದು ಅಂತರರಾಷ್ಟ್ರೀಯ ಭಾಷೆಯ ಸ್ಥಾನಕ್ಕೆ ಏರಿದೆ. ಅದರಂತೆಯೇ ಯಾವ ದೇಶೀಯ ಭಾಷೆಯಾದರೂ ಮಹೋನ್ನತವಾಗಿ ಬೆಳೆಯಬಲ್ಲದು. ಜನಮನ ಅದರತ್ತ ಹೊರಳಬೇಕು. 'ಮನಮುಳ್ಳೊಡುಂಟು ಮಾರ್ಗಂ.' ಶ್ರೀ ಎನ್. ಎಸ್. ಸುಬ್ಬರಾಯರು ಬೊಂಬಾಯಿಯಲ್ಲಿ ನಡೆದ 1936ರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣಮಾಡುತ್ತಾ 'ಸಾಮಾಜಿಕ ವ್ಯವಹಾರದಲ್ಲಿ, ಆಡಳಿತದಲ್ಲಿ, ಧಾರ್ಮಿಕ ಜೀವನದಲ್ಲಿ, ವ್ಯಾಪಾರ ವ್ಯವಹಾರಗಳಲ್ಲಿ, ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾಭ್ಯಾಸದಲ್ಲಿ ಕನ್ನಡ ಭಾಷೆಯನ್ನು ಬಳಸುವುದು ಆಗಬೇಕಾಗಿರುವ ಮುಖ್ಯ ಕೆಲಸ. ಇದು

ನಮ್ಮೆಲ್ಲರ ಆದ್ಯ ಕರ್ತವ್ಯ' ಎಂದು ಹೇಳಿದರು. ಬೆಳಗಾಮಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು 'ನಾವು ನಮ್ಮ ಸೀಮೆಯ ಆಡಳಿತದಲ್ಲಿ ಸಾಧ್ಯವಾದಲ್ಲೆಲ್ಲ ಕನ್ನಡವನ್ನು ಒಡನೆಯೆ ವಾಡಿಕೆಗೆ ತರಬೇಕು, ಇಂಗ್ಲಿಷಿನಲ್ಲಿ ಕೆಲಸ ನಡೆಯುವ ಸಂಸ್ಥೆಗಳಲ್ಲಿ, ನಮ್ಮಲ್ಲಿ ಹಿರಿಯರಾದವರನೇಕರು ಆ ಭಾಷೆಯ ಪರಿಚಯವಿಲ್ಲದ ಕಾರಣ ಭಾಗಿಗಳಾಗಲಾರರು. ಇಂಥವರ ಪ್ರಪಂಚ ಜ್ಞಾನದ ಫಲವು ನಮ್ಮ ಆಡಳಿತಕ್ಕೆ ಸಿಕ್ಕಬೇಕಾದರೆ ಕೆಲಸವೆಲ್ಲ ಕನ್ನಡದಲ್ಲಿ ನಡೆಯಬೇಕು. ಎಲ್ಲ ಜನರ ಜ್ಞಾನದ ಫಲವನ್ನೂ ಆಡಳಿತವು ಪಡೆಯುವುದೂ ಎಲ್ಲ ಜನಕ್ಕೂ ಆಡಳಿತ ಸ್ವರೂಪವು ತಿಳಿಯುವುದೂ ರಾಜ್ಯದ ಏಳಿಗೆಯ ಮೂಲ ತತ್ವಗಳು. ನಾವು ಈ ತತ್ವಗಳನ್ನು ಸಾಧಿಸಬೇಕಾದರೆ ಕನ್ನಡ ನಾಡಿನ ಆಡಳಿತದ ಕೆಲಸವೆಲ್ಲ ಕನ್ನಡದಲ್ಲಿ ನಡೆಯುವಂತೆ ಮಾಡಬೇಕು' ಎಂದಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಬಿಟ್ಟರೆ ನಾಗರಿಕ ವ್ಯವಹಾರಕ್ಕೆ ಅಪಾಯವಾಗುತ್ತದೆ—ಎಂಬ ಶಂಕೆ ಕೆಲವರಲ್ಲಿದೆ. ಈ ಆಂಗ್ಲವಾದಿಗಳು ಸಮಸ್ಯೆಯ ಮೂಲವನ್ನು ಕೆದಕಿನೋಡಿದಂತೆ ಕಾಣುತ್ತಿಲ್ಲ. ಇಂಗ್ಲಿಷ್ ಭಾಷೆ ವಿದ್ಯಾವಂತ ಭಾರತೀಯನ ಬೌದ್ಧಿಕ ಚಟುವಟಿಕೆಯ ಭಾಷೆಯಾಗಿರಬಹುದು. ಆದರೆ ಇಡೀ ಭಾರತದಲ್ಲಿ ಶೇಕಡಾ ಒಂದರಷ್ಟು ಮಾತ್ರ ಇಂಗ್ಲಿಷ್ ಭಾಷೆಯನ್ನು ಕಲಿತವರು. ಉಳಿದ ತೊಂಬತ್ತೊಂದು ಜನರಿಗೆ ತಿಳಿಯುವ ಹಾಗೆ ಆಡಳಿತ ನಡೆಯಬೇಕಾದರೆ ಪ್ರಾಂತೀಯ ಭಾಷೆಗಳೇ ಬೇಕು. ಕನ್ನಡನಾಡಿನ ಆಡಳಿತ ಕನ್ನಡದಲ್ಲಿಯೇ ಆಗಬೇಕಾದದು ಅವಶ್ಯ, ಅನಿವಾರ್ಯ.

ಇಂಗ್ಲಿಷ್ ಮತ್ತು ಪ್ರಾಂತೀಯ ಭಾಷೆಗಳ ಸ್ಥಾನಮಾನವನ್ನು ಕುರಿತು ಹೇಳುತ್ತಾ ಮಹಾತ್ಮಾಗಾಂಧಿಯವರು—English is a language of international commerce, it is the language of diplomacy and it contains many a rich literary treasure, it gives us an introduction to western thought and culture. For a few of us, therefore, a knowledge of English is necessary. They can carry on the departments of national commerce and international diplomacy, and for giving to the nation the best of western literature, thought and science. That would be the legitimate use of English, where as, today, English has usurped the dearest place in our hearts and dethroned our mothertongues. It is an unnatural place due to our unequal relation with English men. The highest development of the Indian mind must be possible without a knowledge of English. It is doing violence to the manhood, specially to the womanhood of India to encourage our boys and girls to think that an

entry into the best society is impossible without a knowledge of English. It is too humiliating a thought to be bearable. To get rid of the infatuation for English is one of the essentials of Swaraj" (Young India 1921) ಎಂದಿದ್ದಾರೆ.

ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂದು ಹೇಳಿದಮಾತ್ರಕ್ಕೆ ಇಂಗ್ಲಿಷು ಸಂಪೂರ್ಣವಾಗಿ ಹೋಗಬೇಕೆಂದೇನೂ ಅಲ್ಲ. ಅಂತರರಾಷ್ಟ್ರೀಯ ವ್ಯವಹಾರಕ್ಕೂ ಉನ್ನತ ವ್ಯಾಸಂಗಕ್ಕೂ ಇಂಗ್ಲಿಷು ಬೇಕು. ಭಾರತ ವಿವಿಧ ಭಾಷೆಗಳ ರಾಷ್ಟ್ರವಾದುದರಿಂದ ಪ್ರಾಂತ ಪ್ರಾಂತಗಳಿಗೂ, ಕೇಂದ್ರ ಸರ್ಕಾರಕ್ಕೂ ವ್ಯವಹಾರ ನಡೆಯಲು ಅನುಕೂಲಿಸುವಂತೆ ಇಂಗ್ಲಿಷ್ ಜೊತೆಗೆ ಒಂದು ಸಂಪರ್ಕ ಭಾಷೆಯೂ ಬೇಕು. ಆದರೆ ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿರುವ ಶ್ರೀ ಸಾಮಾನ್ಯರಿಗೆ ಪ್ರಾಂತ ಭಾಷೆಯಲ್ಲಿ ವ್ಯವಹಾರ ನಡೆಯುವುದು ಅತ್ಯಾವಶ್ಯಕ. ಪ್ರಜಾಪ್ರಭುತ್ವದ ಮೂಲ ಲಕ್ಷಣ ಹಾಗೂ ಧ್ಯೇಯವೆಂದರೆ ಜನಸಾಮಾನ್ಯರ ಸಂಪರ್ಕ. ಪಂಚಾಯತೀ ರಾಜ್ಯ ಪದ್ಧತಿಯಲ್ಲಿ ಸ್ಥಳೀಯ ಸಂಸ್ಥೆಗಳು, ತಾಲ್ಲೋಕು ಬೋರ್ಡು, ಗ್ರಾಮ ಪಂಚಾಯತಿಗಳು–ಇವುಗಳಲ್ಲಿ ಇಂಗ್ಲಿಷ್ ಬಳಸುವುದು ಅವ್ಯವಹಾರವಾಗುತ್ತದೆ. ಆಡಳಿತದಲ್ಲಿ–ಅದರಲ್ಲೂ ಗ್ರಾಮ, ತಾಲ್ಲೋಕು, ಜಿಲ್ಲೆಯ ಮಟ್ಟದ ಆಡಳಿತದಲ್ಲಿ ಕನ್ನಡದ ಬಳಕೆ ಅನುಕೂಲಕರವಾಗಿರುವಷ್ಟೇ ಅತ್ಯಾವಶ್ಯಕವಾಗಿಯೂ ಇದೆ. ಇದೆಲ್ಲವನ್ನೂ ಗಣನೆಗೆ ತಂದುಕೊಂಡು, ಮೈಸೂರು ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ನಿರ್ಧರಿಸಿ, ಅದಕ್ಕೆ ಪೂರ್ವಭಾವಿಯಾಗಿ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿತು. ಈ ವಿಚಾರವನ್ನು ಕೂಲಂಕಷವಾಗಿ ಪರ್ಯಾಲೋಚಿಸಿ ಸೂಕ್ತ ಸಲಹೆಗಳನ್ನು ನೀಡಲು ಸರ್ಕಾರ ಒಂದು ಸಮಿತಿಯನ್ನು ೧೯೫೬ರ ಜೂನ್ ತಿಂಗಳಲ್ಲಿ ರಚಿಸಿತು. ಆಡಳಿತದಲ್ಲಿ ಕನ್ನಡವನ್ನು ಬಳಕೆಗೆ ತರುವಾಗ ಇಂಗ್ಲಿಷ್, ಮರಾಠಿ, ತೆಲುಗು, ತಮಿಳು, ಉರ್ದು ಮುಂತಾದ ಭಾಷೆಗಳನ್ನು ಎಷ್ಟರ ಮಟ್ಟಿಗೆ ಬಳಸಬೇಕಾಗಬಹುದು, ಇಂಗ್ಲಿಷಿಗೆ ಬದಲಾಗಿ ಕನ್ನಡವನ್ನು ಬಳಕೆಗೆ ತರಲು ನಿರ್ದಿಷ್ಟವಾದ ಕಾಲಾವಧಿಯೆಷ್ಟಾಗಬಹುದು, ಕೇಂದ್ರ ಮತ್ತು ಇತರ ಪ್ರಾಂತಗಳೊಡನೆ ಪತ್ರವ್ಯವಹಾರಕ್ಕೆ ಹಿಂದಿಯನ್ನು ಬಳಸುವುದು—ಇವುಗಳ ಪರಿಶೀಲನೆ ಆ ಸಮಿತಿಯ ಕರ್ತವ್ಯವಾಗಿತ್ತು.

ಸರ್ಕಾರವು ರಚಿಸಿದ ಸಮಿತಿಗೆ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಯಾವ ಅಭ್ಯಂತರವೂ ಕಾಣಲಿಲ್ಲ. ರಾಜ್ಯಗಳ ಪುನರ್‌ವಿಂಗಡಣೆಯಾಗಿ ಭಾಷಾವಾರು ಪ್ರಾಂತಗಳ ರಚನೆಯಾದ ಮೇಲಂತೂ ಆದಷ್ಟು ಬೇಗ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಬೇಕೆಂದು ನಿಶ್ಚಯವಾಯಿತು. ಇಡೀ ಮೈಸೂರು ರಾಜ್ಯದಲ್ಲಿ ಅದನ್ನು ಬಳಕೆಗೆ ತರುವ ಮುನ್ನ ಆರಿಸಿದ ಕೆಲವು ಜಿಲ್ಲೆಗಳಲ್ಲಿ, ಗ್ರಾಮದಿಂದ ಜಿಲ್ಲಾ ಮಟ್ಟದವರೆಗಿನ ಆಡಳಿತವೆಲ್ಲ ಕನ್ನಡದಲ್ಲಿ ನಡೆಯಬೇಕೆಂದು ನಿರ್ಧಾರವಾಯಿತು. ಕಂದಾಯ, ವಿದ್ಯಾಭ್ಯಾಸ, ಅರಣ್ಯ, ಅಬ್ಕಾರಿ, ವ್ಯವಸಾಯ, ಸಹಕಾರ ಹಾಗೂ ಪೋಲೀಸು ಖಾತೆಗಳಲ್ಲಿ ಕನ್ನಡವನ್ನು ಬಳಸಬೇಕೆಂದು ಸಮಿತಿ ಸೂಚಿಸಿತು. ತುಮಕೂರು, ಚಿತ್ರದುರ್ಗ,

ಶಿವಮೊಗ್ಗ, ಬಿಜಾಪುರ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳನ್ನು ಇದರ ಪ್ರಯೋಗ ಕೇಂದ್ರಗಳಾಗಿ ಆಯ್ದುಕೊಳ್ಳಲಾಯಿತು.

೧೯೬೩ರಲ್ಲಿ 'ಮೈಸೂರು ಆಡಳಿತ ಭಾಷಾ ಕಾಯಿದೆ' ಎಂಬ ಹೆಸರಿನಿಂದ ಕಾನೂನನ್ನು ರಚಿಸಿ, ಶಾಸನ ಸಭೆಯಲ್ಲಿ ಅಂಗೀಕೃತವಾದಮೇಲೆ, ಅದೇ ವರ್ಷದ ಅಕ್ಟೋಬರ್ ೧೦ನೇ ತೇದಿಯ ಮೈಸೂರು ಗೆಜೆಟ್ಟಿನಲ್ಲಿ ಆ ಕಾನೂನನ್ನು ಪ್ರಕಟಿಸಲಾಯಿತು. ಈ ಕಾನೂನಿನಂತೆ ೧೯೬೩ನೆಯ ಸಾಲಿನಿಂದ ಕನ್ನಡ ಮೈಸೂರು ರಾಜ್ಯದ ಆಡಳಿತ ಭಾಷೆಯಾಗಿ ಆಚರಣೆಗೆ ಬಂದಿದೆ. ಆದರೆ ಸರ್ಕಾರ ಮತ್ತೊಂದು ನಿರ್ದೇಶನ ನೀಡುವವರೆಗೆ ಇಂಗ್ಲಿಷ್ ಭಾಷೆಯೂ ಬಳಕೆಯಲ್ಲಿರಬಹುದು.

'ಮೈಸೂರು ಆಡಳಿತ ಭಾಷಾ ಕಾಯಿದೆ' ಬಳಕೆಗೆ ಬರುವ ಮೊದಲು ಆರಿಸಿದ ಕೆಲವು ಜಿಲ್ಲೆಗಳಲ್ಲಿ ಕನ್ನಡವನ್ನು ಬಳಕೆಗೆ ತಂದಾಗಲೂ, ಅನಂತರವೂ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುವುದರಲ್ಲಿ ಕೆಲವು ಸಮಸ್ಯೆಗಳು ತಲೆದೋರಿದವು. ಆಡಳಿತಕ್ಕೆ ಆವಶ್ಯಕವಾದ ಶಬ್ದಸಂಪತ್ತು ಸಾಕಷ್ಟು ಇಲ್ಲದಿರುವುದೂ ಕಾಯಿದೆ ಕಾನೂನು ನಿಬಂಧನೆಗಳ ಕೈಪಿಡಿಗಳು ಇಲ್ಲದಿರುವುದೂ, ಕನ್ನಡದ ಶೀಘ್ರಲಿಪಿ ತಜ್ಞರೂ ಬೆರಳಚ್ಚು ಯಂತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದೂ — ಇವೇ ಆ ಸಮಸ್ಯೆಗಳಲ್ಲಿ ಮುಖ್ಯವಾದುವು.

ಕನ್ನಡ ಆಡಳಿತ ಭಾಷೆಯಾಗಿ ಯಶಸ್ವಿಯಾಗಬೇಕಾದರೆ ವ್ಯವಹಾರ ಕನ್ನಡವನ್ನು ಸಾಕಷ್ಟು ಪುಷ್ಟಿಗೊಳಿಸಲು ಕೆಲವು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಆಡಳಿತದ ವಿವಿಧ ರಂಗಗಳಲ್ಲಿ, ವಿದ್ಯಾಭ್ಯಾಸದ ಹಲವು ಹಂತಗಳಲ್ಲಿ ನಮಗೆ ಆವಶ್ಯಕವಾಗಿರುವ ಶಬ್ದ ಸಂಪತ್ತನ್ನು ಸೃಷ್ಟಿಸಿಕೊಳ್ಳಬೇಕು. ಹಾಗೆ ಸೃಷ್ಟಿಸಿ ಬಳಕೆಗೆ ತರುವ ಹೊಸ ಶಬ್ದಗಳನ್ನು ಜನಪ್ರಿಯವಾಗಿ ಮಾಡಬೇಕು. ಪದಗಳನ್ನು ಹೊಸದಾಗಿ ಸೃಷ್ಟಿಸುವಾಗ ಆದಷ್ಟು ಸ್ವಾಭಾವಿಕವಾಗಿ ಇರುವಂತೆ ಪದ ರಚನೆಯಾಗಬೇಕು. ಕೃತಕವಾದ ಅಥವಾ ಉಚ್ಚಾರಣೆಗೆ ಮತ್ತು ಸ್ಮರಣೆಗೆ ಕಷ್ಟವಾದ ಶಬ್ದಗಳನ್ನು ಬಳಸಬಾರದು. ಕನ್ನಡ ಭಾಷೆಯಲ್ಲಿ ಈಗಾಗಲೇ ಬಳಕೆಯಾಗಿಹೋಗಿರುವ ಇಂಗ್ಲಿಷ್ ಪದಗಳನ್ನು ಕನ್ನಡ ಪದಗಳೆಂದೇ ಪರಿಗಣಿಸಬೇಕು. ಕೋರ್ಟು, ಆಸ್ಪತ್ರೆ, ಮೀಟಿಂಗು, ಫೈಲು—ಇತ್ಯಾದಿ ಅನೇಕ ಇಂಗ್ಲಿಷ್ ಪದಗಳು ಕನ್ನಡ ಶಬ್ದ ಭಂಡಾರದಲ್ಲಿ ಈಗಾಗಲೇ ಸೇರಿ ಹೋಗಿವೆ. ಬಳಕೆಗೆ ಬಂದು ಎಲ್ಲರಿಗೂ ಚಿರಪರಿಚಿತವಾಗಿರುವ ಇಂತಹ ಪದಗಳಿಗೆ ಬದಲಾಗಿ ಅಪರಿಚಿತವಾದ ಕ್ಲಿಷ್ಟ ಸಂಸ್ಕೃತ ಪದಗಳನ್ನು ಸೃಷ್ಟಿಸಿ, ಬಳಕೆಗೆ ತರುವ ಪ್ರಯತ್ನ ಅಷ್ಟೇನೂ ಸ್ತುತ್ಯವಾದುದಲ್ಲ. ಭಾಷೆಯೊಂದರ ತುಷ್ಟಿ ಪುಷ್ಟಿಗಾಗಿ ಪರಭಾಷಾ ಪದಗಳನ್ನು ಸ್ವೀಕರಿಸುವುದು ತಪ್ಪೇನೂ ಅಲ್ಲ. ರಾಷ್ಟ್ರಕವಿ ಕುವೆಂಪು ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ 'ವಿವಿಧ ವಿಜ್ಞಾನ ಶಾಸ್ತ್ರಗಳಲ್ಲಿರುವ ಸಾವಿರಾರು ಪಾರಿಭಾಷಿಕ ಪದಗಳನ್ನು

ನಾವು ಹಾಗೆ ಹಾಗೆಯೇ ನಮ್ಮ ಲಿಪಿಯಲ್ಲಿ ಬರೆದು ವ್ಯವಹರಿಸಿದ್ದೇ ಆದರೆ ವಿಜ್ಞಾನ ವಿದ್ಯೆಗೂ ಕಾರ್ಯರಂಗದಲ್ಲಿ ಅದರ ಪ್ರಯೋಗಕ್ಕೂ ಸೌಲಭ್ಯವುಂಟಾಗುತ್ತದೆ' ಎಂದು ಹೇಳಿರುವ ಮಾತು ಗಮನಾರ್ಹವಾದುದು. ಭಾರತ ಸರ್ಕಾರವು ಇತ್ತೀಚೆಗೆ ಸಮಾಜ ಶಾಸ್ತ್ರಕ್ಕೆ ಸಂಬಂಧಿಸಿದ ಪದಗಳನ್ನು ಹಿಂದಿಗೆ ಅನುವಾದ ಮಾಡುವುದಕ್ಕಾಗಿ—ಅಗತ್ಯ ವಾದ ಹೊಸ ಪದಗಳನ್ನು ಸೃಷ್ಟಿಸುವುದಕ್ಕಾಗಿ — ಸೆಮಿನಾರೊಂದನ್ನು ನಡೆಸಿತು. ಇಂತಹ ಪರಿಶೋಧನಾ ಪ್ರವಚನ ಕನ್ನಡದಲ್ಲಿಯೂ ನಡೆಯಬೇಕು. ಕನ್ನಡ ವಿಶ್ವಕೋಶ ಮತ್ತು ನಿಘಂಟುಗಳು ಆದಷ್ಟು ಬೇಗ ಪ್ರಕಟವಾಗಿ, ಪ್ರಚಲಿತ ಮತ್ತು ಅವಶ್ಯಕ ಶಬ್ದಗಳನ್ನು ಜನರಿಗೆ ಪರಿಚಯಮಾಡಿಕೊಡಬೇಕು. ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಬಾನುಲಿಯಲ್ಲಿ ಭಾಷಣಗಳನ್ನೂ ಚರ್ಚಾಕೂಟಗಳನ್ನೂ ಏರ್ಪಡಿಸಬೇಕು. ವೃತ್ತ ಪತ್ರಿಕೆಗಳು ನಿತ್ಯವ್ಯವಹಾರಕ್ಕೆ ಅಗತ್ಯವಶ್ಯವಾದ ಶಬ್ದಕೋಶವನ್ನು ಪ್ರಕಟಿಸಬೇಕು. ವಾರ್ತಾ ಇಲಾಖೆಯು ತನ್ನ ಪತ್ರಿಕೆಗಳ ಮೂಲಕ ಶಬ್ದಗಳನ್ನು ಜನಪ್ರಿಯಗೊಳಿಸ ಬೇಕು. ಕನ್ನಡ ಟೈಪ್‌ರೈಟರ್‌ಗಳ ತಯಾರಿಕೆ ಮತ್ತು ಬಳಕೆ ಹೆಚ್ಚಬೇಕು. ಹಾಗೆಯೇ ಕನ್ನಡ ಶೀಘ್ರಲಿಪಿಕಾರರ ಸಂಖ್ಯೆಯೂ ಹೆಚ್ಚಬೇಕು. ಕನ್ನಡ ಶೀಘ್ರ ಲಿಪಿಯನ್ನು ಕಲಿಯಲು ಜನ ಮುಂದೆ ಬರುವಂತೆ ಅವರಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಬೇಕು ಎಲ್ಲ ವಿದ್ಯಾಸಂಸ್ಥೆಗಳಲ್ಲಿಯೂ ಆಫೀಸುಗಳಲ್ಲಿಯೂ ಕೆಳಗಿನ ಕೋರ್ಟುಗಳಲ್ಲಿಯೂ ಹಂತಹಂತವಾಗಿ ಪತ್ರವ್ಯವಹಾರ, ವರದಿ ಮುಂತಾದುವು ಕನ್ನಡದಲ್ಲಿಯೇ ನಡೆಯು ವಂತೆ ಏರ್ಪಡಿಸಬೇಕು. ಜನರಿಂದ ಬರುವ ಅರ್ಜಿಗಳಿಗೆ ಕನ್ನಡದಲ್ಲಿಯೇ ಉತ್ತರ ಹೋಗಬೇಕು. ಸಭೆ ಸಮ್ಮೇಳನಗಳಲ್ಲಿ ಕಾರ್ಯಕ್ರಮವೆಲ್ಲ ಕನ್ನಡದಲ್ಲಿಯೇ ನಡೆಯ ಬೇಕು. ಕೇವಲ ಕನ್ನಡಿಗರೇ ಭಾಗವಹಿಸಿ, ಸ್ಥಳೀಯ ಸಮಸ್ಯೆಗಳನ್ನು ಮಾತ್ರವೇ ಚರ್ಚಿಸುತ್ತಿರುವ ಸಭೆಗಳಲ್ಲಿಯೂ ಇಂಗ್ಲಿಷಿನಲ್ಲಿ, ಕೆಲವೊಮ್ಮೆ ತಪ್ಪು ಇಂಗ್ಲಿಷಿನಲ್ಲಿ ಮಾತನಾಡುವ ದುಷ್ಟ ಪದ್ಧತಿ ತೊಲಗಬೇಕು. ಕಾರ್ಯಕಲಾಪಗಳ ವರದಿ ಕನ್ನಡ ದಲ್ಲಿಯೇ ಇರಬೇಕು, ಅನೇಕ ಸಭೆಗಳ ಕಾರ್ಯಕ್ರಮ ಪಟ್ಟಿ ಇಂಗ್ಲಿಷಿನಲ್ಲಿರುವುದು ತಪ್ಪಿ ಕನ್ನಡದಲ್ಲಿರುವಂತಾಗಬೇಕು. ಇವೆಲ್ಲದರ ಜೊತೆಗೆ ಕನ್ನಡಜನ ತಮ್ಮ ಮಾತೃ ಭಾಷೆಯಲ್ಲಿ ಪರಿಣಿತರಾಗಲು ಪ್ರಯತ್ನಿಸಬೇಕು. ನಮ್ಮ ವಿದ್ಯಾರ್ಥಿಗಳು ಕನ್ನಡವಲ್ಲಿ ಅನುತ್ತೀರ್ಣರಾಗುವ ನಿದರ್ಶನಗಳು ಎಷ್ಟಿಲ್ಲ? ಅದು ಹಾಗಿರಲಿ, ನಾನು ಒಮ್ಮೆ ಇಂಗ್ಲಿಷಿನಲ್ಲಿ ಸರಿಯಾಗಿ ಬರೆಯಲು ಬರದ ಗುಮಾಸ್ತನೊಬ್ಬನಿಗೆ ಅವನು ಬರೆಯ ಬೇಕಾದುದನ್ನು ಕನ್ನಡದಲ್ಲಿಯೇ ಬರೆಯುವಂತೆ ಹೇಳಿದೆ. ಆತ ಬರೆದ. ಆದರೆ ಆತನ ಕನ್ನಡ ಆತನ ಇಂಗ್ಲಿಷಿಗಿಂತ ಸಹಿಸಲಸಾಧ್ಯವಾಗಿದ್ದುದರಿಂದ, ಆತನಿಗೆ ಮತ್ತೆ ಇಂಗ್ಲಿಷಿನಲ್ಲೇ ಬರೆಯುವಂತೆ ಹೇಳಬೇಕಾಯಿತು. ಕನ್ನಡ ಭಾಷಾಸಾಹಿತ್ಯಗಳಲ್ಲಿ ಎಲ್ಲರೂ ಪರಿಣಿತರಾಗದಿದ್ದರೆ ಹೋಗಲಿ, ವ್ಯಾವಹಾರಿಕ ಕನ್ನಡದ ಪರಿಜ್ಞಾನವಾದರೂ ಎಲ್ಲರಿಗೂ ಇರಬೇಕು. ಆಡಳಿತಕ್ಕೆ, ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನಾ ದರೂ ಕನ್ನಡದಲ್ಲಿ ಬರೆಯಲು, ಓದಲು, ಮಾತನಾಡಲು ಶಕ್ತರಾಗಿರಬೇಕು. ಕನ್ನಡ

ನಾಡಿನಲ್ಲಿ ಸರ್ಕಾರಿ ನೌಕರಿಗೆ ಸೇರಿದವನು ಕನ್ನಡವನ್ನು ಕಲಿಯಬೇಕೆಂಬ ನಿಬಂಧನೆಯಿದೆ. ಈ ನೌಕರರಿಗಾಗಿಯೇ ಪ್ರತ್ಯೇಕ ಪರೀಕ್ಷೆಗಳಾಗುತ್ತಿವೆ. ಅವರಿಗೆ ಶಿಕ್ಷಣಕ್ಕಾಗಿ ಸೂಕ್ತವಾದ ಏರ್ಪಾಟನ್ನೂ ಮಾಡಬೇಕು.

ಕನ್ನಡದ ಬಳಕೆ ಬೆಳವಣಿಗೆಗಳು ಬಲವಂತದಿಂದ ಆಗುವ ಕೆಲಸಗಳಲ್ಲ. ಕನ್ನಡಿಗರಿಗೆ ಕನ್ನಡದಲ್ಲಿ ಶ್ರದ್ಧೆ, ವಿಶ್ವಾಸ, ಅಭಿಮಾನಗಳು ಹೆಚ್ಚಬೇಕು. ಕನ್ನಡಿಗರು ಉತ್ಸಾಹಮೂರ್ತಿಗಳಾಗಿ ತಮ್ಮ ಭಾಷೆಯ ಬೆಳವಣಿಗೆಗೆ ಪ್ರಯತ್ನಿಸಬೇಕು. ಆಗ ಕನ್ನಡ ಆಡಳಿತ ಭಾಷೆ ಮಾತ್ರವಾಗದೆ ಜನರ ಅಂತಃಕರಣದ ಭಾಷೆಯೂ ಆಗುತ್ತದೆ.

ನಾವೆಲ್ಲರೊಡಗೂಡಿ, ಒಡನಾಡಿ ಕಲೆತು ।
ಕನ್ನಡದ ಸೇವೆಯಲಿ ನಮ್ಮ ಮೈಮರೆತು
ಕುಂದು ಕೊರತೆಗಳೊಂದಕಿಂಬಿಲ್ಲದಂತೆ ।
ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ
ದೇವಿ ಕರುಣಿಸಲಿ ವರವ ! ಕನ್ನಡದ ।
ದೇವಿ ಕೈಕೊಳಲಿ ಫಲವ

ತೀ.ನಂ.ಶ್ರೀ.

ಹೀಗಾದಾಗ ಮಾತ್ರ ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಧ್ಯೇಯ ಸಾಧನೆಯಾದೀತು ; ಇಂಥ ಹಿರಿಯರು ಪಟ್ಟ ಶ್ರಮ ಸಾರ್ಥಕವಾದೀತು.

(ಈ ಲೇಖನಕ್ಕಾಗಿ ' ಸವಿನೆನಪು ' ಗ್ರಂಥ ಸಂಪಾದಕರಿಗೆ ಕೃತಜ್ಞರಾಗಿದ್ದೇವೆ).

ನನಗೆ ತಿಳಿದ ವೃದ್ಧರು

ಸಿ. ನರಸಿಂಹಮೂರ್ತಿ

ಏಕೋ ಹೇಗೋ ಚಿಕ್ಕ ವಯಸ್ಸಿನಿಂದಲೂ ನನಗೆ ಹಲವು ವೃದ್ಧರ ಪರಿಚಯ ವಾಯಿತು. ನನ್ನ ವಯಸ್ಸಿಗೆ ಮೀರಿದ ಪರಿಚಯ ಅದು. ಅನೇಕ ವರ್ಷಗಳು ಕಳೆದ ಮೇಲೆ ಈಗ ಆ ಪರಿಚಯದ ನೆನಪು ಪರಿಚಯದ ಕಾಲಕ್ಕಿಂತ ಹೆಚ್ಚು ಸವಿಯಾಗಿದೆ. ಈ ಪರಿಚಯ ನನ್ನ ಜೀವನದ ಮೇಲೆ, ಮನೋವೃತ್ತಿಯ ಮೇಲೆ ಉಂಟುಮಾಡಿದ ಪರಿಣಾಮದ ಅರಿವು ತಿಳಿಯಾಗಿದೆ. ನನಗೆ ಪರಿಚಯಸ್ಥರಾಗಿದ್ದ ನಾಲ್ಕಾರು ವೃದ್ಧ ಮಹನೀಯರನ್ನು ಕುರಿತು ಕೆಲವು ಮಾತುಗಳನ್ನು ಬರೆಯುವುದು ಅಪ್ರಯೋಜಕವಾಗ ಲಾರದೆಂದು ಭಾವಿಸಿದ್ದೇನೆ.

ನಾನು ಬರೆಯತೊಡಗಿರುವುದು ಆ ಮಹನೀಯರ ಜೀವನ ಚರಿತ್ರೆಯನ್ನಲ್ಲ. ನನಗೆ ಅವರೊಡನೆ ಒದಗಿದ ಸಂಬಂಧದ ಕೆಲವು ನೆನಪುಗಳನ್ನು ಮಾತ್ರ. ಅವರ ಮಾನವೀಯತೆಯನ್ನೂ ಹೃದಯವಂತಿಕೆಯನ್ನೂ ದೇಶಾಭ್ಯುದಯದಲ್ಲಿ ಅವರಿಗಿದ್ದ ಆಸಕ್ತಿಯನ್ನು ಸೂಚಿಸುವ ನೆನಪುಗಳನ್ನು ಮಾತ್ರ ಬರೆಯುತ್ತೇನೆ.

1. ವೃದ್ಧ ಪಿತಾಮಹ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು

ನನ್ನ ತಲೆಮಾರಿನವರಿಗೆ ಮತ್ತು ನನ್ನ ಹಿಂದಿನ ಎರಡು ಮೂರು ತಲೆಮಾರಿ ನವರಿಗೆ ಮೈಸೂರಿನ ವೃದ್ಧಪಿತಾಮಹ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಹೆಸರು ಮನೆ ಮಾತು. ಅವರು ಎಲ್ಲರಿಗೂ ತಾತಯ್ಯ. ಮೈಸೂರಿಗೆಲ್ಲಾ ಒಬ್ಬರೇ ತಾತಯ್ಯ. ಅವರ ಹೆಸರನ್ನು ಕೇಳದವರಿಲ್ಲ. ಅವರನ್ನು ಸ್ವತಃ ತಿಳಿದವರು ಬಹು ಮಂದಿ. ಅವರಲ್ಲಿ ವಿದ್ಯಾಭ್ಯಾಸ ಮಾಡಿದವರು ಅಸಂಖ್ಯಾತ ವಿದ್ಯಾರ್ಥಿಗಳು. ಅವರಿಂದ ಸಹಾಯವನ್ನು ಪಡೆದವರು ಲಕ್ಷಾಂತರ ಜನ. ಅವರ ಹೆಸರನ್ನು ಹೇಳಿ ಕೊಂಡು ಜೀವನ ನಡೆಸುತ್ತಿರುವವರು ಎಷ್ಟೋ ಮಂದಿ.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ನನಗೆ ಅವರ ಮೊದಲ ಪರಿಚಯವಾಯಿತು. ಆದರೆ ನಾನು ಅವರ ವಿದ್ಯಾರ್ಥಿಯಲ್ಲ. ಅವರ ವಿದ್ಯಾರ್ಥಿಯಾಗುವಷ್ಟು ಬೇಗ

ನಾನು ಹುಟ್ಟಲಿಲ್ಲ. ನಾನು ವಿದ್ಯಾರ್ಥಿಯಾಗಿ ಪ್ರಪಂಚದ ತಿಳುವಳಿಕೆ ಸ್ವಲ್ಪ ಮಟ್ಟಿಗೆ ಬರುವುದರಲ್ಲಿ ಅವರು ಉಪಾಧ್ಯಾಯ ವೃತ್ತಿಯಿಂದ ವಿಶ್ರಮಿಸಿ ಬಹುದಿನಗಳಾಗಿ ಹೋಗಿದ್ದವು. ನಾನು ಜೂನಿಯರ್ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಓದುತ್ತಿರುವಾಗ ಕಾಲೇಜಿನಲ್ಲಿ ಫ್ರೀಷಿಪ್ಪಿಗೆ ಅರ್ಜಿ ಹಾಕುವುದಕ್ಕೆ ಒಂದು ಶಿಫಾರಸನ್ನು ಕೇಳಲು ತಾತಯ್ಯನವರಲ್ಲಿಗೆ ಹೋದೆ. ತಮಗೆ ತಿಳಿದವರಾಗಲೀ, ತಿಳಿಯದವರಾಗಲಿ ವಿದ್ಯಾರ್ಥಿಗಳು ಹೋಗಿ ಶಿಫಾರಸು ಕೇಳಿದರೆ ಅವರು ಇಲ್ಲವೆನ್ನುತ್ತಿರಲಿಲ್ಲ. ಶಿಫಾರಸನ್ನು ಕೇಳಿದವರಿಗೆಲ್ಲ ಇವನು ಬುದ್ಧಿವಂತ, ನಡತೆವಂತ, ಸಹಾಯಕ್ಕೆ ಅರ್ಹತೆ ಸಂಪೂರ್ಣವಾಗಿ ಇದೆ. ಇವನಿಗೆ ಸಹಾಯ ಮಾಡಿದರೆ ನಾನು ಕೃತಜ್ಞನಾಗಿರುತ್ತೇನೆ ಎಂದು ಬರೆದು ಕೊಡುತ್ತಿದ್ದರು. ಇಂತಹ ಶಿಫಾರಸುಗಳು ಫ್ರೀಷಿಪ್ಪು ಸ್ಕಾಲರ್‌ಷಿಪ್ಪುಗಳಿಗೆ ಅರ್ಜಿ ಹಾಕುವ ಕಾಲದಲ್ಲಿ ತಾತಯ್ಯನವರಿಂದ ಸಾವಿರಾರು ಹೋಗುತ್ತಿದ್ದವು. ಸರಿ ವೆಂಕಟಕೃಷ್ಣಯ್ಯನವರ ಸರ್ಟಿಫಿಕೇಟು ತಾನೆ ಎಂದು ಅರ್ಜಿಗಳನ್ನು ಪರಿಶೀಲಿಸುವವರು ಹೇಳುವಷ್ಟು ಮಟ್ಟಿನ ಸಂಖ್ಯೆಯಲ್ಲಿ ತಾತಯ್ಯನವರ ಶಿಫಾರಸುಗಳು ಬರುತ್ತವೆ ಎಂದು ನಮ್ಮ ಸ್ನೇಹಿತರಲ್ಲಿ ಅತಿಬುದ್ಧಿವಂತರು ಕೆಲವರು ಹೇಳುತ್ತಿದ್ದರು. ಈ ಪ್ರತೀತಿಗೆ ಪುಷ್ಟಿ ದೊರೆಯುವಂತೆ ಸರ್ಟಿಫಿಕೇಟುಗಳನ್ನು ಕೊಡುವ ಕೆಲಸ ಆದಷ್ಟು ತ್ವರೆಯಿಂದ ನಡೆಯಲೆಂದು ತಾತಯ್ಯನವರು ತಮ್ಮ ಮುದ್ರಣಾಲಯದಲ್ಲಿ ಸರ್ಟಿಫಿಕೇಟುಗಳ ಮಾದರಿಯನ್ನು ಅಚ್ಚು ಹಾಕಿಸಿಟ್ಟುಕೊಂಡಿದ್ದು ಬಂದು ಕೇಳಿದ ವಿದ್ಯಾರ್ಥಿಗಳ ಹೆಸರನ್ನು ಅದರಲ್ಲಿ ಬರೆಸಿ ಶಿಫಾರಸು ಕೊಟ್ಟು ಹರಸಿ ಕಳುಹಿಸುತ್ತಿದ್ದರು. ಕಡೆಕಡೆಗೆ ಶಿಫಾರಸು ಕೇಳುವವರ ಸಂಖ್ಯೆ ಮಿತಿಮೀರಿದಾಗ ಎಲ್ಲ ಪ್ರತಿಗಳಿಗೂ ರುಜು ಹಾಕುವುದಕ್ಕೆ ಅವರಿಗೆ ಸಾಧ್ಯವಾಗದೆ ಅವರ ಮುದ್ರೆಯನ್ನೊತ್ತಿ ಕೊಡುವ ಪದ್ಧತಿಯೂ ಇತ್ತು. ಸರ್ಟಿಫಿಕೇಟನ್ನು ಕೊಡುವ ರೀತಿ ಹೇಗಾದರೂ ಇರಲಿ ಬಂದು ಕೇಳಿದವರಿಗೆಲ್ಲಾ ಕೊಟ್ಟು ಹರಸಿ ಕಳುಹಿಸುವ ಮನೋಭಾವ ವಿದ್ಯಾರ್ಥಿಗಳಿಗೆ ಇದ್ದ. ಮಹಾ ಸುಯೋಗ. ಇಂಥ ಅರ್ಜಿಗಳಿಗೆ ವಿದ್ಯಾರ್ಥಿಗಳ ಸ್ಥಿತಿಗತಿಗಳನ್ನು ತಿಳಿದ ಇಬ್ಬರು ದೊಡ್ಡ ಮನುಷ್ಯರ ಸರ್ಟಿಫಿಕೇಟುಗಳನ್ನು ಅಪೇಕ್ಷಿಸುವುದು ವಾಡಿಕೆ. ಮುಕ್ಕಾಲುಪಾಲು ಅರ್ಜಿಗಳ ಜೊತೆಯಲ್ಲಿ ಹೋಗುತ್ತಿದ್ದ ಶಿಫಾರಸುಗಳಲ್ಲಿ ಒಂದು ತಾತಯ್ಯನವರದು. ಕೆಲವು ಕಾಲದ ಮೇಲೆ, ತಾತಯ್ಯನವರಲ್ಲಿ ನನ್ನ ಪರಿಚಯ ಚೆನ್ನಾಗಿ ಕುದುರಿದಾಗ ಸರ್ಟಿಫಿಕೇಟುಗಳ ಪ್ರತಿಗಳನ್ನು ತಯಾರಿಸುವ ಕೆಲಸವು ನನ್ನದಾಗಿತ್ತು. ಬಂದು ಕೇಳಿದವರಿಗೆಲ್ಲಾ ಸರ್ಟಿಫಿಕೇಟುಗಳನ್ನು ಹೀಗೆ ಕೊಡುವುದು ಸರಿಯೇ, ಅವರಿಗೆ ಅರ್ಹತೆ ಇದೆಯೋ ಇಲ್ಲವೋ ನಮಗೇನು ಗೊತ್ತು? ಎಂದು ಒಂದು ದಿನ ಧೈರ್ಯ ಮಾಡಿ ಕೇಳಿದೆ. ಫೀಸು ಕೊಡುವುದಕ್ಕೆ ಶಕ್ತಿ ಇದ್ದವರು ಯಾರು ಬಂದು ನಮ್ಮನ್ನು ಶಿಫಾರಸು ಕೇಳುತ್ತಾರೆ? ನಮ್ಮ ವಿದ್ಯಾರ್ಥಿಗಳು ಅಷ್ಟು

ಸುಳ್ಳು ಹೇಳುವವರಲ್ಲ. ಪಾಪ ಒಳ್ಳೆಯ ಹುಡುಗರು ಎಂದರು. ವಿದ್ಯಾರ್ಥಿಗಳ ಮೇಲೆ ಅಭಿಮಾನ ಅಪ್ಪರ ಮಟ್ಟಿಗಿತ್ತು ಅವರಿಗೆ.

ಪ್ರಸಕ್ತ ನಾನು ಕೇಳಿದ ಸರ್ಟಿಫಿಕೇಟಿನ ಸಂಗತಿಯನ್ನು ಬಿಟ್ಟು ಏನೋ ಹೇಳಲು ಹೋದೆ. ಎಲ್ಲರಿಗೂ ಕೊಡುವ ಸರ್ಟಿಫಿಕೇಟಿನ ಮಾದರಿಯನ್ನೇ ನಾನೂ ತೆಗೆದು ಕೊಂಡು ಹೋದರೆ ಅದು ನೂರರಲ್ಲಿ ಒಂದಾಗಬಹುದೆಂಬ ಶಂಕೆ ನನಗಿತ್ತು. ಹೆಚ್ಚು ಜನರಿಲ್ಲದಾಗ ಸಮಯ ನೋಡಿ ತಾತಯ್ಯನವರನ್ನೂ ಕೇಳಿದೆ. ಸರ್ಟಿಫಿಕೇಟಿನ ಪ್ರತಿ ಯೊಂದನ್ನು ತರಲು ಹತ್ತಿರವಿದ್ದವರೊಬ್ಬರಿಗೆ ಹೇಳಿದರು. '' ದಯಮಾಡಿ ಸೂಪರಿಂಟೆಂಡೆಂಟರಿಗೆ ಒಂದು ಕಾಗದವನ್ನು ಬರೆದು ಕೊಟ್ಟರೆ ಮಹದುಪಕಾರವಾಗುತ್ತೆ. ಅವರು ತಮ್ಮ ಹಳೆಯ ವಿದ್ಯಾರ್ಥಿಗಳಂತೆ. ತಮ್ಮ ಮೇಲೆ ಬಹಳ ಭಕ್ತಿ. ತಾವು ಒಂದು ಕಾಗದ ಕೊಟ್ಟರೆ ನನಗೆ ಅರ್ಧ ಫ್ರೀಷಿಪ್ಪಾದರೂ ಸಿಕ್ಕತ್ತೆ'' ಎಂದೆ. ನಿನಗೆ ಸಹಾಯವಾದರೆ ನನಗೆ ಸಂತೋಷ. ಕಾಗದವನ್ನೇ ಬರೆದುಕೊಡುತ್ತೇನೆ. ಆದರೆ ನಾನು ಸಾಮಾನ್ಯವಾಗಿ ಕೊಡುವ ಸರ್ಟಿಫಿಕೇಟುಗಳಿಗೆ ಅಷ್ಟು ಬೆಲೆಯಿಲ್ಲ ಅನ್ನು ಎಂದು ನಕ್ಕರು. ಹೌದೆಂದಾಗಲಿ ಇಲ್ಲವೆಂದಾಗಲಿ ಉತ್ತರ ಹೇಳಲು ಸಾಧ್ಯವಿಲ್ಲದೆ ನಾನೂ ಸ್ವಲ್ಪ ನಕ್ಕೆ. ನೀನೇ ಬರೆದುಕೋ ಹೇಳುತ್ತೇನೆ ಅಂದರು. ಅವರು ಹೇಳಿದ್ದನ್ನು ಬರೆದೆ. ಫ್ರೀಷಿಪ್ಪಿಗೆ ನನ್ನ ಅರ್ಹತೆಯನ್ನು ಸ್ವಲ್ಪ ವಿವರಿಸಿ, ಇವನಿಗೆ ಫ್ರೀಷಿಪ್ಪು ಕೊಟ್ಟರೆ ನನಗೆ ಸ್ವತಃ ಉಪಕಾರ ಮಾಡಿದ ಹಾಗಾಗುತ್ತೆ ಎಂದು ಕಾಗದದ ಕೊನೆಯಲ್ಲಿ ಬರೆಸಿದರು. ನಾನು ಅವರನ್ನು ನೋಡಿ ಮಾತಾಡಿದ್ದು ಮೊದಲನೆಯ ಸಲ. ನನ್ನ ವಿಷಯ ನನ್ನಿಂದಲೇ ತಿಳಿದಿದ್ದರು. ಆದರೂ ಏನು ದಯಾಳುತ್ವ! ನಾನು ಬರೆದ ಕಾಗದವನ್ನು ರುಜು ಮಾಡಲೆಂದು ಅವರ ಕೈಲಿ ಕೊಟ್ಟೆ. ಅದನ್ನು ಓದಿ ನೋಡಿ ಪರವಾ ಇಲ್ಲ. ಅಕ್ಷರ ಸುಮಾರಾಗಿ ಚೆನ್ನಾಗಿದೆ. ಸ್ಪೆಲಿಂಗ್ ಮಿಸ್ಟೇಕೂ ಇಲ್ಲ '' ಎಂದರು. ಆ ಕಾಲದಲ್ಲಿ ನನ್ನ ಅಕ್ಷರ ಸ್ವಲ್ಪ ಚೆನ್ನಾಗಿಯೇ ಇತ್ತೆಂದು ಅನ್ನಿಸುತ್ತದೆ. ಕಾಪಿ ಬರೆದ ಕೈ. ಕೆಲಸಕ್ಕೆ ಸೇರಿದ ಮೇಲೆ. ಅದರಲ್ಲೂ ಶೀಘ್ರ ಲಿಪಿಕಾರರಿಗೆ ಹೇಳಿ ಬರೆಯಿಸುವ ಅಭ್ಯಾಸ, ಅವಕಾಶ, ಬಲವಾದ ಮೇಲೆ ನಾನು ಬರೆಯುವ ಅಕ್ಷರ ಸ್ವಲ್ಪ ಹಾಗೆ ಹಾಗೆಯೆ. ಕೆಲವು ವೇಳೆ ನಾನು ಬರೆದದ್ದನ್ನು ನಾನೇ ಓದುವುದೂ ಕಷ್ಟವಾಗುತ್ತದೆ.

ತಾತಯ್ಯನವರನ್ನು ವಂದಿಸಿ ಅಪ್ಪಣೆಯಾದರೆ ಬರುತ್ತೇನೆ ಎಂದು ಹೇಳಿದೆ. ಅವರು ಸ್ವಲ್ಪಹೊತ್ತು ಸುಮ್ಮನಿದ್ದು ನಿನಗೆ ಪುರುಸೊತ್ತಿದ್ದರೆ. ಸ್ವಲ್ಪಹೊತ್ತು ನಮ್ಮ ಪ್ರೆಸ್ಸಿನಲ್ಲಿ ದಿನವೂ ಬಂದು ಕೆಲಸಮಾಡು. ನಾನು ಹೇಳಿದ್ದನ್ನು ಬರೆದುಕೊ. ನಿನಗೆ ತಿಳಿವಳಿಕೆಯೂ ಹೆಚ್ಚಬಹುದು. ತಿಂಗಳ ಕೊನೆಯಲ್ಲಿ ನನಗೇನಾದರೂ ಹಣ ಉಳಿದರೆ ನಿನಗೂ ಸ್ವಲ್ಪ ಹಣ ಕೊಡುತ್ತೇನೆ ಎಂದರು. ಇದು ನನಗೊಂದು ಅನಿರೀಕ್ಷಿತವಾದ ವರಪ್ರಸಾದವಾಯಿತು. ಬರಿ ಸರ್ಟಿಫಿಕೇಟಿಗೆ ಹೋದರೆ ಪ್ರತಿದಿನವೂ ಅವರ

ಸಾನ್ನಿಧ್ಯದಲ್ಲಿ ಕೆಲಸಮಾಡುವ ಅವಕಾಶ ದೊರೆಯಿತು. ಹಿಂದೆ ಮುಂದೆ ನೋಡದೆ ಖಂಡಿತ ದಿನಾ ಬರುತ್ತೇನೆಂದು ಹೇಳಿದೆ. ಆ ದಿನದಿಂದ ನಾನು ಅದರ 'ಬರಹಗಾರ' ಆದೆ. ಬೆಳಿಗ್ಗೆ ಏಳು ಗಂಟೆಗೆ ಹೋಗಿ ಒಂಬತ್ತೂವರೆಯವರೆಗೂ ಅವರು ಹೇಳಿದ ಲೇಖನಗಳನ್ನು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಬರೆಯುವುದು. ಆಮೇಲೆ ಕಾಲೇಜಿಗೆ ಹೋಗುವುದು. ಸಾಯಂಕಾಲ 6 ಗಂಟೆಗೆ ಹೋಗಿ 8-9 ಗಂಟೆಯವರೆಗೂ ಪ್ರೆಸ್ಸಿನಲ್ಲಿ ಅವರು ಪ್ರಕಟಿಸುತ್ತಿದ್ದ ವೃತ್ತಪತ್ರಿಕೆಗಳ ಪ್ರೂಫುಗಳನ್ನು ನೋಡುವುದು ಇವು 2–3 ವರ್ಷ ನನ್ನ ದಿನಚರಿಯಾಯಿತು.

ಪತ್ರಿಕೋದ್ಯಮದಲ್ಲಿ ತಾತಯ್ಯನವರದೇ ಎತ್ತಿದ ಕೈ. ಪತ್ರಿಕೋದ್ಯಮ ಯಾವಾಗಲೂ ಕಷ್ಟ. ಅವರ ಕಾಲದಲ್ಲಿ ಬಹು ಕಷ್ಟವಾಗಿತ್ತೆಂದರೆ ತಪ್ಪಾಗಲಾರದು. ಉಜ್ವಲ ದೇಶಭಕ್ತಿ, ಜನಸಾಮಾನ್ಯರ ಏಳಿಗೆಯಲ್ಲಿ ಅಪಾರವಾದ ಆಸಕ್ತಿ, ಸತ್ಯ ಧರ್ಮಗಳ ಪರಿಪಾಲನೆಯಲ್ಲಿ ನಿಷ್ಠೆ, ತಮ್ಮ ಆದರ್ಶಗಳನ್ನು ಮುಟ್ಟುವ ಪ್ರಯತ್ನದಲ್ಲಿ ಬರುವ ಕಷ್ಟನಿಷ್ಠುರಗಳಿಗೆ ನಿರ್ಲಕ್ಷ್ಯ ಇವು ತಾತಯ್ಯನವರ ಪತ್ರಿಕೋದ್ಯಮದಲ್ಲಿ ಕಂಡು ಬರುತ್ತಿದ್ದ ಮುಖ್ಯ ಗುಣಗಳು, "I uphold truth, justice and fairplay" ಎಂಬ ವಾಕ್ಯ ಅವರ ಪತ್ರಿಕೆಗಳ ಆದರ್ಶ. ಈ ಆದರ್ಶದ ಸಾಧನೆಗೆ ಅವರು ಕೆಲವು ಪತ್ರಿಕೆಗಳನ್ನು ನಡೆಸುತ್ತಿದ್ದರು. ನಾನು ಅವರೊಡನೆ ಕೆಲಸ ಮಾಡುತ್ತಿದ್ದಾಗ ನಡೆಯುತ್ತಿದ್ದ ಪತ್ರಿಕೆಗಳು Wealth of Mysore ಎಂಬ ದೈನಂದಿನ ಪತ್ರಿಕೆ, ಸಂಪದಭ್ಯುದಯ ಎಂಬ ಕನ್ನಡ ದೈನಂದಿನ ಪತ್ರಿಕೆ, ಸಾಧ್ವಿ ಎಂಬ ಕನ್ನಡ ವಾರಪತ್ರಿಕೆ. ಇಂಗ್ಲಿಷ್ ಮತ್ತು ಕನ್ನಡ ದೈನಂದಿನ ಪತ್ರಿಕೆಗಳಿಗೆ ಅವರು ಕೊಟ್ಟಿದ್ದ ನಾಮಧೇಯದಿಂದಲೇ ಮೈಸೂರಿನ ಆರ್ಥಿಕ ಅಭಿವೃದ್ಧಿಯಲ್ಲಿ ಅವರಿಗೆ ಎಷ್ಟು ಆಸಕ್ತಿಯಿತ್ತೆಂಬುದು ಗೊತ್ತಾಗುತ್ತದೆ. ಸಾಧ್ವಿ, ಅವರ ಧರ್ಮಪತ್ನಿಯವರು ಕಾಲವಾದ ನಂತರ ಆ ಮಹಿಳಾಮಣಿಯ ಜ್ಞಾಪಕಾರ್ಥವಾಗಿ ಪ್ರಾರಂಭವಾದ ಪತ್ರಿಕೆ ಎಂದು ಅಂದುಕೊಳ್ಳುತ್ತಿದ್ದುದನ್ನು ಕೇಳಿದ್ದೇನೆ. ಈ ಪತ್ರಿಕೆಗಳಲ್ಲಿ ದಿನಪತ್ರಿಕೆಗಳ ಆರ್ಥಿಕ ಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲ. ಆ ಕಾಲದಲ್ಲಿ ಜಾಹಿರಾತುಗಳ ವರಮಾನ ಅಷ್ಟೇನೂ ಹೆಚ್ಚಾಗಿರಲಿಲ್ಲ. ಗ್ರಾಮಾಂತರಗಳಲ್ಲಿ ಈ ಪತ್ರಿಕೆಗಳ ಪ್ರಸಾರವೂ ಅಷ್ಟು ಹೆಚ್ಚಾಗಿರಲಿಲ್ಲ. ಸಾಧ್ವಿ ಬಹುಮಟ್ಟಿಗೆ ಸಂಪದಭ್ಯುದಯ ದಿನ ಪತ್ರಿಕೆಯ ವಾರದ ಸಂಕಲನ, ಆದರೆ ಆ ಪತ್ರಿಕೆಗೆ ಗ್ರಾಮಾಂತರಗಳಲ್ಲಿ ಪ್ರಸಾರ ತಕ್ಕಮಟ್ಟಿಗಿತ್ತು. ಜಾಹಿರಾತಿನ ವರಮಾನವೂ ಸುಮಾರಾಗಿತ್ತು. 'ಸಾಧ್ವಿ' ಉಳಿದ ಪತ್ರಿಕೆಗಳನ್ನು ಸಾಕುತ್ತಾಳೆ ಎಂದು ತಾತಯ್ಯನವರು ಹೇಳುತ್ತಿದ್ದರು. ನಾನು ತಾತಯ್ಯನವರ ಕಾರ್ಯಾಲಯವನ್ನು ಸೇರಿದ ಸ್ವಲ್ಪ ದಿನಗಳ ಮೇಲೆ ಶ್ರೀಮಾನ್ ಬಿ. ಸಿ. ಶ್ರೀನಿವಾಸ ಅಯ್ಯಂಗಾರರ ಬೆಂಬಲದಿಂದ 'ನೇಚರ್ ಕ್ಯೂರ್' ಎಂಬ ಒಂದು ಮಾಸ ಪತ್ರಿಕೆಯೂ ಪ್ರಾರಂಭವಾಯಿತು. ಅದಕ್ಕೆ ಲೇಖನಗಳನ್ನು ತಾತಯ್ಯನವರೂ ಶ್ರೀನಿವಾಸ

ಅಯ್ಯಂಗಾರ್ಯರೂ ಒದಗಿಸುತ್ತಿದ್ದರು. ಅವನ್ನು ಅಚ್ಚು ಮಾಡಿಸುವ ಕೆಲಸ ಪ್ರತಿಗಳನ್ನೂ ಚಂದಾದಾರರಿಗೆ ರವಾನಿಸುವ ಕೆಲಸ ನನ್ನ ಪಾಲಿಗಿತ್ತು. ಇದರಲ್ಲಿ ಅಚ್ಚು ಮಾಡಿಸುವ ಕೆಲಸ ಸ್ವಲ್ಪ ಕಷ್ಟಸಾಧ್ಯವಾದುದು. ಬಿ. ಸಿ. ಶ್ರೀನಿವಾಸ ಅಯ್ಯಂಗಾರ್ಯರ ಮನೆಗೆ ಹೋಗಿ ಅವರ ಸಮಯ ಕಾಯ್ದು ಲೇಖನಗಳನ್ನು ತರುವುದು. ಅವರು ಹಳೆಯ ಕಾಲದ ನಿವೃತ್ತ ಆಫೀಸರು. ಅವರ ಊಟ, ನಿದ್ದೆ, ವಿಶ್ರಾಮ, ಇತರ ಕೆಲಸ ಇವುಗಳ ಲಗುಬಿಗು ನೋಡಿಕೊಂಡು ನಾನು ಅವರಿಂದ ಲೇಖನಗಳನ್ನು ತರಬೇಕಾಗಿತ್ತು. ವಿದ್ಯಾರ್ಥಿಯಾದ ನನಗೆ ಆಧುನಿಕ ಪ್ರಗತಿಯಲ್ಲಿ ವಿಶೇಷ ನಂಬಿಕೆ, ಶ್ರದ್ಧೆ. ನೇಚರ್ ಕ್ಯೂರ್ ಪದ್ಧತಿಯ ಅಡಿಯಾಳಗಳನ್ನು ಶ್ರೀ ಅಯ್ಯಂಗಾರ್ಯರ ಲೇಖನಗಳಿಂದ ಸ್ವಲ್ಪಮಟ್ಟಿಗೆ ಕಂಡುಕೊಂಡೆ. ಅವನ್ನು ಅಚ್ಚು ಹಾಕಿಸಿ, ಅವುಗಳ ಪ್ರೂಫನ್ನು ಓದಿ ಮಾಸಪತ್ರಿಕೆಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಕರ್ತವ್ಯ ನಿಷ್ಠೆಯ ಮನೋಭಾವವನ್ನೂ ಬಹುಮಟ್ಟಿಗೆ ಬೆಳೆಸ ಬೇಕಾಯಿತು. ಪ್ರೆಸ್ಸಿನಲ್ಲಿ ಇದರ ಮುದ್ರಣಕ್ಕೆ ಬಿಡುವು ಮಾಡಿಸಿಕೊಡುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಪತ್ರಿಕೆಯನ್ನು ಚಂದಾದಾರರಿಗೆ ಕಳುಹಿಸುವುದು ಅಷ್ಟೊಂದು ಕಷ್ಟವಲ್ಲ. ಏಕೆಂದರೆ, ಚಂದಾದಾರರಾಗಿದ್ದವರು ಹಲವರು ಮಾತ್ರವೇ. ಈ ಮಾಸ ಪತ್ರಿಕೆಯನ್ನು ನಡೆಸಿಕೊಂಡು ಬರುವುದಕ್ಕೆ ಎಲ್ಲ ಪದ್ಧತಿಗಳಲ್ಲೂ ಎಲ್ಲ ಪಂಥಗಳಲ್ಲೂ ಸ್ವಲ್ಪವಾದರೂ ಒಳ್ಳೆಯದಿದೆ, ಎಲ್ಲರಿಂದಲೂ ಒಳ್ಳೆಯದನ್ನು ಪಡೆಯೋಣ ಎಂದು ತಾತಯ್ಯನವರಿಗಿದ್ದ ಮೂಲ ಮನೋಭಾವವೇ ಕಾರಣ. ಈ ನೇಚರ್ ಕ್ಯೂರ್ ಪತ್ರಿಕೆಯ ವಿಷಯದಲ್ಲಿ ಒಂದು ಸ್ವಾರಸ್ಯವಾದ ಸಂಗತಿಯಿದೆ. ಅದನ್ನು ಆಮೇಲೆ ಹೇಳುತ್ತೇನೆ.

ತಾತಯ್ಯನವರು ನಡೆಸುತ್ತಿದ್ದ ಪತ್ರಿಕೆಗಳಿಗೆ ಸಂಪಾದಕರೆಂದು ಬೇರೆ ಒಬ್ಬ ಉತ್ಸವ ಮೂರ್ತಿ ಇರುತ್ತಿದ್ದರು. ವಾಸ್ತವವಾಗಿ ಇವರು ಪ್ರೆಸ್ಸಿನ ಮ್ಯಾನೇಜರು. ಹೆಸರಿಗೆ ಮಾತ್ರ ಸಂಪಾದಕರು. ತಾತಯ್ಯನವರೇ ಪತ್ರಿಕೆಗಳ ಮೂಲ ವಿಗ್ರಹ. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದ್ದಿತು.

Wealth of Mysore, ಸಂಪದಭ್ಯುದಯ ಇವುಗಳ ಬಹುಭಾಗ ಲೇಖನಗಳನ್ನು ತಾತಯ್ಯನವರೇ ಹೇಳಿ ಬರೆಯಿಸುತ್ತಿದ್ದರು. ಸಂಪಾದಕೀಯಗಳಲ್ಲದೆ ಉಳಿದ ಹಲವಾರು ಲೇಖನಗಳನ್ನು ಅಂಕಿತ ನಾಮಗಳಿಂದ ಬರೆಸುತ್ತಿದ್ದರು. ಅನೇಕ ವೇಳೆ ಸಂಪಾದಕರಿಗೆ ಪತ್ರಗಳನ್ನೂ ತಾವೇ ಹೇಳಿ ಬರೆಸುತ್ತಿದ್ದರು. ಆದರೆ ಆ ಬರವಣಿಗೆಗಳ ಶೈಲಿ, ಪದಗಳ ಜೋಡಣೆ, ಅವರಿಗೆ ಬಹು ಪ್ರಿಯವಾದ ಕೆಲವು ಪದ ವೃಂದಗಳ ಮೇಲು ಮೇಲಿನ ಉಪಯೋಗ ಇವೆಲ್ಲ ಲೇಖಕರ ವ್ಯಕ್ತಿತ್ವವನ್ನು ಸುಲಭವಾಗಿ ಬಯಲು ಮಾಡುತ್ತಿದ್ದವು. ಸಂಪಾದಕೀಯವಾಗಲಿ, ವಿಶೇಷ ಲೇಖನವಾಗಲಿ "ಬರೆದು ಬಂದುದು" ಆಗಲಿ, 'Special to Wealth of Mysore' ಆಗಲಿ, ಪತ್ರ

ವ್ಯವಹಾರವಾಗಲಿ, ಅವುಗಳಲ್ಲೆಲ್ಲಾ Truth, Justice, Fairplay, ಈ ಮಾತುಗಳು ನಾಲ್ಕಾರು ಸಲವಾದರೂ ಉಪಯೋಗವಾಗದಿರುತ್ತಿರಲಿಲ್ಲ.

ಬೆಳಗಿನಿಂದ ಹಿಡಿದು ಸಾಯಂಕಾಲದವರೆಗೂ ಒಂದೇ ಸಮನೆ ಲೇಖನಗಳನ್ನು ಬರೆಸುತ್ತಿದ್ದುದು ತಾತಯ್ಯನವರ ವೈಶಿಷ್ಟ್ಯ. ಲೇಖನಗಳನ್ನು ಬರೆಯಿಸಲು ಅವರು ಕುಳಿತುಕೊಳ್ಳುತ್ತಿದ್ದುದು ಲಕ್ಷ್ಮೀಪುರದಲ್ಲಿರುವ ಕೆ. ವಿ. ವಿ, ಪ್ರೆಸ್ಸಿನಲ್ಲಿ. ಅವರು ವಾಸಮಾಡುತ್ತಿದ್ದ ಭಾಗದ ಮುಂದಿನ ವರಾಂಡದಲ್ಲಿ. ಅಲ್ಲಿ ಅವರು ಕುಳಿತುಕೊಳ್ಳುವುದಕ್ಕೆ ಒಂದು ಮರದ ಕುರ್ಚಿ. ಅದಕ್ಕೆ ಬೆತ್ತವಾಗಲಿ ಮೆತ್ತೆಯಾಗಲಿ ಇರಲಿಲ್ಲ. ಅವರ ಎದುರಿಗೆ ಇನ್ನೊಂದು ಕುರ್ಚಿ, ಅದು ಲೇಖನಗಳನ್ನು ಬರೆದುಕೊಳ್ಳುವ ನನ್ನಂತಹವರಿಗೆ. ಹತ್ತಿರದಲ್ಲಿ ಇನ್ನೊಂದು ಕುರ್ಚಿ. ಅದು ಅವರನ್ನು ನೋಡಲು ಸಾಮಾನ್ಯವಾಗಿ ಪ್ರತಿದಿನವೂ ಬರುತ್ತಿದ್ದ ಡಾ॥ ರಂಗಣ್ಣ, ಶ್ರೀ ಅನಂತರಾವ್ ಇಂಥವರಿಗೆ.

